

# ಅನುಕರಣೀಯ ವಿದ್ಯಾರ್ಥಿ!

ಲೇಖಕ:—

ಬಾಳಕೃಷ್ಣ ದೇವಣಭಟ್ಟ ಜೋಶಿ.

Kathakunja Office
BEL...

[ ೧೯೨೪ ಇಸ್ವಿ.

ಬೆಲೆ ೪ ಆಣೆ.

...ವೀರ ಮುದ್ರಣಾಲಯ ಬೆಳಗಾವಿ.

V, 73 BUK
N24
3190

...ಭಂಡಾರ
ಪರಿಷತ್ತು
ಜೀವನ. ಚ 22
ಕ್ರ. ಸಂ 3190

3190

Digitized by ROJA MUTHIAH RESEARCH LIBRARY

3190 A-2,6 93

# ಅನುಕರಣೀಯ ವಿದ್ಯಾರ್ಥಿ!

'ಕೋಣೆಯನ್ನುಡುಗಿ ಸ್ವಚ್ಛಮಾಡುವದೇ ನನ್ನ
ಕಾಲೇಜದ ಪ್ರವೇಶಪರೀಕ್ಷೆಯು.'

ಬುಕರ ಟೀ ವಾಶಿಂಗ್ಟನ್.

ಭಾಷಾಂತರಕಾರ:—

**ಬಾಳಕೃಷ್ಣ ದೇವಣಭಟ್ಟ ಜೋಶಿ,**

**ಹೆಡ್ಡಮಾಸ್ತರ ಕನ್ನಡ ಗಂಡು ಹುಡುಗರ ಶಾಳಾ**

**ಹಿರೇಬಾಗೇವಾಡಿ, ಜಿ. ಬೆಳಗಾಂವ.**

( ಎಲ್ಲ ಹಕ್ಕುಗಳು ಕಾದಿಡಲ್ಪಟ್ಟವೆ. )

ಶ್ರೀಮಹಾವೀರ ಪ್ರೆಸ ಬೆಳಗಾಂವ.

ಪ್ರತಿ ೧೦೦೦.

ಶಕೆ ೧೮೫೮. ] [ ೧೯೩೬ ಇಸ್ವಿ.

ಬೆಲೆ ೪ ಆಣೆ.

ಕರ್ನಾಟಕ ಸಾಹಿತ್ಯ ಪರಿಷತ್ತು
ಪುಸ್ತಕ ಭಂಡಾರ
ಕ್ರಮ ಸಂಖ್ಯೆ 3190 ವರ್ಗ ಸಂಖ್ಯೆ
ತಾರೀಖು
ಬೆಲೆ
Kathakunja Office
BELGAUM,
Digitized by ROJA MUTHIAH RESEARCH LIBRARY

V, 73wBUK. N24

# ಅನುಕ್ರಮಣಿಕೆಯು.


| | | | |
|---|---|---|---|
| | | | ಪುಟ. |
| (೧) | ಭಾಷಾಂತರಕರ್ತೃವಿನ ಎರಡು ಮಾತುಗಳು | ... | ೧—೨ |
| (೨) | ಪ್ರಸ್ತಾವನೆಯು | ... ... ... ... | ೧—೩ |
| (೩) | ಉಪೋದ್ಘಾತ | ... ... ... ... | ೧—೪ |
| (೪) | ೧ನೇ ಪ್ರಕರಣ—ಬುಕರನ ಬಾಲ್ಯ | ... ... | ೧—೪ |
| (೫) | ೨ನೇ ,, ಮಾಲ್ಡನ್ನ ಊರಿಗೆ ಹೋದದ್ದು | ... | ೫-೧೦ |
| (೬) | ೩ನೇ ,, ಶಿಕ್ಷಣದ ಕುತೂಹಲವು | .... | ೧೦-೧೫ |
| (೭) | ೪ನೇ ,, ಹಂಪಟನ್ನ ಶಾಲೆಯ ಪ್ರವೇಶಪರೀಕ್ಷೆಯು | | ೧೫-೧೮ |
| (೮) | ೫ನೇ ,, ಹಂಪಟನ್ನ ಶಾಲೆಯ ಶಿಕ್ಷಣವು | ... | ೧೮-೨೮ |
| (೯) | ೬ನೇ ,, ವಿದ್ಯಾರ್ಥಿಗಳ ಕರ್ತವ್ಯ | .... | ೨೮-೩೧ |
| (೧೦) | ೭ನೇ ,, ಹಂಪಟನ್ನವನ್ನು ಬಿಟ್ಟಮೇಲೆ | ... | ೩೧-೩೬ |
| (೧೧) | ೮ನೇ ,, ಟಸ್ಕೇಜಿಯ ಶಾಲೆಯು | ... | ೩೬-೪೩ |
| (೧೨) | ೯ನೇ ,, ಉಪಸಂಹಾರ | ... ... | ೪೪-೪೮ |


A-3190

# ಭಾಷಾಂತರಕಾರನ ಎರಡು ಮಾತುಗಳು.

ದೇಶಪ್ರಗತಿಗೆ ಶಿಕ್ಷಣವು ಮೂಲಾಧಾರವಾದುದೆಂಬದರಲ್ಲಿ ವಾದವಿಲ್ಲ. ಪ್ರಸ್ತುತ ನಮ್ಮ ದೇಶದ ಶಿಕ್ಷಣದ ಅವನತಿಗೆ ಅನೇಕ ಕಾರಣಗಳಿದ್ದರೂ ನಮ್ಮ ವಿದ್ಯಾರ್ಥಿಗಳ ಸ್ವಾವಲಂಬನಾಭಾವವು ಮುಖ್ಯ ಕಾರಣವಾಗಿದೆ. ಶಿಕ್ಷಣದಲ್ಲಿರುವ ಈ ಕೊರತೆಯನ್ನು ಹೋಗಲಾಡಿಸುವ ಸಲುವಾಗಿ ನಮ್ಮಲ್ಲಿ ಅನೇಕರು ಅನೇಕ ಮಾರ್ಗಗಳಿಂದ ಪ್ರಯತ್ನ ಮಾಡಹತ್ತಿದ್ದಾರೆ. ಬುಕರ ಟೀ ವಾಶಿಂಗ್ಟನ್ನನೆಂಬ ಸ್ವಾವಲಂಬಿಯಾದ ವಿದ್ಯಾರ್ಥಿಯ ಚರಿತ್ರಪ್ರಕಾಶನವು ಈ ಪ್ರಯತ್ನಗಳಲ್ಲಿ ಒಂದಾಗಿದೆ. ಉತ್ತಮ ಚರಿತ್ರೆಗಳು ವಿದ್ಯಾರ್ಥಿಗಳ ಶೀಲಘಟನೆಯ ಕಾರ್ಯದಲ್ಲಿ ಅತ್ಯಂತ ಸಹಾಯಕಾರಿಯಾದವುಗಳೆಂದು ಬೇರೆ ಹೇಳಲಿಕ್ಕೆ ಬೇಡ. ನಮ್ಮ ಕನ್ನಡ ಭಾಷೆಯಲ್ಲಿಯೂ ಬುಕರ ಟೀ ವಾಶಿಂಗ್ಟನ್ನನ ಚರಿತ್ರೆಗಳು ಪ್ರಸಿದ್ಧವಾಗಿದ್ದರೂ ಅವು ವಿಸ್ತಾರವಾಗಿದ್ದು ಪ್ರೌಢವಾಚಕರಿಗೆ ಮಾತ್ರ ತಿಳಿಯುವಂತಿವೆ. ಅದರಿಂದ ಸಾಮಾನ್ಯ ವಿದ್ಯಾರ್ಥಿಗಳಿಗೂ ಕೂಡ ಬುಕರ ಟೀ ವಾಶಿಂಗ್ಟನ್ನನ ಅಲ್ಪ-ಸ್ವಲ್ಪ ಪರಿಚಯವಾಗುವಂತೆ ಈ ಪುಟ್ಟ ಪುಸ್ತಕವನ್ನು ಭಾಷಾಂತರಿಸಲಾಗಿದೆ. ವಿದ್ಯಾರ್ಥಿಗಳು ಈ ಚರಿತ್ರೆಯನ್ನು ಓದಿ ಬುಕರನ ಅನುಕರಣ ಮಾಡಲಿಕ್ಕೆ ಹವಣಿಸಿದರೆ ನನ್ನ ಪ್ರಯತ್ನವು ಸಫಲವಾಯಿತೆಂದೆಣಿಸುತ್ತೇನೆ. ಇರಲಿ.

ಈ ಪುಸ್ತಕವನ್ನು ಭಾಷಾಂತರಿಸಲಿಕ್ಕೆ ಅಪ್ಪಣೆಯನ್ನಿತ್ತು, ಔದಾರ್ಯವನ್ನು ತೋರ್ಪಡಿಸಿದ ನನ್ನ ವ್ಯವಸಾಯಬಂಧುಗಳಾದ ಮಿ. ಕೃ. ಬಾ. ಬಾಬರ, ಇವರಿಗೆ ನಾನು ಅತ್ಯಂತ ಉಪಕೃತನಾಗಿರುವೆನು. ಅದರಂತೆ ಅಲ್ಪಜ್ಞನಾದ ನನ್ನ ವಿನಂತಿಯನ್ನು ಮನ್ನಿಸಿ ತಮ್ಮ ಅಮೌಲ್ಯವಾದ ವೇಳೆಯನ್ನು ವೆಚ್ಚಮಾಡಿ ಪ್ರಸ್ತಾವನೆಯನ್ನು ಬರೆದು ಪ್ರೋತ್ಸಾಹಿಸಿದ ಮೇಹರ್ಬಾನ ವಾ. ರ. ಕಸಬೇಕರ ಬೀ. ಏ. ಆಶಿ. ಡೆಪೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಜಿಲ್ಹಾ ಬೆಳಗಾಂವ ಇವರ ಉಪಕಾರವನ್ನೆಷ್ಟು ಸ್ಮರಿಸಿದರೂ ಕಡಿಮೆಯೇ ಅದೆ. ಹಸ್ತಲಿಖಿತ ಪ್ರತಿಯನ್ನೋದಿ, ಅಲ್ಲಲ್ಲಿಗೆ ಆವಶ್ಯಕ ತಿದ್ದುಪಡಿಯನ್ನು ಮಾಡಿದ ಗುರುವರ್ಯ ಕ. ಗ. ವಿಜಾಪೂರಕರ, ಹೆಡ್‌ಮಾಸ್ತರ ಅಕ್ಕತಂಗೇರಹಾಳ ಇವರಿಗೆ ನಾನು ಸದೈವ ಋಣಿಯಾಗಿರುವೆನು. ಕೊನೆಗೆ, ಈ ಪುಟ್ಟ ಪುಸ್ತಕವನ್ನು ಅಲ್ಪಾವಕಾಶ

Digitized by ROJA MUTHIAH RESEARCH LIBRARY

ದಲ್ಲಿ ಅಂದವಾಗಿ ಮುದ್ರಿಸಿಕೊಟ್ಟದ್ದಕ್ಕಾಗಿ ಶ್ರೀಮಹಾವೀರ ಮುದ್ರಣಾಲಯದ ಒಡೆಯರಾದ ಶ್ರೀ. ಡೀ. ಪಿ. ಚೌಗುಲೆಯವರಿಗೂ ನಾನು ಆಭಾರಿಯಾಗಿರುವೆನು.

ಇದು ನನ್ನ ಪ್ರಥಮ ಪ್ರಯತ್ನವು. ಭಾಷಾಂತರವನ್ನು ಮಾಡುವಾಗ ಕೆಲವೆಡೆಯಲ್ಲಿ ಶಬ್ದಗಳಿಗೆ ಪ್ರತಿಶಬ್ದಗಳನ್ನಿಡುವ ಬದಲು ಅರ್ಥವಿಪರ್ಯಾಸವಾಗದಂತೆ ಬೇರೆ ಬೇರೆ ವಾಕ್ಯಗಳನ್ನು ಜೋಡಿಸಿರುವೆನೆಂಬದನ್ನು ಇಲ್ಲಿ ಹೇಳಬೇಕಾಗುವದು.

ಮನುಷ್ಯಕೃತಿಯು ಸದೋಷವಾದುದರಿಂದ ಈ ಪುಸ್ತಕದಲ್ಲಿಯೂ ತಪ್ಪುತಡಿಗಳಿರುವದು ಸ್ವಾಭಾವಿಕವು. ಇದು ಕೇವಲ ವಿದ್ಯಾರ್ಥಿಗಳನ್ನುದ್ದೇಶಿಸಿ ಬರೆದದ್ದಾದರೂ, ಅವರೂ ವಾಚನಾಭಿರುಚಿಯುಳ್ಳ ಬೇರೆ ಜನರೂ ಓದಿನೋಡಿ, ಗುಣಗಳನ್ನು ಸ್ವೀಕರಿಸಿ, ನಿರ್ಮಲಾಂತಃಕರಣದಿಂದ ದೋಷಗಳನ್ನು ತೋರಿಸಿ ನನ್ನಿಂದ ಇದಕ್ಕೂ ಹೆಚ್ಚಿಗೆ ಭಾಷಾಸೇವೆಯನ್ನು ಮಾಡಿಸಿಕೊಳ್ಳುವರೆಂದು ನಂಬಿದ

**ಬಾಗೇವಾಡಿ.**
ತಾ|| ೨-೮-೧೯೩೪.

ತಮ್ಮ
**ಬಾ. ದೇ. ಜೋಶಿ.**
ಹೆಡ್‌ಮಾಸ್ತರ ಬಾಗೇವಾಡಿ.

---

# ಪ್ರಸ್ತಾವನೆಯು.

ಬುಕರ ಟೀ. ವಾಶಿಂಗ್ಟನ್ನನ ಚರಿತ್ರವನ್ನು ಭಾಷಾಂತರಿಸಿದ ರಾ. ರಾ. ಬಾ. ದೇ. ಜೋಶಿ ಇವರು ನನ್ನ ವಿಶೇಷ ಪರಿಚಯದವರಿದ್ದು, ಇವರ ಕನ್ನಡ ಭಾಷಾಶೈಲಿಯು ಸರಸವಾಗಿರುವದೆಂಬದನ್ನು ನಾನು ಹಿಂದೆಯೇ ಮನಗಂಡಿದ್ದೆನು. ಕನ್ನಡ ಶಿಕ್ಷಕರಿಗೂ, ಕನ್ನಡ ವಾಚನಾಭಿರುಚಿಯುಳ್ಳ ಇತರ ಜನರಿಗೂ ಅವರ ಭಾಷಾಶೈಲಿಯ ಪರಿಚಯವು ಕನ್ನಡ ಶಾಲಾಪತ್ರಕದಲ್ಲಿ ಅವರು ಪ್ರಸಿದ್ಧಮಾಡಿದ ' ಬಾಲಶಿಕ್ಷಣ ' ಈ ಲೇಖಮಾಲೆಯಿಂದ ಆಗಿರಬಹುದು. ಆದರೆ ಅಂಥ ಲೇಖಗಳಿಂದಲೇ ಅವರು ಸಮಾಧಾನಪಡದೆ, ಸ್ವತಂತ್ರ ಪುಸ್ತಕಗಳನ್ನೇ ಬರೆಯಬೇಕೆಂಬ ಅವರಿಗೆ ಹುಟ್ಟಿದ ಅಭಿಲಾಷೆಯು ಬಹಳ ಸ್ತುತ್ಯವದೆ. ಮತ್ತು ಬಾಲ್ಯಾವಸ್ಥೆಯಲ್ಲಿದ್ದ ಕನ್ನಡಭಾಷೆಯ ಬೆಳವಣಿಗೆಗೆ ಪ್ರಸ್ತುತ ಗ್ರಂಥವನ್ನು ಬರೆದು ಪ್ರಯತ್ನಮಾಡಿದ ಬಗ್ಗೆ ಪ್ರತಿಯೊಬ್ಬ ಕನ್ನಡ ಭಾಷಾಭಿಮಾನಿಯು ಅವರ ಗೌರವ ಮಾಡುವದು ಯೋಗ್ಯವದೆ.

ತಮ್ಮ ವಿದ್ಯಾರ್ಥಿಗಳಲ್ಲಿ ಚಲೋ ಗುಣಗಳನ್ನು ಹುಟ್ಟಿಸಿ, ಅವರ ಉನ್ನತಿಯನ್ನು ಮಾಡಲಿಕ್ಕೆ ಪ್ರಯತ್ನಿಸುವದು, ಪ್ರತಿಯೊಬ್ಬ ಶಿಕ್ಷಕನ ಕರ್ತವ್ಯವಾಗಿರುವದು; ಆದರೆ ವ್ಯವಹಾರದಲ್ಲಿ ಆ ಕರ್ತವ್ಯವನ್ನು ಮನಃಪೂರ್ವಕ ನೆರವೇರಿಸುವವರು ತುಸು ಜನರೇ ಸಿಗುವರು. ರಾ. ಜೋಶಿ ಇವರು ಅಂಥ ತುಸು ಜನರೊಳಗೆ ಒಬ್ಬರಾಗಿರುವರು. ರಾ ಕೃ. ಬಾ. ಬಾಬರ ಇವರು ಮರಾಠೀ ಭಾಷೆಯಲ್ಲಿ ಬರೆದ ಒಬ್ಬ ಅನುಕರಣೀಯ ವಿದ್ಯಾರ್ಥಿಯ ( ಬುಕರ ಟೀ ವಾಶಿಂಗ್ಟನ್) ಚರಿತ್ರವನ್ನು ರಾ. ಜೋಶಿ, ಇವರು ಓದಿದ ಕೂಡಲೇ ಅಂಥ ಪುಸ್ತಕವು ತಮ್ಮ ಕನ್ನಡ ವಿದ್ಯಾರ್ಥಿಗಳಿಗೆ ಸಹ ಬೇಕೆಂಬ ಸ್ಫೂರ್ತಿಯು ಅವರಲ್ಲಿ ಹುಟ್ಟಿತು. ಕೂಡಲೇ ಅವರು ಅದರ ಭಾಷಾಂತರ ಮಾಡುವ ಕೆಲಸದಲ್ಲಿ ತೊಡಗಿ, ಅದನ್ನು ಪೂರ್ಣಮಾಡಿದರು. ಕಣ್ಣಮುಂದೆ ಹಾದುಹೋದ ವಿಷಯಗಳೊಳಗೆ, ಉಪಯುಕ್ತವಾದ ಕೆಲವು ವಿಷಯಗಳನ್ನು ಆರಿಸಿ, ಅವುಗಳನ್ನು ವಿದ್ಯಾರ್ಥಿಗಳ ಉಪಯೋಗಕ್ಕೆ ಹಚ್ಚುವದು, ಚಲೋ ಶಿಕ್ಷಕರ ಲಕ್ಷಣವಾಗಿರುವದು. ಈ ಲಕ್ಷಣವು ರಾ. ಜೋಶಿಯವರಲ್ಲಿ ಕಂಡುಬಂದಿರುವದು. ಅವರು ಓದಿದ ಬುಕರ ಟೀ

Digitized by ROJA MUTHIAH RESEARCH LIBRARY

ವಾಶಿಂಗ್ಟನ್ನನ ಚರಿತ್ರೆಯು ಪ್ರತಿಯೊಂದು ರೀತಿಯಿಂದ ವಿದ್ಯಾರ್ಥಿಗಳಿಗೆ ಅನುಕರಣೀಯವಾಗಿದ್ದಿತು. ತೀರ ಬಡತನದಿಂದ ಜೀವನಮಾಡುವ ಒಂದು ನೀಚ ಕುಟುಂಬದಲ್ಲಿ ಜನ್ಮಹೊಂದಿ, ಕೇವಲ ಉದ್ಯೋಗಪ್ರಿಯತೆ, ದೃಢನಿಶ್ಚಯ, ಸಹನಶೀಲತೆ ಮತ್ತು ಸಮಾಧಾನವೃತ್ತಿ ಈ ಮೊದಲಾದ ಗುಣಗಳಿಂದ, ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಬಹುಮಾನದ ಅತ್ಯುಚ್ಚ ಶಿಖರಕ್ಕೆ ಮುಟ್ಟಿದ ಬುಕರ ಟೀ ವಾಶಿಂಗ್ಟನ್ನನ ಉದಾಹರಣವನ್ನು ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಮುಂದೆ ಇಟ್ಟುಕೊಂಡರೆ ಅವನ ಕಡೆಯಿಂದ ಯಾವದಾದರೂ ಹೆಚ್ಚಿನ ಕೆಲಸವು ಆಗದೆ ಇರಲಿಕ್ಕಿಲ್ಲ. ಮರಾಠೀ ವಿದ್ಯಾರ್ಥಿಗಳಿಗೆ ರಾ ಕೃ ಬಾ. ಬಾಬರ ಇವರು ಇಂಥ ಉದಾಹರಣವನ್ನು ಮುಂದೆ ಇಟ್ಟಿರುವರು. ರಾ. ಜೋಶಿ ಇವರು ಕನ್ನಡ ವಿದ್ಯಾರ್ಥಿಗಳ ಮುಂದೆ ಅಂಥವನ ಉದಾಹರಣವನ್ನು ತಮ್ಮ ಸರಳ ಮತ್ತು ಸರಸವಾದ ಭಾಷೆಯಿಂದ ಇಟ್ಟದ್ದರಿಂದ ಅವರಲ್ಲಿ ಆ ಸತ್ಪುರುಷನು ಮಾಡಿದ ಹಾಗೆ ತಮ್ಮ ಉನ್ನತಿಯನ್ನು ಮಾಡಿಕೊಳ್ಳುವ ಜಾಗ್ರತೆಯು ಉತ್ಪನ್ನವಾಗದೆ ಇರಲಿಕ್ಕಿಲ್ಲ.

ತಾನು ಗಳಿಸಿದ ಜ್ಞಾನವನ್ನು ತನ್ನಲ್ಲಿಯೇ ಇಡದೆ, ಅದರ ಉಪಯೋಗವನ್ನು ಎರಡನೆಯವರಿಗೆ ಮಾಡಿಕೊಡುವದು ಪ್ರತಿಯೊಬ್ಬ ಸುಶಿಕ್ಷಿತನ ಕರ್ತವ್ಯವಾಗಿರುವದು. ಈ ಪ್ರಕಾರದ ಲವಲವಿಕೆಯು ಯಾರಲ್ಲಿ ಹೆಚ್ಚು ಪ್ರಮಾಣದಿಂದ ಇರುತ್ತದೋ, ಅವರೇ ತಮ್ಮ ಸಮಾಜದಲ್ಲಾಗಲಿ, ದೇಶದಲ್ಲಾಗಲಿ ಏನಾದರೂ ಹೆಚ್ಚಿನ ಕೆಲಸವನ್ನು ಮಾಡುವರು. ಇಂಥ ಲವಲವಿಕೆಯ ಬೀಜಾರೋಪಣವು ಪ್ರಸ್ತುತ ಗ್ರಂಥದಿಂದ ರಾ. ಜೋಶಿಯಲ್ಲಿ ಆಗಿರುವದು. ತಮ್ಮ ಜ್ಞಾನವನ್ನು ಕೇವಲ ತಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಮಾತ್ರ ಕೊಟ್ಟು, ಅವರು ನೀತಿವಂತರೂ, ಮಹತ್ವಾಕಾಂಕ್ಷಿಗಳೂ ಆಗುವ ಹಾಗೆ ಅವರು ಪ್ರಯತ್ನಮಾಡಿದ್ದರೆ, ಅವರು ವಿಶೇಷವೇನೂ ಮಾಡಿದ ಹಾಗೆ ಆಗುತ್ತಿದ್ದಿಲ್ಲ. ಆದರೆ ಇಡೀ ಕನ್ನಡ ವಿದ್ಯಾರ್ಥಿವರ್ಗದಲ್ಲಿ, ಬುಕರ ಟೀ ವಾಶಿಂಗ್ಟನ್ನನ ಅನುಕರಣ ಮಾಡುವ ಪ್ರೇರಣೆಯನ್ನು ಪ್ರಸ್ತುತ ಗ್ರಂಥಲೇಖನದಿಂದ ಅವರು ಹುಟ್ಟಿಸಿದ್ದರಿಂದ ಈ ತಮ್ಮ ಕರ್ತವ್ಯಕ್ಷೇತ್ರವನ್ನು ಬೆಳಿಸಿದ ಬಗ್ಗೆ ಹೆಚ್ಚಿನ ಯೋಗ್ಯತೆಯ ಸುಶಿಕ್ಷಿತ ವರ್ಗದ ಮಾಲೆಯಲ್ಲಿ ಅವರನ್ನು ಹಾಕಲಿಕ್ಕೆ ಅಡ್ಡಿಯಿಲ್ಲ. ಆದರೆ ಸಮಾಜಸೇವೆಗಾಗಿ ಮಾಡಿದ ಈ ತುಸು ಕೆಲಸದಿಂದಲೇ ಅವರು ಸಮಾಧಾನಬಡದೆ ಅವರು ಈ ಪ್ರಕಾರದ ಗ್ರಂಥ

Digitized by ROJA MUTHIAH RESEARCH LIBRARY



ಲೇಖನದಿಂದಾಗಲಿ, ಇತರ ದೃಷ್ಟಿಯಿಂದಾಗಲಿ ಹೆಚ್ಚೆಚ್ಚು ಸಮಾಜಸೇವೆಯನ್ನು ಮಾಡಿ ಹೆಸರು ಪಡೆಯಬೇಕೆಂದು ನಾನು ಅಪೇಕ್ಷಿಸುತ್ತೇನೆ.

ರಾ. ಜೋಶಿ ಇವರು ಒಬ್ಬ ಪ್ರಸಿದ್ಧ ಶಿಕ್ಷಕರೆಂದು ಎಲ್ಲ ಶಿಕ್ಷಕವರ್ಗದಿಂದ ತಿಳಕೊಳ್ಳಲ್ಪಟ್ಟಿರುವರು. ಈ ತಿಳುವಳಿಕೆಯು ಈ ಗ್ರಂಥಲೇಖನದಿಂದ ದೃಢೀಕರಿಸಲ್ಪಟ್ಟದೆ. ಯಾಕಂದರೆ ವಿದ್ಯಾರ್ಥಿಗಳನ್ನು ಯೋಗ್ಯ ನಾಗರಿಕರನ್ನಾಗಿ ಮಾಡುವದು ಅಂಥ ಶಿಕ್ಷಕನ ಆದ್ಯ ಕರ್ತವ್ಯವಾಗಿರುವದರಿಂದ, ಈ ಕರ್ತವ್ಯವು ಅವರಿಂದ " ಅನುಕರಣೀಯ ವಿದ್ಯಾರ್ಥಿ "ಯ ಲೇಖನದಿಂದ ಕೆಲವುಮಟ್ಟಿಗೆ ಜರುಗಿಸಲ್ಪಟ್ಟಿರುವದು. ಎಲ್ಲ ಶಿಕ್ಷಕರು ಅವರು ಮಾಡಿದ ಈ ಪ್ರಯತ್ನಕ್ಕೆ ತಲೆದೂಗಿ, ತಮ್ಮ ವಿದ್ಯಾರ್ಥಿಗಳ ಮುಂದೆ ಈ ಅನುಕರಣೀಯ ವಿದ್ಯಾರ್ಥಿಯನ್ನಿಟ್ಟು ಅವರಿಗೆ ಪ್ರೋತ್ಸಾಹನ ಕೊಡುವರೆಂದು ನಂಬಿದ್ದೇನೆ. ಈ ಪುಸ್ತಕವು ಕೇವಲ ಭಾಷಾಂತರವಾದರೂ, ಅವರ ಈ ಚಿಕ್ಕ ಪ್ರಯತ್ನಕ್ಕೆ ಶಿಕ್ಷಕರೂ, ಕನ್ನಡಭಾಷಾಭಿಮಾನಿಗಳೂ ಯೋಗ್ಯ ಅನುಕೂಲತೆಯನ್ನು ಕೊಟ್ಟರೆ, ಮುಂದೆ ಸ್ವತಂತ್ರ ಗ್ರಂಥಗಳನ್ನು ಬರೆಯುವ ಸಾಮರ್ಥ್ಯವೂ, ಜಾಗ್ರತೆಯೂ ಅವರಲ್ಲಿ ಹುಟ್ಟುವದು. ಈ ಕೆಲಸವನ್ನು ಅವರು ಮಾಡುವರೆಂದು ನಂಬಿ, ಈ ಚಿಕ್ಕ ಪ್ರಸ್ತಾವನೆಯನ್ನು ನಾನು ಮುಗಿಸುತ್ತೇನೆ.

**ಮು. ಖಾ. ಹುಬ್ಬಳ್ಳಿ.**
೨೫-೭-೨೪.

**ವಾ. ರ. ಕಸಬೇಕರ.**
ಆಸಿ. ಡೆ. ಎ. ಇನ್‌ಸ್ಪೆಕ್ಟರ, ಜಿಲ್ಹಾ ಬೆಳಗಾಂವ.



« ಬುಕರ ಟೀ ವಾಶಿಂಗ್ಟನ್ನ »

C. S. P. P.

Digitized by ROJA MUTHIAH RESEARCH LIBRARY

# ಅನುಕರಣೀಯ ವಿದ್ಯಾರ್ಥಿಯು!

## ಉಪೋದ್ಘಾತ.

ತೀರ ಬಡತನದ ಸ್ಥಿತಿಯಲ್ಲಿ ಹಾಗು ಕೀಳಜಾತಿಯಲ್ಲಿ ಹುಟ್ಟಿ ಕೇವಲ ತನ್ನ ವಿದ್ಯಾಭ್ಯಾಸದ ಬಲದಿಂದಲೇ ಯಾವನು ತನ್ನ ಮತ್ತು ತನ್ನ ಜಾತಿಯ ಹಾಗೂ ಪರಂಪರೆಯಿಂದ ತನ್ನ ರಾಷ್ಟ್ರದ ಉನ್ನತಿಯನ್ನು ಮಾಡುವನೋ, ಅಂಥ ವಿದ್ಯಾರ್ಥಿಯು ಅನುಕರಣೀಯ ವಿದ್ಯಾರ್ಥಿಯ. ಇಂಥ ವಿದ್ಯಾರ್ಥಿಗಳ ಚರಿತ್ರೆಯು ಪ್ರತಿಯೊಬ್ಬ ವಿದ್ಯಾರ್ಥಿಗೆ ಮಾದರಿಯದಾಗುವದು. ಅರ್ವಾಚೀನ ಕಾಲದಲ್ಲಿ ಇಂಥ ಮಾದರಿಯ ಒಬ್ಬ ವಿದ್ಯಾರ್ಥಿಯು ಆಗಿಹೋದನು. ಅವನ ಹೆಸರು ಬುಕರ ಟೀ ವಾಶಿಂಗ್ಟನ್. ಇವನ ಚರಿತ್ರೆಯು ಜಗತ್ತಿನೊಳಗಿನ ಬೇಕಾದ ಧರ್ಮದ ಹಾಗೂ ಬೇಕಾದ ಜಾತಿಯ ವಿದ್ಯಾರ್ಥಿಗಳಿಗೆ ಅತ್ಯಂತ ಉಪಯೋಗವುಳ್ಳದ್ದಾದ್ದರಿಂದ, ಅದನ್ನೇ ಈ ಪುಸ್ತಕದೊಳಗೆ ಸ್ವಲ್ಪದರಲ್ಲಿ ಬರೆಯಲಾಗಿದೆ.

ಬುಕರ ಟೀ ವಾಶಿಂಗ್ಟನ್‌ನ ಚರಿತ್ರೆಯೊಳಗಿನ ವಿಶೇಷ ಸಂಗತಿ ಏನಂದರೆ—ಜಗತ್ತಿನೊಳಗಿನ ಯಾವನೊಬ್ಬ ವಿದ್ಯಾರ್ಥಿಯು ಇವನಷ್ಟು ಕೀಳುಸ್ಥಿತಿಯವನಾಗಿರಲಿಕ್ಕಿಲ್ಲ. ಇವನು ನಿಗ್ರೋಜಾತಿಯವನಾಗಿದ್ದ. ಇವನ ತಾಯಿಯು ಒಬ್ಬ ಯುರೋಪಿಯನ್ ಗೃಹಸ್ಥನ *ಗುಲಾಮಳಾಗಿದ್ದಳು. ಇಂಥ ಗುಲಾಮಳಾದ ತಾಯಿಯ ಹೊಟ್ಟೆ

* ಪೂರ್ವಕಾಲದಲ್ಲಿ ಕಾಳಗದೊಳಗೆ ಸೆರೆಸಿಕ್ಕ ಜನರನ್ನು ಪೇಟೆಯಲ್ಲಿ ದನಗಳಂತೆ ಮಾರುತ್ತಿದ್ದರು. ಹಾಗೂ ಕೊಂಡವರಾದರೂ ಇವರನ್ನು ದನಗಳಂತೆಯೇ ನಡೆಯಿಸಿಕೊಳ್ಳುತ್ತಿದ್ದರು. ಮಾರಲ್ಪಡುವ ಈ ಸೆರೆಯಾಳುಗಳಿಗೆ ಗುಲಾಮರೆಂಬ ಹೆಸರಿತ್ತು. ಆಫ್ರಿಕಾ ಖಂಡದೊಳಗಿನ ನಿಗ್ರೋ, ಅಥವಾ ಹಬಸಿ ಜಾತಿಯ ಕಪ್ಪುವರ್ಣದ ಜನರನ್ನು ಅಮೇರಿಕೆಯಲ್ಲಿರುವ ಯುರೋಪಿಯನ್ನರು

Digitized by ROJA MUTHIAH RESEARCH LIBRARY

ಯಲ್ಲಿ ಬುಕರಟೀ ವಾಶಿಂಗ್ಟನ್ನನ ಜನ್ಮವಾಯಿತು. ಗುಲಾಮಳಾದ್ದರಿಂದ ಇವನ ತಾಯಿಯು ಬೇರೆ ಬೇರೆ ಧನಿಕರ ಮನೆಯಲ್ಲಿ ಕೆಲಸ ಮಾಡಬೇಕಾಗುತ್ತಿತ್ತು. ಅವರೆಲ್ಲರೂ ಅವಳನ್ನು ಇಟ್ಟುಕೊಂಡ ಹೆಂಗಸಿನಂತೆ ನಡೆಯಿಸಿಕೊಳ್ಳುತ್ತಿದ್ದರು! ಆದ್ದರಿಂದ ಬುಕರಟೀ ವಾಶಿಂಗ್ಟನ್ನನ ತಂದೆಯು ಇಂಥವನೇ ಎಂದು ಅವನ ತಾಯಿಗೆ ಸಹ ಹೇಳಲಿಕ್ಕೆ ಬರುವಂತಿದ್ದಿಲ್ಲ. ಯಾವ ಅಮೇರಿಕದಲ್ಲಿ ಬುಕರನ ಜನ್ಮವಾಯಿತೋ ಅಲ್ಲಿ ನಿಗ್ರೋಜನರು ಬಹಳ ಕೀಳುತರದವರೆಂದು ತಿಳಿ

---

ಪ್ರಥಮತಃ ಗುಲಾಮರನ್ನಾಗಿ ಮಾಡಿ ಒಯ್ದರು. ಅವರು ಯಾವ ಹಡಗದಲ್ಲಿ ಗುಲಾಮರನ್ನು ತುಂಬಿ ಒಯ್ದರೋ ಆ ಹಡಗಕ್ಕೆ "ಜೀಜಸ"ವೆಂಬ ಪವಿತ್ರ ಹೆಸರನ್ನಿಟ್ಟದ್ದರು. ಈ ನಿಗ್ರೋಜನರನ್ನು ಸೆರೆಹಿಡಿಯುವಾಗ ಅವರು ಎಳ್ಳಷ್ಟಾದರೂ ದಯತೋರಿಸಲಿಲ್ಲ. ಕಾಡಪಶುಗಳಂತೆ ಇವರನ್ನು ಸೆರೆಹಿಡಿದು ಹಡಗದೊಳಗಿಂದ ಒಯ್ಯುವಾಗಾದರೂ ಕಾಡಪಶುಗಳಂತೆಯೇ ನಡಿಸಿಕೊಂಡರು. ಅನೇಕ ಜನರು ಹಡಗದಲ್ಲಿಯೇ ಮರಣಹೊಂದಿದರು. ಹಾಗೂ ಉಳಿದವರು ಅಮೇರಿಕೆಗೆ ಮುಟ್ಟುತ್ತಲೆ ಮಗ, ಮಗಳು, ತಂದೆ, ತಾಯಿ, ಅಕ್ಕ, ಅಣ್ಣ ಮುಂತಾದದ್ದನ್ನೇನೂ ನೋಡದೆ, ಬೇರೆ ಬೇರೆ ಜನರಿಗೆ ಬೇರೆ ಬೇರೆ ಜನರನ್ನು ಮಾರಿಬಿಟ್ಟರು. ಹೀಗೆ ಬಹಳ ಜನರನ್ನು ಅಮೇರಿಕದಲ್ಲಿ ಗುಲಾಮರನ್ನಾಗಿ ಮಾಡಿ ಮಾರಿದರು. ಪೂರ್ವಕಾಲದಲ್ಲಿ ಇದೊಂದು ವ್ಯಾಪಾರವೇ ಆಗಿತ್ತು. ಮುಂದೆ ಈ ಗುಲಾಮ್ರಜನರ ಕಷ್ಟವನ್ನು ನೋಡಿ ಕೆಲವು ಉದಾರಬುದ್ಧಿಯ ಯುರೋಪಿಯನ್ನರ ಅಂತಃಕರಣವು ಕರಗಿದ್ದರಿಂದ ಅವರು ಗುಲಾಮಪದ್ಧತಿಯನ್ನು ನಾಶಮಾಡಲು ಯತ್ನಿಸಿದರು. ಈ ಕೆಲಸದಲ್ಲಿ ಅನೇಕ ಯುರೋಪಿಯನ್ನರ ವಿರೋಧವು ಅವರಿಗಾದ್ದರಿಂದ, ಎಷ್ಟೋ ಮಹಾತ್ಮರು ಜೀವಕ್ಕೆ ಕೂಡ ಎರವಾಗಬೇಕಾಯಿತು. ಇಂಥ ಉದಾರ ಪುರುಷರಲ್ಲಿ ಅಮೇರಿಕದ ಪ್ರೆಸಿಡೆಂಟನಾದ ಮಹಾತ್ಮಾ ಲಿಂಕನ್ ಸಾಹೇಬನ ಗಣನೆಯು ಪ್ರಾಮುಖ್ಯವಾಗಿ ಆಗುತ್ತಿತ್ತು. ಇ. ಸ. ೧೮೬೫ ರಲ್ಲಿ ಗುಲಾಮಪದ್ಧತಿಯು ನಾಶವಾಯಿತು. ಈ ವೇಳೆಯಲ್ಲಿ ೪೦ ಲಕ್ಷ ನಿಗ್ರೋಜನರು ಅಮೇರಿಕದಲ್ಲಿದ್ದರು. ಸದ್ಯಕ್ಕೆ ಅಲ್ಲಿ ೧ ಕೋಟಿ ೧೦ ಲಕ್ಷ ನಿಗ್ರೋಜನರಿರುವರು.



ಯಲ್ಪಡುವದರಿಂದ ಬುಕರನ ಜನ್ಮವು ಅತ್ಯಂತ ಕೀಳುಜಾತಿಯಲ್ಲಾಯಿತೆಂದು ಮೇಲೆ ಹೇಳಿರುತ್ತದೆ. ಇದರ ಹೊರತು ಅವನ ದಾರಿದ್ರ್ಯವೂ ಹೇಳಕೂಡದಷ್ಟು ಭಯಂಕರವಾಗಿತ್ತು. ತನ್ನ ಮಗನಿಗೆ ಹೊಟ್ಟೆತುಂಬ ಆಹಾರವು ದೊರೆಯಬೇಕೆಂದು ಅವನ ತಾಯಿಯು ಅರಹೊಟ್ಟೆಯಿಂದಿರಬೇಕಾಗುತ್ತಿತ್ತು. ಹಾಗು ತನ್ನ ಹಸಿವೆಯು ಹಿಂಗುವ ಸಲುವಾಗಿ ಅವಳು ಎಷ್ಟೋ ಸಾರೆ ಯುರೋಪಿಯನ್ ಧನಿಕರು ತಮ್ಮ ತೋಟದಲ್ಲಿ ಸಾಕಿದ ಹಂದಿಗಳ ಬಾಯಿಂದ ಬಿದ್ದ ಗೊಂಜಾಳ ಕಾಳುಗಳನ್ನು ತಿನ್ನುತ್ತಿದ್ದಳು. ರವಿವಾರಕ್ಕೊಮ್ಮೆ ಒಂದು ಪಂಚಪಾತ್ರೆ ತುಂಬ ಕಾಕವಿಯನ್ನು ಅವಳ ಒಡೆಯನು ಅವಳಿಗೆ ಕೊಡುವನು. ಈ ಕಾಕವಿಯು ಬುಕರನಿಗೆ ಅಮೃತದಂತೆ ಸವಿಹತ್ತುತ್ತಿತ್ತು. ಬುಕರನು ಚಿಕ್ಕಂದನ್ನು ಕಳೆದ ಮನೆಯು ಒಂದು ಚಿಕ್ಕ ಗುಡಿಸಲವೇ ಆಗಿತ್ತು. ಬಿಸಿಲು-ಮಳೆ-ಗಾಳಿಗಳಿಗೆ ಆ ಮನೆಯು ಎಂದೂ ಪ್ರತಿಬಂಧವನ್ನು ಮಾಡಲಿಲ್ಲ. ಬುಕರನಿಗೆ ಬಾಲ್ಯದಲ್ಲಿ ಅರಿವೆ-ಅಂಚಡಿಗಳು ಚನ್ನಾಗಿ ದೊರೆಯಲಿಲ್ಲ. ತಲೆಗೆ ಹಾಕಲಿಕ್ಕೆ ಒಂದು ಟೊಪ್ಪಿಗೆಯು ಅವನ ವಯಸ್ಸಿನ ೬-೭ನೇ ವರ್ಷಕ್ಕೆ ದೊರೆಯಿತು. ಅದೂ ಅವನ ತಾಯಿಯು ಒಂದು ಅರಿವೆಯ ತುಂಡಿಗೆ ಎರಡು ದಾರಗಳನ್ನು ಹಾಕಿ ಸಿದ್ಧಮಾಡಿದ ಟೊಪ್ಪಿಗೆಯೇ ಆಗಿತ್ತು! ಇದರ ಮೇಲಿಂದ ಇವನ ಬಾಲ್ಯವು ಎಷ್ಟು ಬಡತನದಲ್ಲಿ ಹೋಯಿತೆಂಬದು ಸಹಜವಾಗಿ ತಿಳಿದು ಬರಬಹುದು.

ಇಂಥ ಬಡತನದ ಹಾಗೂ ಕೀಳುಜಾತಿಯ ಬುಕರನು ತನ್ನ ಉದ್ಯೋಗಬಲದಿಂದ ಮುಂದೆ ಉನ್ನತಾವಸ್ಥೆಗೆ ಮುಟ್ಟಿದನು. ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಸರಕಾರವು ಅವನಿಗೆ ಒಂದು ಪ್ರಾಂತದ ಗವ್ಹರ್ನರನ ಸ್ಥಳವನ್ನು ಕೊಡಲು ಸಿದ್ಧವಾಯಿತು. ಹಾಗೂ ದೊಡ್ಡ ದೊಡ್ಡ ವಿದ್ವಾಂಸರಿಂದ ಅವನಿಗೆ ಭೋಜನದ ಆಮಂತ್ರಣಗಳೂ ಬರಹತ್ತಿದವು. ಸಾರಾಂಶ:—ಅವನ ಮೊದಲಿನ

Digitized by ROJA MUTHIAH RESEARCH LIBRARY

ಚರಿತ್ರೆಗೂ, ಮುಂದಿನ ಚರಿತ್ರೆಗೂ ಭೂವ್ಯಾಕಾಶಗಳಷ್ಟು ಅಂತರ ವಾಯಿತು. ಇಷ್ಟು ನೀಚಾವಸ್ಥೆಯಿಂದ ಇಷ್ಟು ಉಚ್ಚಾವಸ್ಥೆಗೆ ಮುಟ್ಟಿದ ವಿದ್ಯಾರ್ಥಿಗಳು ಜಗತ್ತಿನಲ್ಲಿ ಸಿಗುವಂತೆ ಕಂಡುಬರುವದಿಲ್ಲ. ಕೆಲವು ದಿವಸಗಳ ಪೂರ್ವದಲ್ಲಿ ಒಂದು ಇಂಗ್ರೇಜೀ ವೃತ್ತಪತ್ರದಲ್ಲಿ ಒಬ್ಬ ವಿದ್ಯಾರ್ಥಿಯ ವರ್ತಮಾನವು ಪ್ರಸಿದ್ಧವಾಗಿತ್ತು. ಆ ವಿದ್ಯಾರ್ಥಿಯು ಪಂಜಾಬದೊಳಗಿನ ಒಬ್ಬ ಶ್ರೀಮಂತ ಗೃಹಸ್ಥನ ಮಗನಾಗಿದ್ದು, ಶಿಕ್ಷಣಹೊಂದುವದಕ್ಕಾಗಿ ಇಂಗ್ಲಂಡಕ್ಕೆ ಹೋಗಿ ವಾಸವಾಗಿದ್ದನು. ಅವನ ಪ್ರತಿತಿಂಗಳ ತೀರ ಕಡಿಮೆ ವೆಚ್ಚವೆಂದರೆ ೧೫೦೦ ರೂಪಾಯಿಗಳು! ಇಂಥ ವಿದ್ಯಾರ್ಥಿಗಳ ಚರಿತ್ರೆಯು ಇತರ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕವಾಗುವದೇನು? ಬುಕರ ಟೀ ವಾಶಿಂಗ್ಟನ್ನನ ಚರಿತ್ರೆಯು ಇದಕ್ಕೆ ವಿರುದ್ಧಸ್ಥಿತಿಯಲ್ಲಿರುವದು. ಆದ್ದರಿಂದಲೇ ಅದು ಇತರರಿಗೆ ಬಹುಶಃ ಮಾರ್ಗದರ್ಶಕವಾದೀತು.

ಈಗಿನ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವೂ ಶ್ರಮಮಾಡುವ ಇಚ್ಛೆಯೂ ತೀರ ಕಡಿಮೆ. ಒಂದುವೇಳೆ ಅವರಲ್ಲಿ ಈ ಗುಣಗಳೇ ಇಲ್ಲವೆಂದರೂ ನಡೆಯುವಂತಿದೆ. ಇಂಥ ಉಚ್ಚ ಗುಣಗಳ ಅಭಾವದ ಮೂಲಕವಾಗಿಯೇ ಅವರ ಅಕಲ್ಯಾಣವಾಗುವದು. ಈ ಗುಣಗಳು ಬುಕರಟೀ ವಾಶಿಂಗ್ಟನ್ನನ ಚರಿತ್ರವನ್ನು ಓದುವ ವಿದ್ಯಾರ್ಥಿಗಳಲ್ಲಿ ನಿಶ್ಚಯವಾಗಿ ಉಂಟಾಗುವವೆಂದು ಲೇಖಕನ ಮನವರಿಕೆಯಾಗಿರುವದು. ಆದ್ದರಿಂದಲೇ 'ಅನುಕರಣೀಯ ವಿದ್ಯಾರ್ಥಿ' ಎಂಬ ಹೆಸರಿನ ಬುಕರ ಟೀ ವಾಶಿಂಗ್ಟನ್ನನ ಚರಿತ್ರೆಯನ್ನು ವಿದ್ಯಾರ್ಥಿಮಿತ್ರರ ಮುಂದಿಡುವ ಸಾಹಸವನ್ನು ಈ ಪುಸ್ತಕರೂಪದಿಂದ ಮಾಡಲಾಯಿತು. ಈ ಚರಿತ್ರೆಯ ಅಧ್ಯಯನದಿಂದ ನಮ್ಮ ದೇಶದ ವಿದ್ಯಾರ್ಥಿಗಳು ಯೋಗ್ಯ ಬೋಧವನ್ನು ಹೊಂದಿ ಕರ್ತವ್ಯನಿಷ್ಠರಾಗುವರೆಂದು ಲೇಖಕನಿಗೆ ದೃಢವಾದ ಆಶೆಯಿರುವದು.

---

# ಅನುಕರಣೀಯ ವಿದ್ಯಾರ್ಥಿ!

## ೧ನೇ ಪ್ರಕರಣ.

### ಬುಕರನ ಬಾಲ್ಯ.

ನಮ್ಮ ಚರಿತ್ರನಾಯಕನ ಜನ್ಮವು ೧೮೫೮-೫೯ ರ ಸುಮಾರಿಗೆ ಅಮೇರಿಕದ ಸಂಯುಕ್ತ ಸಂಸ್ಥಾನಗಳೊಳಗಿನ ವ್ಹರ್ಜಿನಿಯಾ ಪ್ರಾಂತದ ಫ್ರಾಂಕಲಿನ ಪರಗಣೆಯಲ್ಲಿ 'ಹೆಲ್ಸಫರ್ಡ' ಪೋಷ್ಟ ಆಫೀಸಿನ ಹತ್ತರ ಆಯಿತು. ಆಗ ಅವನ ತಾಯಿಯು ಒಂದು ತೋಟದ ಒಡೆಯನಾದ ಒಬ್ಬ ಯುರೋಪಿಯನ್ ಮನುಷ್ಯನಲ್ಲಿ ಗುಲಾಮಳಾಗಿದ್ದಳು. ಬುಕರನಿಗಾಗಲಿ, ಅವನ ತಾಯಿಗಾಗಲಿ ತಮ್ಮ ಪೂರ್ವಜರ ವಿಷಯಕ್ಕೆ ಸ್ವಲ್ಪ ಸಹ ಗೊತ್ತಿದ್ದಿಲ್ಲ. ಇವರೀರ್ವರು ಇರುವ ಮನೆಯು ೧೬ ಫೂಟು ಉದ್ದ, ೧೪ ಫೂಟು ಅಗಲವಾಗಿತ್ತು. ಇದಕ್ಕೆ ಒಂದು ದೊಡ್ಡ ಕಿಂಡಿಯು ಬಿದ್ದಿತ್ತು. ಅದರೊಳಗಿಂದ ಬೆಕ್ಕು-ನಾಯಿಗಳು ಸಹಜವಾಗಿ ಒಳಗೆ ಹೋಗಿಬರುವವು! ಬುಕರನ ತಾಯಿಗೆ ತನ್ನ ಯಜಮಾನನ ಆಳುಹೋಳುಗಳಿಗೆ ಅಡಿಗೆ ಮಾಡುವ ಕೆಲಸವಿತ್ತು. ಸ್ವತಃ ಅವಳಿಗೆ ಕೂಲಿಯು ತೀರ ಕಡಿಮೆ ಸಿಗುತ್ತಿತ್ತು. ಆದ್ದರಿಂದ ಅವಳು ಸ್ವಂತ ಮಕ್ಕಳಿಗೆ ಹೊಟ್ಟೆ ತುಂಬುವಷ್ಟು ಆಹಾರವನ್ನು ಕೊಡಲಿಕ್ಕೆ ಬಹಳ ಕಷ್ಟಬಡಬೇಕಾಗುತ್ತಿತ್ತು. ಬುಕರನಿಗೆ ಜಾನ್ ಎಂಬ ಹೆಸರಿನ ಒಬ್ಬ ಅಣ್ಣನೂ, ಒಬ್ಬಳು ತಂಗಿಯೂ ಇದ್ದರು. ಈ ಹುಡುಗರಿಗೆ ಏನಾದರೂ ತಿನ್ನಲಿಕ್ಕೆ ಬೇಕೆಂದು ತಾಯಿಯು ಒಡೆಯನ ತೋಟದೊಳಗಿನ ಒಂದು ಕೋಳಿಯ ಮರಿಯನ್ನು ಪ್ರತಿನಿತ್ಯವೂ ರಾತ್ರಿಯಲ್ಲಿ ಕಳವುಮಾಡಿ ತರುವಳು. ಹಾಗೂ ಅದನ್ನೇ

Digitized by ROJA MUTHIAH RESEARCH LIBRARY

ಬೇಯಿಸಿ ಹುಡುಗರ ಹಸಿವೆಯನ್ನು ಹೇಗಾದರೂ ಹೋಗಲಾಡಿಸುವಳು; ತಾನು ಮಾತ್ರ ಅರಹೊಟ್ಟೆಯಿಂದಲೇ ಇರುವಳು. ಹಗಲೆಲ್ಲ ಮನ ಮುಟ್ಟಿ ದಾವತಿಮಾಡಿ ರಾತ್ರಿಯಲ್ಲಿ ಹುಡುಗರ ಅಡಿಗೆಯ ಸಲುವಾಗಿ ಅವಳು ಬಹಳ ವೇಳೆಯವರೆಗೆ ಜಾಗರಣೆ ಮಾಡಬೇಕಾಗುತ್ತಿತ್ತು. ಮೇಲಾಗಿ ಬೆಳಗುಮುಂಜಾವಿನಲ್ಲಿ ಬೇಗನೆ ಎದ್ದಹೊರತು ನಿರ್ವಾಹ ವಿಲ್ಲ. ಇದರ ಮೇಲಿಂದ ಆ ಮಾತೆಯ ದೀನಸ್ಥಿತಿಯ ಸ್ವಲ್ಪವಾದರೂ ಕಲ್ಪನೆಯು ವಾಚಕರ ಮನಸ್ಸಿಗೆ ಹೊಳೆಯಬಹುದು. ಇನ್ನು ಕೆಲವು ಬಾಲವಾಚಕರು—"ಬುಕರನ ತಾಯಿಯು ಕೋಳಿಯ ಮರಿಗಳನ್ನು ತುಡುಗುಮಾಡಿದ್ದು ಚಲೋ ಕೆಲಸವಲ್ಲ" ಎಂದೆನ್ನಬಹುದು. ಬಾಲ ಮಿತ್ರರ ಈ ಅಭಿಪ್ರಾಯವು ತಪ್ಪಿನದಲ್ಲ; ಆದರೆ ಸಣ್ಣ ಸಣ್ಣ ಎರಡು ಮೂರು ಮಕ್ಕಳನ್ನೂ, ಅವಳ ದೀನ-ಕರುಣಾಸ್ಥಿತಿಯನ್ನೂ ವಿಚಾರ ಮಾಡುವ ಯಾವ ಮನುಷ್ಯನಾದರೂ ಅವಳ ಈ ತಪ್ಪಿನ ಬಗ್ಗೆ ಕ್ಷಮೆಯನ್ನೇ ಮಾಡಿಯಾನು. ಒಬ್ಬ ಗುಲಾಮಳ ಮೂರು ಅನಾಥ ಹುಡುಗರು. ಅಂದಬಳಿಕ ತಾಯಿಯ ಹೊರತು ಪ್ರೀತಿಯಿಂದ ಅವರ ಆರೈಕೆಯನ್ನು ಮಾಡುವವರಾರು? ಬುಕರನು ತನ್ನ ತಾಯಿಯ ವಿಷಯಕ್ಕೆ ಒಳ್ಳೇ ಉತ್ತಮವಾದ ಉದ್ಗಾರಗಳನ್ನು ತೆಗೆದಿರುವನು. ಅವನ ತಾಯಿಯು ಒಳ್ಳೇ ವ್ಯವಹಾರದಕ್ಷಳಾಗಿದ್ದಳು. ಬುಕರಟೀ ವಾಶಿಂಗ್ಟನ್ನನಿಗೆ ಮುಂದೆ ಉಚ್ಚಪದವು ಪ್ರಾಪ್ತವಾದಾಗ ಅವನು—"ನನಗೆ ಈ ದಿವಸಗಳು ತಾಯಿಯ ಕೃಪೆಯಿಂದಲೇ ದೊರೆತವು" ಎಂದು ಎನ್ನುತ್ತಿದ್ದನು.

ಎಲ್ಲ ಹುಡುಗರ ಚಿಕ್ಕತನವು ಬಹುಶಃ ಆಟನೋಟಗಳಲ್ಲಿಯೇ ಹೋಗುತ್ತದೆ; ಆದರೆ ಬುಕರನಿಗೆ ಮಾತ್ರ ಆಟವಾಡಲಿಕ್ಕೆ ವೇಳೆಯೇ ದೊರೆಯಲಿಲ್ಲ. ವಯಸ್ಸಿನ ೪-೫ನೇ ವರ್ಷದಿಂದಲೇ ಅವನು ಹೊಟ್ಟೆ ಯ ಸಲುವಾಗಿ ಕೆಲಸ ಮಾಡಬೇಕಾಯಿತು. ಅಮೇರಿಕದ ವಾಸ್ತ



ವ್ಯವು ಬಹಳ ಖರ್ಚಿನದಾದ್ದರಿಂದ ೩-೪ ಜನರಿರುವ ಕುಟುಂಬದ ಪೋಷಣವನ್ನು ಒಬ್ಬ ಗುಲಾಮ ಹೆಂಗಸು ಹೇಗೆ ಮಾಡುವಳು? ಜಾನನೂ, ಬುಕರನೂ ಸಣ್ಣವರಿರುವಾಗಲೇ ಕೆಲಸಮಾಡಲಿಕ್ಕೆ ಪ್ರಾರಂಭಿಸಿದರು. ಒಡೆಯನ ಮನೆಯ ಅಂಗಳವನ್ನು ಉಡುಗುವದು, ಹೊಲದಲ್ಲಿ ಕೆಲಸಮಾಡುವ ಜನರಿಗೆ ನೀರು ಪೂರೈಸುವದು, ಯಜ ಮಾನನ ಮಕ್ಕಳನ್ನು ಸಾಲೆಗೆ ಕಳಿಸುವದು, ವಾರದಲ್ಲಿ ಒಂದುಸಾರೆ ೩ ಮೈಲು ದೂರಿರುವ ಊರಿಂದ ಕಾಳುಗಳನ್ನು ಬೀಸಿಸಿ ತರುವದು, ಈ ಮುಂತಾದ ಕೆಲಸಗಳನ್ನು ಬುಕರನು ಮಾಡಬೇಕಾಗುತ್ತಿತ್ತು. ಅವನು ಕತ್ತೆಯ ಮೇಲೆ ಕಾಳುಗಳನ್ನು ಹೇರಿ ಹೊಡೆದುಕೊಂಡು ಹೋಗಿ, ಹಿಟ್ಟು ತರುವನು. ಬುಕರನು ಹೋಗಿ ಬರಬೇಕಾದ ಊರಿನ ದಾರಿಯು ಒಂದು ಅರಣ್ಯದೊಳಗಿಂದ ಹಾಯುತ್ತಿದ್ದು, ಆ ಅರಣ್ಯದಲ್ಲಿ ಭೂತವಿರುವದೆಂದು ಜನರು ಹೇಳುತ್ತಿದ್ದರು. ಅದರಿಂದ ೪-೫ ವರ್ಷದ ಬುಕರನು ಆ ಊರಿಗೆ ಹೋಗಿಬರಲಿಕ್ಕೆ ಬಹಳ ಅಂಜುವನು. ಆದರೆ ಮಾಡುತ್ತಾನೇನು? ಕೆಲಸ ಮಾಡಿದ ಹೊರ್ತು ನಿರ್ವಾಹವಿದ್ದಿಲ್ಲ.

ಗುಲಾಮ ಹುಡುಗರಿಗೆ ಅವರ ಯಜಮಾನರಿಂದ ನಾರಬಟ್ಟೆಯ ಅಂಗಿಗಳು ದೊರೆಯುತ್ತಿದ್ದವು. ಈ ಅಂಗಿಗಳಿಗೆ ಉಪಯೋಗಿಸುವ ಅರಿವೆಯು ಬಹಳ ಹುರುಬರಕಾಗಿರುತ್ತಿತ್ತು. ಅದರಿಂದ ಬುಕರನ ಅಣ್ಣ ಜಾನನು ಮೊದಲು ಕೆಲವು ದಿವಸ ತಾನು ಅಂಗಿಯನ್ನು ತೊಟ್ಟು ಕೊಂಡು ಅದು ಸಾಧಾರಣ ಮೆತ್ತಗಾದ ಬಳಿಕ ಬುಕರನಿಗೆ ಹಾಕಿ ಕೊಳ್ಳಲಿಕ್ಕೆ ಕೊಡುತ್ತಿದ್ದನು. ಕಾಲಲ್ಲಿ ಹಾಕಿಕೊಳ್ಳುವದಕ್ಕೆ ಕಟ್ಟಿ ಗೆಯ ಜೋಡುಗಳು ಅವರಿಗೆ ಸಿಗುತ್ತಿದ್ದವು! ಅವಾದರೂ ಬಹಳ ತೊಂದರೆಯನ್ನುಂಟುಮಾಡುತ್ತಿದ್ದವು. ಇವೆಲ್ಲವುಗಳಿಗಿಂತ ಊಟದ ತೊಂದರೆಯು ಅವರನ್ನು ಬಹಳವಾಗಿ ಬಾಧಿಸುತ್ತಿತ್ತು. ಗುಲಾಮ

Digitized by ROJA MUTHIAH RESEARCH LIBRARY

ಹುಡುಗರ ಆಹಾರವೆಂದರೆ ಶುದ್ಧ ಪಶುಗಳ ಆಹಾರವೇ ಆಗಿತ್ತು. ಎಷ್ಟೋ ಸಾರೆ ಅವರು ಬರೇ ರೊಟ್ಟೆಯ ಚೂರುಗಳನ್ನಾಗಲಿ, ಹಸಿ ಮಾಂಸದ ತುಣುಕುಗಳನ್ನಾಗಲಿ, ಸ್ವಲ್ಪ ಹಾಲನ್ನಾಗಲಿ ಬಟಾಟೆಯನ್ನಾಗಿ ಸೇವಿಸಿ ಅರಹೊಟ್ಟೆಯಿಂದ ತೊಳಲುತ್ತಿದ್ದರು! ಹಾಗೂ ತಮ್ಮ ಹಸಿವೆಯನ್ನು ಕಳೆದುಕೊಳ್ಳಲಿಕ್ಕೆ ಹಂದಿಗಳ ಎಂಜಲದ ಕಡೆಗೆ ಧಾವಿಸುವರು! ನಮ್ಮ ಕಡೆಯ ಅತ್ಯಂತ ದರಿದ್ರ ಹಾಗೂ ಹೀನಜಾತಿಯ ಯಾವ ಮನುಷ್ಯನ ಸ್ಥಿತಿಯೂ ಕೂಡ ಇಷ್ಟು ಭೀಕರವಾಗಿರಲಿಕ್ಕಿಲ್ಲ. ಬುಕರನ ಒಡೆಯನು ಪ್ರತಿ ರವಿವಾರಕ್ಕೊಮ್ಮೆ ಎಲ್ಲ ಹುಡುಗರಿಗೂ ಒಂದು ಸಣ್ಣ ಪಂಚಪಾತ್ರೆಯ ತುಂಬ ಕಾಕವಿಯನ್ನು ಕೊಡುವನು. ಇದೇ ಆ ಹುಡುಗರ ಪಕ್ವಾನ್ನವು! ತಮಗೆ ಕಾಕವಿಯು ಸಿಗುವದೆಂದು ಅವರು ರವಿವಾರಕ್ಕೆ ಬಹಳ ಮಹತ್ವವನ್ನು ಕೊಟ್ಟಿದ್ದರು! ಬುಕರನು ದೊಡ್ಡವನಾದ ಬಳಿಕ ದೊಡ್ಡ ದೊಡ್ಡ ಮೇಜವಾನಿಗಳ ಪ್ರಸಂಗದಲ್ಲಿಯೂ ಈ ಕಾಕವಿಯನ್ನು ನೆನೆಯಿಸುತ್ತಿದ್ದನು. ಅವನ ಒಡೆಯನ ಮನೆಯಲ್ಲಿ ‘ಜಿಂಜರಕೇಕ’ ಎಂಬ ಹೆಸರಿನ ಒಂದು ತರದ ಪಕ್ವಾನ್ನವಾಗುತ್ತಿತ್ತು. ಈ ಪಕ್ವಾನ್ನವು ತನಗೆ ಸ್ವಲ್ಪವಾದರೂ ಸಿಗಬೇಕೆಂದು ಬುಕರನು ಆಶಿಸುವನು. ಆದರೆ ಅವನ ಇಚ್ಛೆಯು ತೃಪ್ತವಾಗುವ ಬಗೆ ಹೇಗೆ? “ಉತ್ಪದ್ಯಂತೇ ವಿಲೀಯಂತೇ ದರಿದ್ರಾಣಾಂ ಮನೋರಥಾಃ” ಅಂದರೆ ದರಿದ್ರರ ಮನೋರಥಗಳು ಉತ್ಪನವಾಗಲಿಕ್ಕೂ, ಲಯವಾಗಲಿಕ್ಕೂ ಅವಕಾಶವಿಲ್ಲ” ಎಂಬುವದೇ ಸತ್ಯವು.

---



## ೨ನೇ ಪ್ರಕರಣ.

### ಮಾಲ್ಡನ್ ಊರಿಗೆ ಪ್ರಯಾಣವು.

ಅಮೇರಿಕದ ಪ್ರೆಸಿಡೆಂಟನಾದ ಮಹಾತ್ಮಾ ಲಿಂಕನ್ ಸಾಹೇಬನ ಪ್ರಯತ್ನದಿಂದ ಇ. ಸ. ೧೮೬೫ನೇ ವರ್ಷದಿಂದ ಗುಲಾಮಪದ್ಧತಿಯು ಕಟ್ಟಾಯಿತು. ಬುಕರನೂ, ಅವನ ತಾಯಿಯೂ, ಅವನ ಸಹೋದರ ಸಹೋದರಿಯರೂ, ಇತರ ನಿಗ್ರೋಜನರಂತೆ ಮುಕ್ತರಾದರು. ಅನೇಕದಿವಸ ದಾಸ್ಯತ್ವದಲ್ಲಿ ಕಾಲಕಳೆದ ನಿಗ್ರೋಜನರು ಅತ್ಯಂತ ಪರಾವಲಂಬಿಗಳಾಗಿದ್ದರು. ಅವರಲ್ಲಿ ಅನೇಕರಿಗೆ ಸ್ವಾತಂತ್ರ್ಯವು ಸೇರಲಿಲ್ಲ. ಕಾರಣವೇನಂದರೆ—ಸ್ವಾವಲಂಬನದಿಂದ ಯಾವದೊಂದು ಉದ್ಯೋಗವನ್ನು ಮಾಡಿ, ಹೊಟ್ಟೆಯನ್ನು ತುಂಬಿಕೊಳ್ಳುವ ಅಥವಾ ಕುಟುಂಬದ ಪೋಷಣೆಯನ್ನು ಮಾಡುವ ರೀತಿಯೇ ಅವರಿಗೆ ಗೊತ್ತಾಗಿದ್ದಿಲ್ಲ. ಆದ್ದರಿಂದ ಎಷ್ಟೋ ನಿಗ್ರೋಜನರು ತಮ್ಮ ಮೊದಲಿನ ಒಡೆಯರ ಮನೆಯಲ್ಲಿಯೇ ಆಳಾಗಿ ನಿಂತರು. ಬುಕರಟೀ ವಾಶಿಂಗ್ಟನ್ನನ ಕುಟುಂಬದ ಜನರು ವ್ಹರ್ಜಿನಿಯಾ ಸಂಸ್ಥಾನದ ಚಾರ್ಲ್ಸಟನ್ ರಾಜಧಾನಿಯಿಂದ ಸುಮಾರು ೫ ಮೈಲಿನ ಮೇಲಿರುವ ‘ಮಾಲ್ಡನ್’ ವೆಂಬ ಊರಿಗೆ ಹೋದರು. ಈ ಊರು ಬಹಳ ದೂರವಾಗಿದ್ದರೂ ಅವರು ಸರ್ವ ಪ್ರವಾಸವನ್ನು ಕಾಲಿನಿಂದಲೇ ಮಾಡಬೇಕಾಯಿತು. ಈ ಊರಲ್ಲಿ ಬುಕರನ ಎರಡನೇ ತಂದೆಯು ಇರುತ್ತಿದ್ದನು. ಇವನು ನಿಗ್ರೋಜಾತಿಯವನಿದ್ದು, ಬುಕರನ ತಾಯಿಗೂ ಇವನಿಗೂ ಮೊದಲು ಸ್ನೇಹ ಸಂಬಂಧವಾಗಿತ್ತು.

ಮಾಲ್ಡನ್ ಊರಲ್ಲಿ ವಾಸವಾದಂದಿನಿಂದ ಬುಕರನ ಕುಟುಂಬಕ್ಕೆ ಭಾಗ್ಯದ ದಿವಸಗಳು ಲಭಿಸಿದವೆಂದು ಮೂಲತಃ ಹೇಳುವಂತಿದ್ದಿಲ್ಲ. ತಂದೆಯು ಹುಡುಗರ ಸಲುವಾಗಿ ಮಾಡಿಕೊಟ್ಟ ಮನೆಯು

Digitized by ROJA MUTHIAH RESEARCH LIBRARY

ತೋಟದೊಳಗಿನ ಮೊದಲಿನ ಮನೆಯಷ್ಟು ಸಹ ನೆಟ್ಟಗಿದ್ದಿಲ್ಲ. ಒಂದು ದೃಷ್ಟಿಯಿಂದ ವಿಚಾರಿಸಿದರೆ ಮೊದಲಿನದಕ್ಕಿಂತಲೂ ಕೆಟ್ಟದೇ ಆಗಿತ್ತೆಂದು ಹೇಳುವಂತಿತ್ತು. ಈ ಹೊಸಮನೆಯಲ್ಲಿ ಸ್ವಚ್ಛ ಹವೆಯು ಆಡುತ್ತಿರಲಿಲ್ಲ. ಹಾಗೂ ನೆರೆಹೊರೆಯೂ ಚನ್ನಾಗಿದ್ದಿಲ್ಲ. ಬುಕರನ ತಂದೆಯು ಉಪ್ಪಿನ ಕಾರಖಾನೆಯಲ್ಲಿ ಕೆಲಸವನ್ನು ಮಾಡುತ್ತಿದ್ದನು. ಅವನು ಬುಕರನಿಗೂ, ಅವನ ಅಣ್ಣನಿಗೂ ಉಪ್ಪಿನ ಭಟ್ಟಿಯಲ್ಲಿ ಕೆಲಸವನ್ನು ಹಚ್ಚಿಕೊಟ್ಟನು. ದಿನಾಲು ಬೆಳಗುಮುಂಜಾವಿನ ೪ ಗಂಟೆಗೆ ಎದ್ದು ಅವರು ತಮ್ಮ ಕೆಲಸಕ್ಕೆ ಹೋಗಬೇಕಾಗುತ್ತಿತ್ತು. ಈಗ ಬುಕರನು ಸಾಲೆಗೆ ಹೋಗುವ ವಯಸ್ಸುಳ್ಳವನಾಗಿದ್ದನು. ಮೊದಲು ಬುಕರನು ತನ್ನ ಒಡೆಯನ ಮಕ್ಕಳನ್ನು ಸಾಲೆಗೆ ಕಳಿಸಿದನೆಂದರೆ ಬಳ್ಳೇ ಚಡಪಡಿಸುವನು. ನಾನಾದರೂ ಓದಲಿಕ್ಕೂ, ಬರೆಯಲಿಕ್ಕೂ ಕಲಿತುಕೊಳ್ಳಬೇಕೆಂದು ಅವನ ಮನಸ್ಸಿಗೆ ಅನಿಸುವದು; ಆದರೆ ಆ ವೇಳೆಯಲ್ಲಿ ಇಂಥ ವಿಚಾರಗಳು ಹೇಗೆ ಕೊನೆಗಾಣಬೇಕು? ಮಾಲ್ಡನದಲ್ಲಿಯೂ ಶಿಕ್ಷಣಾನುಕೂಲವಿದ್ದಿಲ್ಲ. ಹಾಗು ಕೆಲಸದಲ್ಲಿ ಬುಕರನಿಗೆ ವಿಶ್ರಾಂತಿಯೂ ಸಿಗುತ್ತಿದ್ದಿಲ್ಲ. ಬುಕರನು ಪ್ರಥಮತಃ ಉಪ್ಪಿನಿಂದ ತುಂಬಿದ ಪೀಪಾಯಿಗಳ ಮೇಲೆ ತನ್ನ ತಂದೆಯು ಹಾಕುತ್ತಿದ್ದ (೧೮) ಈ ಸಂಖ್ಯೆಯನ್ನು ಓದಲಿಕ್ಕೂ, ಬರೆಯಲಿಕ್ಕೂ ಕಲಿತುಕೊಂಡನು. ಇದೇ, ಅವನು ಮೊದಲು ಸಂಪಾದಿಸಿದ ಪುಸ್ತಕೀಯ ಜ್ಞಾನವು. ತನಗೆ ಹೆಚ್ಚಿಗೆ ಕಲಿಯಲಿಕ್ಕೆ ಶಕ್ಯವಿಲ್ಲದಿದ್ದರೂ ಸಾಮಾನ್ಯ ತರದ ಪುಸ್ತಕ, ವರ್ತಮಾನಪತ್ರಗಳನ್ನು ಓದಲಿಕ್ಕೆ ಬೇಕಾಗುವಷ್ಟು ಶಿಕ್ಷಣವನ್ನಾದರೂ ಸಂಪಾದಿಸಿಯೇ ತೀರೇನು, ಎಂದು ಬುಕರನು ನಿಶ್ಚಯಮಾಡಿದ್ದನು. ಮಾಲ್ಡನದಲ್ಲಿ ಇರಹತ್ತಿದ ಬಳಿಕ ಬುಕರನು—"ನನಗೊಂದು ಪುಸ್ತಕವನ್ನು ದೊರಕಿಸಿ ಕೊಡು." ಎಂದು ತಾಯಿಯನ್ನು ಕೇಳಿದನು. ಅವಳು ಪ್ರಯತ್ನಬಟ್ಟು ಎಲ್ಲಿಯದೋ ಒಂದ್ "ಬ್ಲ್ಯೂಬ್ಲಕ ಸ್ಪೇಲಿಂಗಬುಕ್" ವೆಂಬ ಆರಂಭದ ಪುಸ್ತಕವನ್ನು

Digitized by ROJA MUTHIAH RESEARCH LIBRARY



ಮಗನಿಗೆ ತಂದುಕೊಟ್ಟಳು. ಶಿಕ್ಷಕರ ಸಹಾಯದ ಹೊರ್ತು ಅದನ್ನು ಓದಲಿಕ್ಕೆ ಬುಕರನು ಪ್ರಾರಂಭಮಾಡಿದನು. ಆ ಊರಲ್ಲಿ ಅವನಿಗೆ ಕಲಿಸುವಂಥ ಸುಶಿಕ್ಷಿತನಾದ ಅವನ ಜಾತಿಯವನು ಬೇರೆ ಯಾವನೂ ಇದ್ದಿಲ್ಲ. ಹಾಗೂ ಯುರೋಪಿಯನ್ನರ ಕಡೆಗೆ ಹೋಗಲಿಕ್ಕೆ ಅವನು ಬಹಳ ಅಂಜುತ್ತಿದ್ದನು. ಆದರೂ ಅವನ ಮಹತ್ವಾಕಾಂಕ್ಷೆಯು ಮಾತ್ರ ಬಹಳ ಉಚ್ಚತರದ್ದಾಗಿತ್ತು. ಮುಂದೆ ತುಸು ದಿವಸಗಳಲ್ಲಿ ಒಬ್ಬ ಅಲ್ಪಶಿಕ್ಷಿತನಾದ ನಿಗ್ರೋಮನುಷ್ಯನು ಮಾಲ್ಡನದಲ್ಲಿ ಒಂದು ಸಾಲೆಯನ್ನು ಆರಂಭಿಸಿದನು. ಶಿಕ್ಷಣವನ್ನು ಸಂಪಾದಿಸಿದ ಹೊರತು ಗತ್ಯಂತರವಿಲ್ಲೆಂದು ನಿಗ್ರೋಜನರಿಗೆ ಕಂಡುಬಂದದ್ದರಿಂದ ಈ ಸಾಲೆಯಲ್ಲಿ ಹುಡುಗರ ಸಂಖ್ಯೆಯು ಒಳಿತಾಗಿ ಕೂಡಿತು. ನಿಗ್ರೋಜನರ ಸ್ಥಿತಿಯು ತೀರ ಬಡತನದ್ದಾದ್ದರಿಂದ ಶಿಕ್ಷಕನಿಗೆ ಸಂಬಳವನ್ನು ಕೊಡುವ ಸಾಮರ್ಥ್ಯವು ಅವರಲ್ಲಿದ್ದಿಲ್ಲ. ಅದರಿಂದ ಅವರು ವಾರದ ಮನೆಗಳನ್ನು ಹಚ್ಚಿಕೊಟ್ಟು, ಶಿಕ್ಷಕನ ಊಟದ ವ್ಯವಸ್ಥೆಯನ್ನು ನಡೆಯಿಸಿದರು. ಶಿಕ್ಷಕನಿಗೂ ಇದೇ ಯೋಜನೆಯು ಮನಸಿಗೆ ಬಂದಿತು. ಈ ಶಿಕ್ಷಕನು ನಡೆಯಿಸಿದ ಸಾಲೆಯು ದಿನಾಲು ಮುಂಜಾನೆ ೯ ಗಂಟೆಗೆ ಆರಂಭವಾಗುತ್ತಿತ್ತು. ಬುಕರನು ಭಟ್ಟಿಯಲ್ಲಿ ೯ ಗಂಟೆಯವರೆಗೆ ಕೆಲಸಮಾಡಬೇಕಾಗುತ್ತಿರುವದರಿಂದ ದಿನಾಲು ಸಾಲೆಗೆ ಹೋಗಲಿಕ್ಕೆ ಅವನಿಗೆ ತಡವಾಗುವದು. ಸರಿಯಾದ ವೇಳೆಗೆ ಸಾಲೆಗೆ ಹೋಗಲಿಕ್ಕೆ ಅನುಕೂಲವಾಗಬೇಕೆಂದು ಬುಕರನು ಹಲವು ಸಾರೆ ಕಾರಖಾನೆಯೊಳಗಿನ ಗಡಿಯಾಲದ ಮುಳ್ಳುಗಳನ್ನು ಮುಂದೆ ಸರಿಸುತ್ತಿದ್ದನು. ಶಿಕ್ಷಣವನ್ನು ಸಂಪಾದಿಸುವ ಕುತೂಹಲವು ಅವನಲ್ಲಿ ಎಷ್ಟು ಬಲವತ್ತರವಾಗಿತ್ತೆಂಬದು ಇದೊಂದೇ ಉದಾಹರಣೆಯಿಂದ ಸಹಜವಾಗಿ ತಿಳಿದು ಬರುವದು. ಇದರ ಹೊರತು ಬುಕರನಿಗೆ ಸತ್ಯಮಾತಾಡುವ ಹಾಗೂ ಪ್ರಾಮಾಣಿಕತನದಿಂದ ನಡೆಯುವ ಚಟವು ಬಿದ್ದಿತ್ತು. ಕಾರಖಾನೆಯಲ್ಲಿ ನಾನು 'ಹೀಗೆ ಕೆಟ್ಟ ಕೆಲಸ ಮಾಡಿದೆ' ನೆಂಬದನ್ನು ಸ್ವತಃ

ತಾನೇ ತನ್ನ ಚರಿತ್ರೆಯಲ್ಲಿ ಬರೆದಿಟ್ಟಿದ್ದಾನೆ. ಎಂಥ ಸರಳಸ್ವಭಾವವಿದು!!

ಅವನು ಈ ಸಾಲೆಗೆ ಹೋಗಹತ್ತಿದಾಗಲೇ ಎರಡು ತೊಂದರೆಗಳುಂಟಾದವು. ಒಂದನೇದು–ತಲೆಗೆ ಹಾಕಲಿಕ್ಕೆ ಟೊಪ್ಪಿಗೆಯು ಬೇಕಾದದ್ದು. ಎರಡನೆಯದು–ತನ್ನ ಹೆಸರನ್ನು ಬೆಳಿಸಿ ಹೆಚ್ಚು ಮಾಡುವದು. ಮೊದಲನೇ ಅಡಚಣಿಯನ್ನು ಅವನು ತನ್ನ ತಾಯಿಯಿಂದ ಹೇಗೆ ದೂರಮಾಡಿಕೊಂಡನೆಂಬುದು ಉಪೋದ್ಘಾತದಲ್ಲಿಯೇ ಹೇಳಿರುತ್ತದೆ. ಬುಕರನ ಸಂಗಡ ಸಾಲೆಗೆ ಬರುವ ಉಳಿದ ನಿಗ್ರೋ ಹುಡುಗರ ಹೆಸರುಗಳು ಬಹುಶಃ ಎರಡು ಅಕ್ಷರದವೇ ಇದ್ದವು. ಸಾಲೆಗೆ ಹೋಗುವ ತನಕ ನಮ್ಮ ಚರಿತ್ರನಾಯಕನು ‘ಬುಕರ’ನೆಂಬ ಹೆಸರಿನಿಂದಲೇ ಸಂಬೋಧಿಸಲ್ಪಡುತ್ತಿದ್ದು, ಸಾಲೆಗೆ ಹೋಗಹತ್ತಿದಬಳಿಕ ಅವನು ತನ್ನ ಹೆಸರಿನ ಮುಂದೆ‘ ಟೀ. ವಾಶಿಂಗಟನ್’ ಎಂಬ ಹೆಸರನ್ನು ಜೋಡಿಸಿದನು. ಇದರಲ್ಲಿ ‘ವಾಶಿಂಗ್ಟನ್ನ’ ಎಂಬ ಹೆಸರು ಜಾರ್ಜವಾಶಿಂಗ್ಟನ್ನನ ಸ್ಮೃತಿಯನ್ನುಂಟುಮಾಡುವಂಥದಿದ್ದು, ಅದನ್ನು ಅವನು ಅಡ್ಡಹೆಸರಿನಂತೆ ಉಪಯೋಗಿಸಿಕೊಂಡನು; ಆದರೆ ಅವನು ‘ಟೀ’ ಅಕ್ಷರವನ್ನು ಉಪಯೋಗದ ದೃಷ್ಟಿಯಿಂದಾಗಲಿ, ಅರ್ಥದ ದೃಷ್ಟಿಯಿಂದಾಗಲಿ ಜೋಡಿಸಿದವನಲ್ಲ. ಕೆಲಕೆಲವು ಜನರ ಹೆಸರುಗಳು ಮೂರು ಅಕ್ಷರಗಳಿಂದಾಗಿರುವಂತೆ ತನ್ನದಾದರೂ ಇರಬೇಕೆಂದು ಈ ‘ಟೀ’ ಅಕ್ಷರವನ್ನು ಮಧ್ಯದಲ್ಲಿ ಸೇರಿಸಿ ಬಿಟ್ಟಿದ್ದನಷ್ಟೇ. ಇರಲಿ. ಮುಂದೆ ತುಸುದಿವಸಗಳು ಹೋದನಂತರ ಹಗಲಿನಲ್ಲಿ ನಡೆಯುವ ಈ ಸಾಲೆಯು ಕಟ್ಟಾಯಿತು. ಹಾಗೂ ಬುಕರನು ಇಡೀ ಹಗಲನ್ನೆಲ್ಲ ತನ್ನ ಭಟ್ಟಿಯ ಕೆಲಸದಲ್ಲಿಯೇ ಕಳೆಯಬೇಕಾಯಿತು. ಆದರೂ ಅವನ ಮಹತ್ವಾಕಾಂಕ್ಷೆಯು ಅಂಥ ಇಂಥದು ಇದ್ದಿಲ್ಲ. ರಾತ್ರಿಯ ಸಾಲೆಗೆ ಹೋಗಬೇಕೆಂದು ಅವನು ನಿಶ್ಚಯಮಾಡಿದನು! ಆ ಊರಲ್ಲಿ ಅವನಿಗಿಂತಲೂ ಹೆಚ್ಚಿಗೆ ಕಲಿತ ಶಿಕ್ಷಕನು ರಾತ್ರಿಯ ಸಾಲೆಗೆ ದೊರೆಯುವ



ಸಂಭವವಿದ್ದಿಲ್ಲ. ಅದರಿಂದ ಅವನು ತನ್ನ ಕೆಲಸವನ್ನು ತೀರಿಸಿಕೊಂಡು ರಾತ್ರಿಯಲ್ಲಿ ಹಲವು ಮೈಲು ದಾರಿಯನ್ನು ನಡೆದು ಎರಡನೇ ಊರಿಗೆ ಹೋಗಿ ಹೊಸಪಾಠವನ್ನು ಕಲಿತು ಬರುವನು! ಬುಕರಟೀ ವಾಶಿಂಗ್ಟನ್ನನ ಶಿಕ್ಷಣವಿಷಯಕವಾದ ಈ ಕುತೂಹಲವನ್ನು ನೋಡಿ ಬಹಳ ಆಶ್ಚರ್ಯವಾಗುತ್ತದೆ. ನಮ್ಮ ಕಡೆಯ ಯಾವ ವಿದ್ಯಾರ್ಥಿಯಲ್ಲಿ ಇದರ ಶತಾಂಶದಷ್ಟಾದರೂ ಹಂಬಲವು ಇರುವದೋ? ಯಾವ ಪ್ರಕಾರದ ಅನುಕೂಲತೆಯೂ ಇಲ್ಲದೆ ಹಗಲೆಲ್ಲ ದುಡಿದು ಬೇಸತ್ತಿರುವಾಗ, ಕೇವಲ ೫–೬ ವರ್ಷದ ಹುಡುಗನು ಶಿಕ್ಷಣದ ವಿಷಯವಾಗಿ ಇಷ್ಟು ಮರಗುತ್ತಿರುವದನ್ನು ನೋಡಿದರೆ ಇವನಿಗೆ ‘ಅನುಕರಣೀಯ’ ವಿದ್ಯಾರ್ಥಿ ಎಂಬ ಹೆಸರನ್ನು ಯಾಕೆ ಉಪಯೋಗಿಸಬೇಕೆಂಬದು ತಿಳಿದುಬರಬಹುದು. ರಾತ್ರಿಯ ಸಾಲೆಗೆ ಹೋಗಹತ್ತಿದಾಗ ಬುಕರನು ಹಗಲಿನಲ್ಲಿ ಕಲ್ಲಿದ್ದಲ್ಲಿಯ ಕಣಿಯಲ್ಲಿ ಕೆಲಸ ಮಾಡಬೇಕಾಗುತ್ತಿತ್ತು. ಅವನು ಬರೆದಿಟ್ಟಿರುವದೇನಂದರೆ—“ಪ್ರತಿಯೊಬ್ಬರು ತಮ್ಮ ಯಶಸ್ಸಿನ ಬೆಲೆಯನ್ನು ತಾವು ತೊಂದರೆಗಳಿಗೆ ಎಷ್ಟು ಎದೆಗೊಟ್ಟು ಕಾದಿದೆವು ಎಂಬದರಮೇಲಿಂದ ನಿಶ್ಚಯಿಸಬೇಕು.” ಸರ್ವಪ್ರಕಾರದ ಸಾಧನಗಳ ಸಹಾಯದಿಂದ ದೊರಕಿಸಿದ ಯಶಸ್ಸಿಗೆ ನಿಜವಾದ ಬೆಲೆಯೇ ಇಲ್ಲ. ಬುಕರನು ಮತ್ತೊಂದು ಕಡೆಗೆ ಅನ್ನುವದೇನಂದರೆ—“ನಾನು ತೀರ ದಾರಿದ್ರ್ಯಾವಸ್ಥೆಯಲ್ಲಿಯೂ, ಹೀನಕುಲದಲ್ಲಿಯೂ ಹುಟ್ಟಿಬಂದದ್ದೇ ಲೇಸಾಯಿತು. ಕಾರಣವೇನಂದರೆ–ಇದರಿಂದಲೇ ನನ್ನಲ್ಲಿ ಶಿಕ್ಷಣಲಾಲಸೆಯು ಉತ್ಕಟತೆಯಿಂದ ಉತ್ಪನ್ನವಾಯಿತು!” ಈ ಕಾಲಕ್ಕೆ ಯುರೋಪಿಯನ್ನರು ನಿಗ್ರೋ ಜನರನ್ನು ಅತ್ಯಂತ ನೀಚರೆಂದು ತಿಳಿಯುತ್ತಿದ್ದರು. ಹಾಗೂ ಅವರಿಗೆ ಸಾಮಾಜಿಕ ಸಮತೆಯ ಯಾವ ಹಕ್ಕುಗಳನ್ನೂ ಕೊಟ್ಟಿದ್ದಿಲ್ಲ. ಹೀಗಿರುವಾಗ ಬುಕರನು ತೆಗೆದ ಮುಂದಿನ ಉದ್ಗಾರಗಳು ಲಕ್ಷದಲ್ಲಿಡುವಂಥವವೆ. ಅವನುಅ ಂದದ್ದೇನಂದರೆ—‘ಯೋಗ್ಯತೆಯು ಅಥವಾ

Digitized by ROJA MUTHIAH RESEARCH LIBRARY

ಶ್ರೇಷ್ಠತೆಯು ಯಾವದೇ ಬಣ್ಣದ ಮನುಷ್ಯನಲ್ಲಿರಲಿ, ಕಡೆಗೆ ಅದು ಪ್ರಕಟವಾಗುವದು, ಹಾಗು ವಿಜಯಿಯಾಗುವದು ನಿಜವು.' ತಾನು ಯಾವದೇ ಪರಿಸ್ಥಿತಿಯಲ್ಲಿರಲಿ, ಅದನ್ನೇ ಸಮಾಧಾನಮಾಡಿಕೊಂಡು, ಅದರಲ್ಲಿಯೇ ತನ್ನ ಉನ್ನತಿಯನ್ನು ಮಾಡಿಕೊಳ್ಳುವ ಬುಕರನ ಪ್ರಯತ್ನವನ್ನು ಪ್ರತಿಯೊಬ್ಬ ವಿದ್ಯಾರ್ಥಿಯು ಲಕ್ಷದಲ್ಲಿಟ್ಟುಕೊಳ್ಳಬೇಕು.

---

## ೩ನೇ ಪ್ರಕರಣ.

### ಶಿಕ್ಷಣದ ಕುತೂಹಲ.

ಬುಕರನು ಮಾಲ್ಡನದಲ್ಲಿ ೧೦-೧೧ ವರ್ಷದವನಾಗುವವರೆಗೆ ಇದ್ದನು. ಅಲ್ಲಿ ಇದ್ದಲಿಯ ಕಣಿಯೊಳಗೆ ಕೆಲಸಮಾಡುತ್ತಿರುವಾಗ "ನಿಗ್ರೋಜನರ ಸಲುವಾಗಿ ಹಾಂಪಟನ್ನ ಗ್ರಾಮದಲ್ಲಿ ಆರ್ಮಸ್ಟ್ರಾಂಗ ಎಂಬ ಹೆಸರಿನ ಉದಾರ ಯುರೋಪಿಯನ್ ಗೃಹಸ್ಥನೊಬ್ಬನು ಒಂದು ಸಾಲೆಯನ್ನು ಸ್ಥಾಪಿಸಿರುವನೆಂದೂ, ಈ ಸಾಲೆಯಲ್ಲಿ ಬೇರೆ ಬೇರೆ ಉದ್ಯೋಗಗಳನ್ನು ಮಾಡಿ ಹೊಟ್ಟೆ ತುಂಬಿಕೊಳ್ಳಲಿಕ್ಕೆ ಬರುವದೆಂದೂ" ಇಬ್ಬರು ಒಡ್ಡರು ತಮ್ಮ ತಮ್ಮೊಳಗೆ ಮಾತಾಡುತ್ತಿರುವದನ್ನು ಬುಕರನು ಕೇಳಿದನು. ಈ ಶಾಲಾಸಂಸ್ಥೆಯ ಹೆಸರು "ಹಾಂಪಟನ್ ನಾರ್ಮಲ್ ಆ್ಯಂಡ ಅಗ್ರಿಕಲ್ಚರಲ್ ಇನ್ಸಿಟ್ಯೂಟ" ಎಂಬದಾಗಿತ್ತು. ಬುಕರನಲ್ಲಿ ಕಲಿಯುವ ಕುತೂಹಲವು ಬಹಳವಾಗಿದ್ದದರಿಂದ ಆ ಸಾಲೆಗೆ 'ನಾನು ಎಂದು? ಹೇಗೆ ಹೋದೇನೆ' ಂಬದರ ಚಿಂತೆಯಲ್ಲಿಯೇ ಅವನು ಬಿದ್ದನು. ಹಾಂಪಟನ್ನವು ಮಾಲ್ಡನದಿಂದ ಸುಮಾರು ಐದುನೂರು ಮೈಲು ದೂರವಾಗಿತ್ತು. ಇಷ್ಟು ಅಂತರವನ್ನು ಪ್ರವಾಸ ಮಾಡಲಿಕ್ಕೆ ಮಾರ್ಗದಲ್ಲಿ ಕೆಲಮಟ್ಟಿಗಾದರೂ ವೆಚ್ಚ ಹತ್ತುವದು

Digitized by ROJA MUTHIAH RESEARCH LIBRARY



ಸ್ವಾಭಾವಿಕವು. ಆದರೆ ಬುಕರನ ಹತ್ತರ ಒಂದು ಪೈಸಹ ಇಲ್ಲದ್ದರಿಂದ ಮಾರ್ಗದ ವೆಚ್ಚವನ್ನು ಹೇಗೆ ದೊರಕಿಸಬೇಕೆಂಬ ವಿವಂಚನೆಯು ಅವನಿಗುಂಟಾಯಿತು. ಆದರೆ ಇಚ್ಛೆಯಿದ್ದಲ್ಲಿ ಮಾರ್ಗ ದೊರಿಯುವದೆಂಬ ನ್ಯಾಯದಿಂದ ಬುಕರನು ಈ ವೆಚ್ಚದ ವ್ಯವಸ್ಥೆಗಾಗಿ ಒಂದು ಹಂಚಿಕೆಯನ್ನು ಹುಡುಕಿತೆಗೆದನು. ಬುಕರನು ಕೆಲಸ ಮಾಡುತ್ತಿದ್ದ ಕಾರಖಾನೆಯ ಒಡೆಯನಾದ 'ಜನರಲ್ ಲೇವಿಸ ರಫನರನ' ಮನೆಯಲ್ಲಿ ಒಬ್ಬ ಆಳಿನ ಆವಶ್ಯಕತೆಯಿದ್ದದ್ದನ್ನು ನೋಡಿ ಅಲ್ಲಿಯೇ ಈಗ ಅವನು ದುಡಿಯಲಿಕ್ಕೆ ನಿಂತನು.

ರಫನರ ಸಾಹೇಬನ ಹೆಂಡತಿ 'ವ್ಹಾಯೋಲಾ ರಫನರ' ಇವಳ ಸ್ವಭಾವವು ಸ್ವಲ್ಪ ಸಿಟ್ಟಿನದಾಗಿತ್ತು. ಅವಳು ವ್ಯವಸ್ಥಿತತನಕ್ಕೂ, ಶಿಸ್ತಿಗೂ ಮೆಚ್ಚಿದವಳು. ಆದ್ದರಿಂದ ಅವಳ ಮನೆಯಲ್ಲಿ ಯಾವ ಆಳೂ ಬಹು ದಿವಸ ತಡೆಯುತ್ತಿದ್ದಿಲ್ಲ. ಆದರೆ ಬುಕರನು ಮಾತ್ರ ಅಲ್ಲಿ ದುಡಿಯಹತ್ತಿದ ಬಳಿಕ ತನ್ನ ಒಡತಿಯ ಪ್ರಿತಿಯನ್ನು ಸಂಪಾದಿಸಿದನು; ಇಷ್ಟೇ ಅಲ್ಲ; ತನ್ನ ಆಯುಷ್ಯದೊಳಗಿನ ಅನೇಕ ಪ್ರಸಂಗಗಳಲ್ಲಿ ಅವಳಿಂದ ಸಹಾಯವನ್ನು ಹೊಂದಿದನು. ನಿಯಮಿತ ವೇಳೆಗೆ ವ್ಯವಸ್ಥಿತವಾದ ಕೆಲಮಾಡುವದರಲ್ಲಿ ಬುಕರನು ಸಿದ್ಧನಾಗಿರುತ್ತಿದ್ದನು. ಮೈಗಳ್ಳತನವು ಅವನಿಗೆ ಮೂಲತಃ ಗೊತ್ತು ಇರಲಿಲ್ಲ. ಅದರಿಂದ ಅವನ ಒಡೆಯರು ಅವನ ವಿಷಯದಲ್ಲಿ ಯಾವಾಗಲೂ ಸದಭಿಪ್ರಾಯವುಳ್ಳವರಾಗಿದ್ದರು; ಆದರೆ ಅವನು ಇನ್ನೂ ಚಿಕ್ಕವನಾದುದರಿಂದ ಸಂಬಳವು ಮಾತ್ರ ಸ್ವಲ್ಪ ಸಿಗುತ್ತಿತ್ತು. ಅದರಿಂದ ಅವನ ಹತ್ತರ ಧನಸಂಚಯವು ಎಷ್ಟುಮಾತ್ರವೂ ಇರುತ್ತಿದ್ದಿಲ್ಲ. ರಫನರನ ಮನೆಯಲ್ಲಿ ಹೀಗೆ ಒಂದೂ ಅರ್ಧ ವರುಷ ಕಳೆದ ಬಳಿಕ ಇ. ಸ. ೧೮೭೨ ರಲ್ಲಿ ಹಂಪಟನ್ನಿಗೆ ಹೋಗುವ ಇಚ್ಛೆಯು ಪುನಃ ಅವನಲ್ಲಿ ಭರದಿಂದ ಉದ್ಭವಿಸಿತು. ಇದೇ ಕಾರಣದ ಮೂಲಕ ಅವನು ತನ್ನ ಸೇವಾವೃತ್ತಿಯನ್ನು ಬಿಟ್ಟುಕೊಟ್ಟು ತನ್ನ ತಾಯಿಯ ಹತ್ತರ ಬಂದು

ಆಕೆಗೆ ತನ್ನ ವಿಚಾರಗಳನ್ನು ತಿಳಿಸಿದನು. ತನ್ನ ಮಗನು ಬಹು ದೂರವಾಗಿರುವ ಊರಿಗೆ ಹೋಗುವ ವಿಚಾರ ಮಾಡಿದ್ದು ಕೇಳಿ, ಅವಳಿಗೆ ಕೆಡಕೆನಿಸಿದರೂ ಅಲ್ಲಿ ತನ್ನ ಮಗನ ಕಲ್ಯಾಣವಾಗುವದೆಂಬ ನಂಬಿಗೆಯಾದ್ದರಿಂದ ಅವಳು ಬುಕರನ ವಿಚಾರಗಳಿಗೆ ಸಹಾನುಭೂತಿಯನ್ನೇ ತೋರಿಸಿದಳು. ತಾಯಿಯ ಹೊರತು ಅವನ ಈ ಕೆಲಸಕ್ಕೆ ಬೇರೆ ಯಾರೂ ಒಪ್ಪಿಗೆಯನ್ನು ಕೊಡಲಿಲ್ಲ. ಕೆಲವರಂತೂ ಅವನ ಈ ವಿಚಾರಗಳಿಗೆ ದೋಷವನ್ನೇ ಕೊಟ್ಟರು. ಇದೇ ವೇಳೆಗೆ ಬುಕರನ ತಾಯಿಯು ಅತ್ಯಂತ ರೋಗಗ್ರಸ್ತಳಾದಳು. ತಿರುಗಿ ಅವಳ ದರ್ಶನವು ತನಗೆ ಆಗುವದೋ ಇಲ್ಲವೋ ಎಂಬ ಶಂಕೆಯು ಬುಕರನಲ್ಲಿ ಉತ್ಪನ್ನವಾಯಿತು. ಆದರೂ ಶಿಕ್ಷಣಾಪೇಕ್ಷಿಯಾದ ಅವನು ಯಾವದಕ್ಕೂ ಮೋಹಿತನಾಗದೆ ಮನೆಯಲ್ಲಿದ್ದ ಚೂರು ಚಾರು ಅರವಿಗಳನ್ನು ಒಂದು ಚೀಲದಲ್ಲಿ ತುಂಬಿಕೊಂಡು ಹಂಪಟನ್ನಿಗೆ ಹೋಗುವದಕ್ಕೆ ಹೊರಟನು. ತಾಯಿಯು ಮಗನ ಮೋರೆಯ ಮೇಲೆ ಪ್ರೀತಿಯಿಂದ ಕೈಯಾಡಿಸಿ, ಅಶ್ರುಪೂರ್ಣ ನೇತ್ರಗಳಿಂದ ಅವನಿಗೆ ಆಶೀರ್ವಾದ ಮಾಡಿದಳು. ಅವಳ ಕಡೆಗೆ ಮಗನಿಗೆ ಕೊಡಲಿಕ್ಕೆ ದುಡ್ಡುದುಗ್ಗಾಣಿಗಳೇನೂ ಇದ್ದಿಲ್ಲ; ಆದರೆ ಪ್ರೇಮಾನ್ವಿತೆಯಾದ ತಾಯಿಯ ಆಶೀರ್ವಾದಕ್ಕೆ ದುಡ್ಡುದುಗ್ಗಾಣಿಗಳು ಸರಿಯಾಗಬಲ್ಲವೇ? ಬುಕರನ ಶಿಕ್ಷಣದ ಲಾಲಸೆಯನ್ನು ಕಂಡು ಅವನ ಅಣ್ಣನೂ ಸ್ವಲ್ಪ ಸಹಾಯ ಮಾಡಿದನು. ಅವನ ಹತ್ತರವಾದರೂ ದುಡ್ಡು ಎಲ್ಲಿಂದ ಬರಬೇಕು? ಕೆಲವು ಮುಪ್ಪಿನ ನಿಗ್ರೋ ಜನರು ತಮ್ಮ ಜಾತಿಯ ಒಬ್ಬ ಹುಡುಗನು ಜಾಣನಾಗುತ್ತಾನೆಂದು ಬಗೆದು, ಆಣೆ ಎರಡಾಣೆಯಂತೆ ವರ್ಗಣಿಯನ್ನು ಕೂಡಿಸಿ ಬುಕರನಿಗೆ ಕೊಟ್ಟದ್ದಲ್ಲದೆ ಕೆಲವರು ಹರಕು ಹಳೇ ಬಟ್ಟೆಗಳ ಸಹಾಯವನ್ನಾದರೂ ಮಾಡಿದರು.

ಬುಕರನಿಗೆ ಪ್ರವಾಸದಲ್ಲಿ ಬಹಳ ತೊಂದರೆಯಾಯಿತು. ಈಗ ಅವನ ವಯಸ್ಸು ೧೩–೧೪ ವರ್ಷದ್ದಿತ್ತು. ಹಂಪಟನ್ನವು ಬಹಳ



ದೂರವಾಗಿತ್ತು. ಅಲ್ಲಿಯವರೆಗೆ ಉಗೆಬಂಡಿಯಿಂದ ಹೋಗಲಿಕ್ಕೆ ಸಾಕಾಗುವಷ್ಟು ದುಡ್ಡು ಅವನಲ್ಲಿದ್ದಿಲ್ಲ. ಹಾಗೂ ಅವನು ನಿಗ್ರೋ ಮನುಷ್ಯನಾದ್ದರಿಂದ ಉಗೆಬಂಡಿ, ಭೋಜನಗೃಹ, ಮುಂತಾದ ಬೇಕಾದ ಸ್ಥಳಗಳಲ್ಲಿಯೂ ಅವನಿಗೆ ಪ್ರತಿಬಂಧವಾಗುವಂತಿತ್ತು. ಕಾರಣ ಅವನು ಕೆಲವು ದಾರಿಯನ್ನು ಒಂದು ಸಾದಾತರದ ಚಕ್ಕಡಿಯ ಮೇಲಿಂದ ಪ್ರವಾಸಮಾಡಿ ರಾತ್ರಿಗೆ ಒಂದು ಊರಿಗೆ ಹೋಗಿ ಮುಟ್ಟಿ ಅಲ್ಲಿದ್ದ ಒಂದು ಭೋಜನಗೃಹವನ್ನು ಸೇರಿದನು. ಆದರೆ ಅವನ ಕಪ್ಪುದೊಗಲಿನದಿಷ್ಟೇ ನೆವಮಾಡಿ ಭೋಜನಗೃಹದ ಯಜಮಾನನು ಅವನಿಗೆ ಊಟಹಾಕಲಿಕ್ಕೂ, ಇರುವದಕ್ಕೆ ಸ್ಥಳವನ್ನು ಕೊಡಲಿಕ್ಕೂ ಅಲ್ಲಗಳೆದನು! ಆಗಿನ ದಿವಸಗಳು ಥಂಡಿಯವಾಗಿದ್ದು ಬುಕರನ ಹತ್ತರ ತಕ್ಕಷ್ಟು ಹಾಸಿಗೆಹೊದಿಕೆಗಳು ಇದ್ದಿಲ್ಲ. ಅದರಿಂದ ಅವನು ನಿರುಪಾಯನಾಗಿ ಓಣಿಯಲ್ಲಿ ಅತ್ತಿತ್ತ ಓಡಾಡಿ, ಶರೀರದೊಳಗೆ ಸ್ವಲ್ಪ ಉಷ್ಣತೆಯನ್ನುಂಟುಮಾಡಿಕೊಂಡು, ಉಪವಾಸದಿಂದಲೇ ರಾತ್ರಿಯನ್ನು ಕಳೆಯಬೇಕಾಯಿತು! ಮುಂದೆ ಅವನು ಹಾದಿಯಲ್ಲಿ ಹತ್ತುವ ಊರುಗಳಲ್ಲಿ ಯಾವದೊಂದು ಕೂಲಿಯನ್ನು ಮಾಡಿ ಹೊಟ್ಟೆ ತುಂಬಿಕೊಂಡು ರೊಕ್ಕ ಉಳಿದರೆ ಬಂಡಿಯ ಮೇಲಿಂದ ಪ್ರವಾಸಮಾಡುತ್ತ, ಕಡೆಗೆ ಹಂಪಟನ್ನಿನಿಂದ ೮೨ ಮೈಲುಗಳ ಮೇಲಿರುವ ರಿಚಮಂಡ ಶಹರಕ್ಕೆ ರಾತ್ರಿಯಲ್ಲಿ ಬಂದುಮುಟ್ಟಿದನು. ರಾತ್ರಿಯಾದುದರಿಂದ ಅವನಿಗೆ ತಿನ್ನಲಿಕ್ಕೆ ಅನ್ನವೂ, ಇಳಿದುಕೊಳ್ಳಲಿಕ್ಕೆ ಮನೆಯೂ ದೊರೆಯಲಿಲ್ಲ. ಹಗಲಿನಲ್ಲಿಯೂ ಕೂಡ ಅವನಿಗೆ ಏನೂ ಆಹಾರವು ಸಿಗದ್ದರಿಂದ ಹಸಿವೆಯಿಂದ ಅವನ ಪ್ರಾಣವು ವ್ಯಾಕುಲವಾಗಿತ್ತು. ಆದರೆ ಮಾಡುವದೇನು? ಕಡೆಗೆ ಶಹರದ ಹೊರಗೆ ಒಂದು ಹಾದಿಗೆ ಹೊಂದಿರುವ ದಿನ್ನೆಯ ಮೇಲೆ, ತನ್ನ ಅರವಿಯ ಚೀಲವನ್ನು ತಲೆಗಿಂಬುಮಾಡಿಕೊಂಡು ಅವನು ಮಲಗಿಕೊಂಡನು. ಚಳಿಯು ಬಹಳ. ಹಾದಿಯ ಮೇಲೆ ಹೋಗಿಬರುವ ಬಂಡಿಗಳ ಸಪ್ಪಳ. ಹೀಗಾಗಿ ಇಡೀ ರಾತ್ರಿಯಲ್ಲಿ



Digitized by ROJA MUTHIAH RESEARCH LIBRARY

ಅವನಿಗೆ ಕಣ್ಣಿಗೆ ಕಣ್ಣು ಹತ್ತಲಿಲ್ಲ. ಎರಡನೇ ದಿವಸ ಯಾವದಾದರೊಂದು ಕೆಲಸ ಹತ್ತಬಹುದೆಂದು ಅವನು ಶಹರದಲ್ಲೆಲ್ಲ ತಿರುಗಾಡಿದರೂ ಅದೆಲ್ಲ ವ್ಯರ್ಥವಾಯಿತು. ಅವನ ಬಳಿಯಲ್ಲಿ ಒಂದು ಪೈಸಹ ಇದ್ದಿಲ್ಲ. ಈ ಸ್ಥಿತಿಯಲ್ಲಿ ಅವನ ಹೊಟ್ಟೆಗೇನು ದೊರೆಯಬೇಕು? ನಮ್ಮ ದೇಶದಂತೆ ಅಮೇರಿಕದಲ್ಲಿ ಭಿಕ್ಷುಕರಿಗೆ ಭಿಕ್ಷೆಯನ್ನು ಹಾಕುವದಿಲ್ಲ. ಆ ದೇಶದ ಕಾಯದೆಯಂತೆ ಭಿಕ್ಷೆ ಬೇಡುವವರಿಗೆ ಶಿಕ್ಷೆಯಾಗುವದು. ಯಾವದೊಂದು ಕೆಲಸವನ್ನು ಮಾಡಿಯೇ ಅಲ್ಲಿ ಹೊಟ್ಟೆಯನ್ನು ತುಂಬಿಕೊಳ್ಳಲಿಕ್ಕೆ ಬೇಕು. ಅರ್ಥಾತ್ ಎರಡನೆಯ ದಿವಸವೂ ಬುಕರನು ಉಪವಾಸವಿರಬೇಕಾಯಿತು. ಹಾಗೂ ಅಂದಿನ ರಾತ್ರಿಯನ್ನಾದರೂ ಮುನ್ನಾ ದಿವಸ ಆಶ್ರಯಿಸಿಕೊಂಡ ಸ್ಥಳದಲ್ಲಿಯೇ ಕಳೆಯಬೇಕಾಯಿತು. ಅವನು ತನ್ನ ಚರಿತ್ರದಲ್ಲಿ ಬರೆದಿಟ್ಟದ್ದೇನಂದರೆ—“ನಾನು ದಣಿದೆನು; ಶಕ್ತಿಹೀನನಾದೆನು; ಉಪವಾಸ ಬಿದ್ದೆನು; ಎಲ್ಲ ತರದ ಕಷ್ಟವನ್ನನುಭವಿಸಿದೆನು; ಆದರೆ ನಿರಾಶನಾಗಲಿಲ್ಲ.” ಸುತ್ತಿಗೆಯ ಹೊಡತಗಳನ್ನು ಸಹಿಸಿದ ಹೊರತು ಪಾಷಾಣಕ್ಕೆ ದೇವತ್ವವು ಪ್ರಾಪ್ತವಾಗುವದಿಲ್ಲೆಂದು ಜನರಾಡುವ ಮಾತು ಸತ್ಯವು. ಎಲ್ಲ ವಿಘ್ನಗಳಿಗೂ ಬುಕರನು ತಲೆಗೊಟ್ಟು ನಿಂತನು. ರಿಚಮಂಡಕ್ಕೆ ಬಂದ ಮೂರನೆಯ ದಿವಸ ಅವನಿಗೆ ಅಲ್ಲಿ ಒಂದು ಕೆಲಸವು ದೊರೆಯಿತು. ಆ ಕೆಲಸವನ್ನು ಮಾಡಿ ಬಂದ ದುಡ್ಡಿನಿಂದ ಅವನು ಒಂದು ಸ್ಥಳದಲ್ಲಿ ಊಟವನ್ನು ಮಾಡಿ ಮಲಗಿಕೊಳ್ಳಲಿಕ್ಕೆ ಸ್ಥಳವನ್ನೂ ದೊರಕಿಸಿದನು. ಮುಂದೆ ಅವನು ಕೆಲವು ದಿವಸ ಅದೇ ಶಹರದಲ್ಲಿದ್ದುಕೊಂಡು, ಹಾದಿಯ ಖರ್ಚಿಗೆ ಸಾಲುವಷ್ಟು ದುಡ್ಡುಗಳಿಸಿ ಹಂಪಟನ್ನಕ್ಕೆ ಹೊರಟನು. ಕೊನೆಗೆ ಅವನು ಒಮ್ಮೆ ತನ್ನ ಇಚ್ಛಿತ ಸ್ಥಳಕ್ಕೆ ಹೋಗಿ ಮುಟ್ಟಿದನು. ಶಿಕ್ಷಣವಿಷಯದಲ್ಲಿ ಇಷ್ಟ ಲವಲವಿಕೆಯು ನಮ್ಮ ಕಡೆಯ ಯಾವ ವಿದ್ಯಾರ್ಥಿಗಾದರೂ ಇರುವದೋ? ಬಾಲಮಿತ್ರರೇ, ಬುಕರನ ಈ ಉದಾಹರಣೆಯನ್ನು ಕಣ್ಣೆದುರಿಗೆ ಇಟ್ಟುಕೊಳ್ಳಿರಿ.



# ೪ನೇ ಪ್ರಕರಣ.

## ಹಾಂಪಟನ್ ಸಾಲೆಯ ಪ್ರವೇಶಪರೀಕ್ಷೆಯು.

ಹಂಪಟನ್ನಿಗೆ ಹೋಗಿ ಮುಟ್ಟಿದ್ದರಿಂದ ಬುಕರನಿಗೆ ಬಹಳ ಆನಂದವಾಯಿತು. ಇಷ್ಟು ಕಷ್ಟಬಟ್ಟದ್ದಕ್ಕೂ ಕೊನೆಗೆ ಇಷ್ಟಸ್ಥಳಕ್ಕೆ ಮುಟ್ಟಿದ್ದರಿಂದ ಅವನಿಗೆ ಹಿಡಿಸಲಾರದಷ್ಟು ಸಮಾಧಾನವಾಯಿತು. ಹಂಪಟನ್ನ ಸಾಲೆಯ ಕಟ್ಟಡದಂಥ ಸುಂದರವಾದ ಇಮಾರತಿಯನ್ನು ಅವನು ಈ ಮೊದಲು ಎಂದೂ ನೋಡಿದ್ದಿಲ್ಲ. ಸಾಲೆಯ ವಾತಾವರಣದಲ್ಲಿ ಬರುತ್ತಲೆ ಅವನಿಗೆ “ನಾನು ಸ್ವರ್ಗದಲ್ಲಿದ್ದೇನೆ.” ಎಂಬ ಭಾವನೆಯಾಯಿತು. ಆದರೆ ಒಳಗೆ ನನ್ನ ಪ್ರವೇಶವು ಹೇಗಾಗುವದು? ನನ್ನ ಹೆಸರು ಶಾಲೆಯ ಪಟದಲ್ಲಿ ಹೇಗೆ ಬರೆಯಲ್ಪಡುವದು? ಈ ಮುಂತಾದ ವಿಷಯಗಳ ಚಿಂತೆಯು ಅವನಿಗುಂಟಾಯಿತು. ಪ್ರವಾಸದಿಂದ ಅವನ ಮುಖಲಕ್ಷಣವು ನಿಸ್ತೇಜವಾಗಿತ್ತು. ಹಾಗೂ ಅವನ ಅರಿವೆಗಳೆಲ್ಲ ಮಲಿನವಾಗಿದ್ದವು. ಇಂಥ ಸ್ಥಿತಿಯಲ್ಲಿ ಪರೀಕ್ಷಕರಿಗೆ ನನ್ನ ನಿಜವಾದ ಪರೀಕ್ಷೆಯು ಹೇಗಾಗುವದು? ಒಬ್ಬ ಸೋಮಾರಿ ಹುಡುಗನೆಂದು ಹಿಂದಕ್ಕಟ್ಟಿಬಿಟ್ಟರೆ ಏನು ಮಾಡಬೇಕು? ಎಂಬ ವಿಚಾರತರಂಗಗಳು ಅವನನ್ನು ಬಲವಾಗಿ ಬಾಧಿಸತೊಡಗಿದವು. ಕಡೆಗೆ ಅವನು ಹಂಪಟನ್ನ ಶಾಲಾಸಂಸ್ಥೆಯ ಮುಖ್ಯಾಧ್ಯಾಪಿಕೆಯರಾದ ಮಿಸ್ ಮೇರಿ ಮ̆ಕಿ ಎಂಬವರ ಭೆಟ್ಟಿಯಾಗಿ ತನ್ನನ್ನು ಯಾವದಾದರೊಂದು ವರ್ಗದಲ್ಲಿ ಸೇರಿಸಿಕೊಳ್ಳಬೇಕೆಂದು ವಿನಂತಿಮಾಡಿಕೊಂಡನು. ಮೊದಮೊದಲು ಬುಕರನ ವಿಷಯಕ್ಕೆ ಮಿಸ್ ಮ̆ಕಿಯವರ ಅನಕೂಲಗ್ರಹವಾಗಲಿಲ್ಲ. ಅವನನ್ನು ಸಾಲೆಯಲ್ಲಿ ಸೇರಿಸಿಕೊಳ್ಳಬೇಕೋ, ಸೇರಿಸಿಕೊಳ್ಳಬಾರದೋ ಎಂಬ ನಿಶ್ಚಿತವಿಚಾರವು ಅವರಿಗಾಗಲಿಲ್ಲ. ಮಧ್ಯಂತರ ಬುಕರನ ಕಣ್ಮುಟ್ಟ ಅವರು ಬೇರೆ

Digitized by ROJA MUTHIAH RESEARCH LIBRARY

ವಿದ್ಯಾರ್ಥಿಗಳನ್ನು ಸಾಲೆಯಲ್ಲಿ ಸೇರಿಸಿಕೊಂಡದ್ದನ್ನು ನೋಡಿಯಂತೂ ಬುಕರನ ಚಿಂತೆಯು ಮತ್ತಿಷ್ಟು ಬೆಳೆಯಿತು. ಅವನಿಗೆ ತನ್ನ ಯೋಗ್ಯತೆಯನ್ನು ತೋರಿಸಲಿಕ್ಕೆ ಯೋಗ್ಯ ಸಂಧಿಯೇ ಸಿಗಲೊಲ್ಲದು. ಕೆಲವು ವೇಳೆಯ ಮೇಲೆ ಮಿಸ್ ಮಕಿ ಇವರು ಬುಕರನಿಗೆ " ಸಮೀಪದ ಕೋಣೆಯನ್ನು ಉಡುಗಿ ಝುಳಝುಳ ಮಾಡತಕ್ಕದ್ದದೆ. ಕಸಬರಿಗೆಯನ್ನು ತಕ್ಕೊಂಡು ಅದನ್ನು ಉಡುಗಿ ಬಿಡು. " ಎಂದು ಹೇಳಿದರು. ಈಗ ಮಾತ್ರ ಬುಕರನಿಗೆ ಅತ್ಯಾನಂದವಾಯಿತು. ತನ್ನ ಯೋಗ್ಯತೆಯನ್ನು ತೋರಿಸುವ ಸಂಧಿಯು ಈಗ್ಗ ಒದಗಿ ಬಂತೆಂದು ಅವನು ತಿಳಿದುಕೊಂಡನು. ಯುರೋಪಿಯನ್ ಸ್ತ್ರೀಯರಿಗೆ ಸ್ವಚ್ಛತೆಯು ಎಷ್ಟು ಸೇರುತ್ತದೆಂಬದನ್ನು ಅವನು ರಫನರನ ಮನೆಯಲ್ಲಿರುವಾಗಲೇ ಮನಗಂಡಿದ್ದನು. ಹಾಗೂ ಯಾವದೊಂದು ಸ್ಥಳವನ್ನು ಉಡುಗಿ ಹೇಗೆ ಸ್ವಚ್ಛಮಾಡಬೇಕೆಂಬದನ್ನು ಅವನು ಅಲ್ಲಿಯೇ ಕಲಿತುಕೊಂಡಿದ್ದನು. ಆದ್ದರಿಂದ ಅವನು ತನಗೊಪ್ಪಿಸಿದ ಕೆಲಸವನ್ನು ಬಹಳ ಉತ್ತಮರೀತಿಯಿಂದ ಮಾಡಿದನು. ಮೂರು ನಾಲ್ಕು ಸಾರೆ ಅವನು ಕೋಣೆಯನ್ನು ಉಡುಗಿದನು. ಹಾಗೂ ಅರಿವೆಯನ್ನು ತಕ್ಕೊಂಡು ಸಂದಿಗೊಂದಿಗಳಲ್ಲಿದ್ದ ಕಸವನ್ನು ಸಹ ತೆಗೆದುಹಾಕಿದನು. ಈ ಕೆಲಸದಿಂದಲೇ ಪವಿತ್ರವಾದ ಈ ಶಾಲೆಯಲ್ಲಿ ತನ್ನ ಪ್ರವೇಶವಾಗುವದೆಂದು ಬುಕರನಿಗೆ ದೃಢವಾದ ನಂಬಿಗೆಯಾಗಿತ್ತು. ಅದರಿಂದಲೇ ಮನಃಪೂರ್ವಕವಾಗಿ ಅವನು ತನ್ನ ಕೆಲಸವನ್ನು ಮಾಡಿದನು.

ಕೋಣೆಯನ್ನು ಝುಳ ಝುಳ ಮಾಡುವದಾದ ಬಳಿಕ ಬುಕರನು ಮೇರಿ ಮಕಿಯವರ ಕಡೆಗೆ ಹೋಗಿ ಈ ಸಂಗತಿಯನ್ನು ತಿಳಿಸಿದನು. ಮಕಿಯವರು ಅತ್ಯಂತ ಸ್ವಚ್ಛತಾ ಪ್ರಿಯರಾಗಿದ್ದರು. ಧೂಳವು ಎಲ್ಲಿ ಇರುವದು ? ಕಸವು ಎಲ್ಲಿ ಕೂಡಬೀಳುವದು ? ಎಂಬುವದು ಇವರಿಗೆ ಗೊತ್ತಿತ್ತು. ಅವರು ಕೋಣೆಯೊಳಗೆ ಬಂದು ಸೂಕ್ಷ್ಮದೃಷ್ಟಿಯಿಂದ ಅತ್ತಿತ್ತ ತಿರುಗಾಡಿ ನೋಡಿದರು. ಧೂಳವಾಗಲಿ, ಕಸ

Digitized by ROJA MUTHIAH RESEARCH LIBRARY



ವಾಗಲಿ ಅವರ ದೃಷ್ಟಿಗೆ ಎಲ್ಲಿಯೂ ಬೀಳಲಿಲ್ಲ. ಕಡೆಗೆ ಅವರು ತಮ್ಮ ಕಿಸೆಯೊಳಗಿನ ಸ್ವಚ್ಛ-ಶುಭ್ರ-ವಸ್ತ್ರವನ್ನು ಹೊರಗೆ ತೆಗೆದು ಅದನ್ನು ಹಸಿಮಾಡಿ ಕಪಾಟು, ಮೇಜು, ಕಿಡಕಿಯ ಬಾಗಿಲು ಮುಂತಾದವುಗಳ ಮೇಲೆಲ್ಲ ಎಳೆದು ನೋಡಿದರು. ಆದರೂ ಆ ವಸ್ತ್ರವು ಹೊಲಸಾದದ್ದು ಕಂಡುಬರಲಿಲ್ಲ. ಆಗ ಮಾತ್ರ ಅವರ ಪೂರ್ವಗ್ರಹವು ಬದಲಾಗಿ ಬುಕರನ ವಿಷಯದಲ್ಲಿ ಅವರಿಗೆ ಪ್ರೇಮವುಂಟಾಯಿತು. ಆಗ ಅವರು ಬುಕರನನ್ನುದ್ದೇಶಿಸಿ " ಈ ಸಾಲೆಯಲ್ಲಿ ಸೇರಲಿಕ್ಕೆ ನೀನು ಯೋಗ್ಯನಿರುವಂತೆ ತೋರುವೆ. " ಎಂದಂದರು. ಈ ವಾಕ್ಯವನ್ನು ಕೇಳಿದ ಕೂಡಲೇ ಬುಕರನಿಗೆ ಆದ ಆನಂದವನ್ನು ಹೇಳಲಾಸಲ್ಲ. ತನ್ನ ಮನೋಗತವು ಪೂರ್ಣವಾದುದಕ್ಕೆ ಅವನು ಬಹಳ ಸಮಾಧಾನವನ್ನು ಹೊಂದಿದನು. ಆದರೆ **ಯಾವ ಪರೀಕ್ಷೆಯಿಂದ ಹಂಪಟನ್ನ ಸಾಲೆಯಲ್ಲಿ ಅವನ ಪ್ರವೇಶವಾಯಿತೋ ಆ ಪರೀಕ್ಷೆಯು ಕೇವಲ ಕೋಣೆಯನ್ನುಡುಗಿ ಝುಳ ಝುಳ ಮಾಡುವದೇ ಆಗಿತ್ತು.**

ಬುಕರನ ಈ ಪ್ರವೇಶಪರೀಕ್ಷೆಯಿಂದ ನಮ್ಮ ಕಡೆಯ ವಿದ್ಯಾರ್ಥಿಗಳು ಬಹಳ ವಿಷಯಗಳನ್ನು ಕಲಿಯುವಂತಿದೆ. ಇದಲ್ಲದೆ ಅಮೇರಿಕದ ಶಿಕ್ಷಣಕ್ಕೂ, ನಮ್ಮ ಶಿಕ್ಷಣಕ್ಕೂ ಇರುವ ವೈಲಕ್ಷಣ್ಯವನ್ನು ತಿಳಿದುಕೊಳ್ಳಲಿಕ್ಕೆ ಬರುತ್ತದೆ. ನಮ್ಮ ಕಡೆಗೆ ಕೇವಲ ಪುಸ್ತಕೀಯ ಜ್ಞಾನದ ಮೇಲಿಂದಲೇ ಪ್ರವೇಶ ಪರೀಕ್ಷೆಯಾಗುವದು. ಆದಕ್ಕನುಸರಿಸಿ ವಿದ್ಯಾರ್ಥಿಗಳು ಯಾವದೊಂದು ಸ್ವತಂತ್ರ ಉದ್ಯೋಗವನ್ನು ಮಾಡದೆ, ಶಕ್ಯವಿದ್ದಮಟ್ಟಿಗೆ ಆರಾಮದಿಂದ ಕಾಲಕಳೆಯಬೇಕೆಂದು ಹವಣಿಸುವರು. ಅಮೇರಿಕದಲ್ಲಿ ಇದಕ್ಕೆ ವಿರುದ್ಧವಾದ ಪರಿಸ್ಥಿತಿಯಿರುವದು. ಅಲ್ಲಿ ಯಾವದೊಂದು ಶ್ರಮದ ಹೋರೆಯನ್ನು ಮಾಡುವವರ ಯೋಗ್ಯತೆಯು ಹೆಚ್ಚೆಂದು ತಿಳಿಯುವರು. ಹಾಗೂ ವಿದ್ಯಾರ್ಥಿಗಳ ಯೋಗತ್ಯೆಯನ್ನು ಪರಿಕ್ಷಿಸುವಾಗ ಅವರಲ್ಲಿ ವ್ಯವಹಾರ

ಜ್ಞಾನವು ಎಷ್ಟರ ಮಟ್ಟಿಗಿರುವದು ? ಯಾವದೊಂದು ಸ್ವತ್ರಂತ ಉದ್ಯೋಗವನ್ನು ಮಾಡುವ ಪ್ರೀತಿಯು ಅವರಲ್ಲಿರುವದೋ ಇಲ್ಲೋ? ಎಂಬ ಸಂಗತಿಗಳನ್ನು ಪ್ರಥಮತಃ ಅವಶ್ಯವಾಗಿ ನೋಡುವರು. ಇರಲಿ, ಕೋಣೆಯ ಉಡಗುವಿಕೆಯನ್ನು ಮಾಡಿದನಂತರ ಬುಕರನ ಹೆಸರು ಸಾಲೆಯ ಪಟದಲ್ಲಿ ಬರೆಯಲ್ಪಟ್ಟಿತು.

---

## ೫ನೇ ಪ್ರಕರಣ.

### ಹಂಪಟನ್ನ ಶಾಲೆಯೊಳಗಿನ ಶಿಕ್ಷಣವು.

ಹಂಪಟನ್ನ ಶಿಕ್ಷಣಸಂಸ್ಥೆಯ ಚಾಲಕನಾದ ಜನರಲ್ ಆರ್ಮಸ್ಟ್ರಾಂಗ ಇವನು ಬಳ್ಳೇ ಹೆಚ್ಚಿನ ತರಗತಿಯ ಮನುಷ್ಯನಾಗಿದ್ದನು. ಅವನು ಯುರೋಪಿಯನ್ನನಾಗಿದ್ದರೂ ನಿಗ್ರೋಜನರ ವಿಷಯಕ್ಕೆ ಬಳ್ಳೇ ಸಹಾನುಭೂತಿಯುಳ್ಳವನಾಗಿದ್ದನು. ಶಿಷ್ಟರೂ, ದುಷ್ಟರೂ ತನ್ನವರೇ ಎಂದು ತಿಳಿಯುವ ಸಾಧುಪುರುಷನು ಅವನಾಗಿದ್ದನು. ಅವನಿಂದಲೇ ಹಾಂಪಟನ್ನ ಶಾಲೆಗೆ ಅತ್ಯಂತ ಪಾವಿತ್ರ್ಯವು ಪ್ರಾಪ್ತವಾಗಿತ್ತು. ವಿದ್ಯಾರ್ಥಿಗಳನ್ನು ಅವನು ಬಹು ಪ್ರೀತಿಯಿಂದ ನಡೆಯಿಸಿಕೊಳ್ಳುತ್ತಿದ್ದನು. ವಿದ್ಯಾರ್ಥಿಗಳಿಗೆ ಆರ್ಮಸ್ಟ್ರಾಂಗನನ್ನು ನೋಡಿದರೆ ಅಂತಃಕರುಣದ ತಂದೆಯನ್ನು ಕಂಡಂತೆ ಅನಿಸುವದು. ಜನರಲ್ ಆರ್ಮಸ್ಟ್ರಾಂಗನ ಸಹವಾಸದ ವರ್ಣನೆಯನ್ನು ಮಾಡುವಾಗ ಬುಕರನು ಒಮ್ಮೆ ಅಂದದ್ದೇನಂದರೆ-"ಪುಸ್ತಕಗಳಿಂದಲೂ, ಬೆಲೆಯುಳ್ಳ ಉಪಕರಣಗಳಿಂದಲೂ ದೊರೆಯುವ ಶಿಕ್ಷಣವು ಸಾಧುಪುರುಷರ ಸಮಾಗಮದಿಂದ ದೊರೆಯುವ ಶಿಕ್ಷಣದ ಪಾಸಂಗಕ್ಕೆ ಸಹ ಹತ್ತಲಿಕ್ಕಿಲ್ಲ" ಬುಕರನು ಮುಂದೆ ಪಡೆದ ದೊಡ್ಡಸ್ತಿಕೆಯ ಸರ್ವಶ್ರೇಯಸ್ಸನ್ನು ಜನರಲ್ ಆರ್ಮಸ್ಟ್ರಾಂಗನಿಗೇ

Digitized by ROJA MUTHIAH RESEARCH LIBRARY



ಕೊಡಲಿಕ್ಕೆಬೇಕು. ಇವನ ಉದಾರ ಶಿಕ್ಷಣದ ಪರಿಣಾಮವು ಬುಕರನ ಮೇಲೆ ಚೆನ್ನಾಗಿ ಆಯಿತು. ತನ್ನ ಆಯುಷ್ಯದೊಳಗಿನ ಪ್ರತಿಯೊಂದು ಕ್ಷಣವನ್ನು ಪರಹಿತದಲ್ಲಿಯೇ ಕಳೆಯಬೇಕೆಂಬ ಪಾಠವನ್ನು ಬುಕರನು ಆರ್ಮಸ್ಟ್ರಾಂಗನಿಂದಲೇ ಕಲಿತುಕೊಂಡನು.

ಜನರಲ್ ಆರ್ಮಸ್ಟ್ರಾಂಗನ ಸಾಲೆಯಲ್ಲಿ ಶಿಕ್ಷಣವು ಯಾವ ಪ್ರಕಾರದ್ದಿತ್ತೆಂಬದು ಬುಕರನ ಪ್ರವೇಶಪರೀಕ್ಷೆಯ ಮೇಲಿಂದ ಸಹಜವಾಗಿ ಅನುಮಾನಿಸಲಿಕ್ಕೆ ಬರುವದು. ಈ ಸಾಲೆಯಲ್ಲಿ ಪುಸ್ತಕೀಯ ಶಿಕ್ಷಣಕ್ಕಿಂತ ಔದ್ಯೋಗಿಕ ಶಿಕ್ಷಣದ ಕಡೆಗೇ ಹೆಚ್ಚು ಲಕ್ಷ ಪೂರೈಸಲ್ಪಡುತ್ತಿತ್ತು. ಅಲ್ಲಿ ದೊರೆಯುವ ಶಿಕ್ಷಣದಿಂದ ವಿದ್ಯಾರ್ಥಿಗಳು ಸ್ವಾವಲಂಬಿಗಳಾಗಿ ಸ್ವಂತ ಕುಟುಂಬದ ಪೋಷಣವನ್ನು ಚೆನ್ನಾಗಿ ಮಾಡುತ್ತಿದ್ದರಲ್ಲದೆ, ಪ್ರಸಂಗವಿಶೇಷದಲ್ಲಿ ಎರಡನೆಯವರಿಗೆ ಸಹಾಯವನ್ನು ಮಾಡುವರು. ಹಾಗೂ ಸತತೋದ್ಯೋಗ ಮಾಡುವ ಚಟವು ಅವರಲ್ಲಿ ಉಂಟಾಗಿ ಒಣ ಡೌಲು ತೋರಿಸುವ ದುರ್ಬುದ್ಧಿಯು ಅವರನ್ನು ಎಂದೂ ಮುಟ್ಟುತ್ತಿದ್ದಿಲ್ಲ. ಸಾರಾಂಶ—ಜನರ ನಿಜವಾದ ಅಡಚಣಿಗಳನ್ನು ದೂರಮಾಡುವದೇ ಅಲ್ಲಿಯ ಶಿಕ್ಷಣದ ಮುಖ್ಯೋದ್ದೇಶವಾಗಿತ್ತು.

ಬುಕರನು ಬಹಳ ಬಡವನಾಗಿದ್ದರೂ, ಶಿಕ್ಷಣವಿಷಯದಲ್ಲಿ ಬಳ್ಳೇ ಆಸ್ಥೆಯುಳ್ಳವನಾದದ್ದನ್ನು ನೋಡಿ ಮಿಸ್ ಮೇರಿ ಮೆಕಿಯವರು ಅವನಿಗೆ ದ್ವಾರಪಾಲಕನ ಕೆಲಸವನ್ನು ಕೊಟ್ಟರು. ಈ ಕೆಲಸವು ಬಹಳ ತೊಂದರೆಯದೂ, ದಣುವಿನದೂ ಆಗಿತ್ತು. ಆದರೆ ಅದನ್ನು ಮಾಡುವದರಿಂದ ಬುಕರನ ಊಟದ ವೆಚ್ಚವು ಹೋಗುವಂತೆ ಇತ್ತು. ಕಾರಣ ಬುಕರನು ಆ ಕೆಲಸವನ್ನು ಆನಂದದಿಂದ ಸ್ವೀಕರಿಸಿದನು. ರಾತ್ರಿಯಲ್ಲಿ ಬಹಳ ವೇಳೆಯವರೆಗೆ ಅವನು ಈ ಕೆಲಸವನ್ನು ಮಾಡಬೇಕಾಗುತ್ತಿದ್ದರೂ ಪಾಠವನ್ನು ಸಿದ್ಧಪಡಿಸಿಕೊಳ್ಳಲಿಕ್ಕೂ ಇತರ

ಕೆಲಸಗಳನ್ನು ಮಾಡಲಿಕ್ಕೂ ಅವನು ಬೆಳಗಿನ ೪ ಗಂಟೆಗೆ ಏಳಬೇಕಾಗುತ್ತಿತ್ತು. ಆದರೆ ಬುಕರನ ಪೂರ್ವಚಾರಿತ್ರ್ಯವನ್ನು ನೋಡಿದರೆ ಅವನಿಗೆ ಇದೇನು ಅಷ್ಟು ಕಷ್ಟದಾಯಕವಾಗಿರಲಿಲ್ಲೆಂದು ಕಂಡು ಬರುವದು. ಮಿಸ್ ಮೇರಿ ಮೆಕಿಯವರಿಂದ ಬುಕರನಿಗೆ ಹಲವು ತರದಿಂದ ಸಹಾಯವಾಯಿತು.

ಹಳ್ಳಿಯಲ್ಲಿಯೂ, ಬಡತನದಲ್ಲಿಯೂ ಕಾಲಕಳೆದ ಬುಕರನು ಇನ್ನೂ ಅನೇಕ ಸಂಗತಿಗಳನ್ನು ಕಲಿಯಬೇಕಾಗಿತ್ತು. ಸ್ವಚ್ಛತೆಯಿಂದ ಹೇಗೆ ನಡೆಯಬೇಕು? ಸ್ನಾನವನ್ನು ಹೇಗೆ ಮಾಡಬೇಕು? ಹಲ್ಲುಗಳನ್ನು ಹೇಗೆ ತಿಕ್ಕಿಕೊಳ್ಳಬೇಕು? ಇತ್ಯಾದಿ. ಸಣ್ಣಪುಟ್ಟ ಸಂಗತಿಗಳೂ ಸಹ ಅವನಿಗೆ ಚೆನ್ನಾಗಿ ಗೊತ್ತಿದ್ದಿಲ್ಲ! ಅವನ ಹತ್ತರ ಬಟ್ಟೆಗಳು ತೀರ ಸ್ವಲ್ಪ ಇದ್ದವು. ಮೈಯೊಳಗಿನ ಹೊಲಸು ಅರಿವೆಗಳನ್ನು ಒಗೆದಾಗ ಅವು ಒಣಗುವವರೆಗೆ ಅವನು ಬರೆಮೈಯಿಂದ ಕೂಡಬೇಕಾಗುತ್ತಿತ್ತು. ಅರಿವೆಗಳು ಹೆಚ್ಚಾಗಿರದಿದ್ದರೂ ಇದ್ದವುಗಳನ್ನೇ ಒಗೆದುಕೊಂಡು ಅವನ್ನು ಸ್ವಚ್ಛವಾಗಿಡುತ್ತಿದ್ದನು. ಒಗೆದ ಅರಿವೆಗಳನ್ನು ಅವನು ಬಹುಶಃ ರಾತ್ರಿಯಲ್ಲಿ ಅಗ್ಗಿಷ್ಟಿಗೆಯ ಉಷ್ಣತೆಯಿಂದ ಒಣಗಿಸಿಕೊಳ್ಳುವನು.

ಜನರಲ್ ಆರ್ಮಸ್ಟ್ರಾಂಗನಿಗೂ ಬುಕರನು ಬಹು ಪ್ರೀತಿಯವನಾದನು. ಬುಕರನು ದ್ವಾರರಕ್ಷಣದ ಕೆಲಸವನ್ನು ಚೆನ್ನಾಗಿ ಮಾಡುತ್ತಿರುವದನ್ನು ನೋಡಿ ಆರ್ಮಸ್ಟ್ರಾಂಗನು ಬುಕರನಿಗೆ ಪ್ರತಿತಿಂಗಳಿಗೆ ಊಟವು ‡ ಪುಕ್ಕಟೆಯಾಗಿ ದೊರೆಯುವ ವ್ಯವಸ್ಥೆ ಮಾಡಿದನು. ಇಷ್ಟೇ ಅಲ್ಲ. ಮಾಸಾಚ್ಯೂಟೇಸ ಪ್ರಾಂತದೊಳಗಿನ 'ಬೇಡಫರ್ಡ' ಎಂಬಲ್ಲಿಯ ಸದ್ಗೃಹಸ್ಥನಾದ ಮಿಸ್ಟರ ಎಚ್. ಗ್ರಿಫೀಜಸನಿಗೆ ಹೇಳಿ ಅವನಿಂದ ಬುಕರನಿಗೆ ಪ್ರತಿವರ್ಷ ಫೀ ಸಲುವಾಗಿ ಹತ್ತುಬಹುದಾದ ೨೪೫ ರೂಪಾಯಿಗಳನ್ನು ಕೊಡಿಸಿದನು. ಊಟದ ವೆಚ್ಚವನ್ನೂ ಶಿಕ್ಷಣಕ್ಕೆ

‡ ಅಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ ತಿಂಗಳಿಗೆ ೬೫ ರು. ಖರ್ಚು ಬರುತ್ತಿತ್ತು.

Digitized by ROJA MUTHIAH RESEARCH LIBRARY



ತಗಲುವ ಖರ್ಚನ್ನೂ ಕೈಯಿಂದ ಕೊಡುವದಾಗಿದ್ದರೆ ಬುಕರನು ಆ ಸಾಲೆಯನ್ನೇ ಬಿಡುವ ಪ್ರಸಂಗವಿತ್ತು. ಇನ್ನು ಬುಕರನಿಗೆ ಇದ್ದ ತೊಂದರೆಗಳೆಂದರೆ ಪುಸ್ತಕ, ಹಾಗೂ ಅರಿವೆಗಳದು. ಬುಕರನು ತನಗಿಂತಲೂ ಸ್ಥಿತಿವಂತರಾದ ಹುಡುಗರ ಪ್ರೀತಿಯನ್ನು ಸಂಪಾದಿಸಿ ಅವರ ಕಡೆಯಿಂದ ಪುಸ್ತಕಗಳನ್ನು ದೊರಕಿಸಿಕೊಂಡು ಓದಿ ತನ್ನ ಗರಜನ್ನು ಸಾಗಿಸುವನು. ಅಲ್ಲಿಯ ಶಿಕ್ಷಕರು ಅವನಿಗೆ ಅರಿವೆಗಳನ್ನು ಒದಗಿಸಿಕೊಡುವ ವ್ಯವಸ್ಥೆ ಮಾಡಿದರು. ಉತ್ತರ ಅಮೇರಿಕದಿಂದ ಈ ಸಾಲೆಯ ವಿದ್ಯಾರ್ಥಿಗಳಿಗೆ ಕೊಡುವದಕ್ಕೆಂದು ಪೀಪಾಯಿಗಳಲ್ಲಿ ತುಂಬಿ ಅರಿವೆಯು ಬಂದಿತ್ತು. ಅದರೊಳಗಿಂದ ಬುಕರನಿಗೆ ಸಾಕಾಗುವಷ್ಟು ಅರಿವೆಯು ದೊರೆಯಿತು. "**ಹಿಮ್ಮತ ಮರ್ದಾತೋ ಮದತ ಖುದಾ**" ಎಂಬ ಹಿಂದುಸ್ತಾನೀ ಗಾದೆಯ ಮಾತು ಬುಕರನ ವಿಷಯಕ್ಕೆ ಚೆನ್ನಾಗಿ ಹೊಂದಿಕೆಯಾಗುತ್ತದೆ. ಈ ಗಾದೆಯ ಅಭಿಪ್ರಾಯವು ಮನುಷ್ಯನು ಒಳ್ಳೇ ಎದೆಗಾರನಾಗಿದ್ದು, ಮನಃಪೂರ್ವಕವಾಗಿಯೂ, ದೃಢಮನಸ್ಸಿನಿಂದಲೂ ಉದ್ಯೋಗವನ್ನು ಮಾಡಿದರೆ ಅವನಿಗೆ ಪರಮೇಶ್ವರನ ಸಹಾಯವು ದೊರೆಯುವದೆಂಬುದಾಗಿರುವದು. ಬುಕರನು ತನ್ನ ಸಾಲೆಯೊಳಗಿನ ಎಲ್ಲ ವಿದ್ಯಾರ್ಥಿಗಳಿಗಿಂತಲೂ ವಯಸ್ಸಿನಿಂದ ಚಿಕ್ಕವನಾಗಿದ್ದನು. ಇಷ್ಟು ಸಣ್ಣ ವಯಸ್ಸಿನಲ್ಲಿ ತನ್ನ ಊರಿಂದ ೫೦೦ ಮೈಲು ದೂರ ಹೋಗಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳು ಎಷ್ಟು ಮಂದಿ ದೃಷ್ಟಿಗೆ ಬೀಳಬಹುದು? ಸಂಗಡಿಗರ ಅಭಾವವು; ವಾಸ್ತವ್ಯದ ಹಾಗೂ ಭೋಜನದ ಅನನುಕೂಲತೆಯು; ಗುರುತಿನವರನ್ನು ಕಾಣುವದು ಅಪರೂಪ; ಕೀಳವಾದ ಜಾತಿಯು; ಇಂಥ ಪರಿಸ್ಥಿತಿಯಲ್ಲಿದ್ದರೂ ಬುಕರನು ಶಿಕ್ಷಣವನ್ನು ಸಂಪಾದಿಸುವದಕ್ಕೆ ಮಾಡಿದ ಪ್ರಯತ್ನವನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ಅಂದ ಬಳಿಕ ಇಂಥ ಎದೆಗಾರನಾದ ಮನುಷ್ಯನಿಗೆ ಪರಮೇಶ್ವರನ ಸಹಾಯವು ಯಾಕೆ ದೊರೆಯಲಿಕ್ಕಿಲ್ಲ!

ಹಂಪಟನ್ನ ಸಾಲೆಯು ಬಹಳ ಲೋಕಪ್ರಿಯವಾದುದರಿಂದ ಅನೇಕ ವಿದ್ಯಾರ್ಥಿಗಳು ಆ ಸಾಲೆಯಲ್ಲಿ ಪ್ರವೇಶಿಸಲಿಕ್ಕೆ ಬಹಳ ಪ್ರಯತ್ನ ಮಾಡುತ್ತಿದ್ದರು. ಈಗ ಆ ಸಾಲೆಯಲ್ಲಿ ೩೦೦-೪೦೦ ವಿದ್ಯಾರ್ಥಿಗಳಿದ್ದರು. ಅವರೊಳಗೆ ೪೦ ವರ್ಷದ ವಯಸ್ಸಿನವರೂ ಕೆಲವರಿದ್ದರು. ಹಾಗೂ ಸ್ತ್ರೀ ವಿದ್ಯಾರ್ಥಿಗಳ ಸಂಖ್ಯೆಯೂ ತಕ್ಕಷ್ಟು ಇತ್ತು. ಈ ಜನರ ಶಿಕ್ಷಣಲಾಲಸೆಯು ನಿಜವಾಗಿಯೂ ಆಶ್ಚರ್ಯಗೊಳಿಸುವಂಥದಾಗಿತ್ತು. ಸಾಲೆಯೊಳಗಿನ ಶಿಕ್ಷಕರೂ ಅತ್ಯಂತ ಕರ್ತವ್ಯತತ್ಪರರಾಗಿದ್ದರು. ಅವರು ಬೇಕಾದ ವೇಳೆಯಲ್ಲಿ ವಿದ್ಯಾರ್ಥಿಗಳಿಗೆ ಜ್ಞಾನಾಮೃತವನ್ನು ಪಾನಮಾಡಿಸಲಿಕ್ಕೆ ಸಿದ್ಧರಾಗಿರುತ್ತಿದ್ದರು. ವಿದ್ಯಾರ್ಥಿಗಳಿಗೆ ಸಹಾಯಮಾಡುವ ಪ್ರಸಂಗ ಬಂತೆಂದರೆ ಅವರಿಗೆ ಬಹು ಆನಂದವಾಗುವದು. ವಿದ್ಯಾರ್ಥಿಗಳು ಶಿಕ್ಷಕರನ್ನು ದೇವಮನುಷ್ಯರಂತೆಯೂ, ಜನರಲ್ ಆರ್ಮಸ್ಟ್ರಾಂಗನನ್ನು ಪ್ರತ್ಯಕ್ಷ ಪರಮೇಶ್ವರನ ಅವತಾರದಂತೆಯೂ ತಿಳಿಯುತ್ತಿದ್ದರು. ಹಾಗೂ ಶಿಕ್ಷಕರನ್ನು ಸಂತೋಷಪಡಿಸುವ ಸುಸಂಧಿಯನ್ನು ಅವರು ಎಂದೂ ವ್ಯರ್ಥಹೋಗಗೊಡುತ್ತಿದ್ದಿಲ್ಲ. ಒಮ್ಮೆ (ಸಾಲೆಯನ್ನು) ಹೊಸದಾಗಿ ಸೇರಿದ ಕೆಲವು ವಿದ್ಯಾರ್ಥಿಗಳ ವ್ಯವಸ್ಥೆಗಾಗಿ ಕೆಲವು ಕೋಣೆಗಳನ್ನು ತೆರವು ಮಾಡಬೇಕಾಗಿತ್ತು. ಜನರಲ್ ಆರ್ಮಸ್ಟ್ರಾಂಗನ ಈ ಹೇತುವನ್ನು ಕೂಡಲೆ ತಿಳಿದುಕೊಂಡು ಬುಕರನೇ ಮೊದಲಾದ ವಿದ್ಯಾರ್ಥಿಗಳು ತಮ್ಮ ಕೋಣೆಗಳನ್ನು ಹೊಸ ಹುಡುಗರಿಗೆ ತೆರವು ಮಾಡಿಕೊಟ್ಟು ತಾವು ಶಾಲೆಯ ಅಂಗಳದಲ್ಲಿದ್ದ ಒಂದು ಡೇರೆಯಲ್ಲಿ ಹೋಗಿ ನಿಂತರು. ಆಗಿನ ದಿವಸಗಳು ಬಹಳ ಥಂಡಿಯವಿದ್ದದರಿಂದ ಅವರಿಗೆ ಬಹಳ ಕಷ್ಟವಾಯಿತು. ಗಾಳಿಯಿಂದ ಡೇರೆಯು ಕಡಕೊಂಡು ಕೆಳಗೆ ಬಿದ್ದದರಿಂದ ಗದಗದ ನಡುಗುತ್ತ ಕುಳಿತುಕೊಂಡು ಇಡೀ ರಾತ್ರಿಯನ್ನು ಅವರು ಜಾಗರಣೆಯಲ್ಲಿ ಕಳೆಯಬೇಕಾಯಿತು. ಆದರೂ ನಾವು ಎರಡನೆಯವರ ಉಪಯೋ

Digitized by ROJA MUTHIAH RESEARCH LIBRARY



ಗಕ್ಕೆ ಬಿದ್ದೆವೆಂಬ ಭಾವನೆಯಿಂದ ಆ ವಿದ್ಯಾರ್ಥಿಗಳಿಗೆ ಆ ತೊಂದರೆಯು ಅಷ್ಟೇನೂ ಅಸಹ್ಯವೆನಿಸಲಿಲ್ಲ!

ಒಂದು ವರುಷವು ಈ ರೀತಿ ಹೋದಬಳಿಕ ಬೇಸಿಗೆಯ ಸೂಟಿಯು ಬಂದಿತು. ಸರ್ವ ವಿದ್ಯಾರ್ಥಿಗಳೂ, ಶಿಕ್ಷಕರೂ ತಮ್ಮ ತಮ್ಮ ಮನೆಗಳಿಗೆ ಹೋದರು. ಆದರೆ ಬುಕರನು ಹ್ಯಾಗೆ ಹೋಗಬೇಕು? ಹಾದಿಯ ವೆಚ್ಚವನ್ನು ಎಲ್ಲಿಂದ ತರಬೇಕು? ಮೇಲಾಗಿ ಸೂಟಿಯಾದಾಗ ಶಿಕ್ಷಣಸಂಸ್ಥೆಯ ಬಗ್ಗೆ ಅವನು ೧೬ ಡಾಲರುಗಳನ್ನು ಕೊಡುವದಿತ್ತು. ಆದ್ದರಿಂದ ಅವನು ಮನೆಗೆ ಹೋಗದೆ ಅಲ್ಲಿಯೇ ಎಲ್ಲಿಯಾದರೂ ಕೂಲಿಮಾಡಿ ಹೊಟ್ಟೆಯನ್ನು ತುಂಬಿಸಿಕೊಂಡು, ಸಂಸ್ಥೆಯ ಸಾಲವನ್ನು ಮುಟ್ಟಿಸಬೇಕೆಂಬ ವಿಚಾರವನ್ನು ಮಾಡಿ, ಕೂಲಿಯನ್ನು ದೊರಕಿಸುವ ಪ್ರಯತ್ನಕ್ಕೆ ಬಿದ್ದನು. ಅವನು ಬೇಕಾದಷ್ಟು ಹೆಣಗಿದರೂ ಅವನ ಈ ಕಾರ್ಯಕ್ಕೆ ತೀವ್ರ ಯಶಸ್ಸು ದೊರೆಯಲಿಲ್ಲ. ಕೆಲವು ದಿವಸಗಳ ನಂತರ ಅವನು 'ಫಾಸ್ಟೇಸ ಮನರೋ' ಎಂಬಲ್ಲಿ ಒಂದು ಫಳಾರದ ಅಂಗಡಿಯೊಳಗೆ ಕೆಲಸಮಾಡಲಿಕ್ಕೆ ನಿಂತನು. ಭೋಜನದ ಖರ್ಚುಹೋಗಿ ಸ್ವಲ್ಪ ಹಣ ಉಳಿಯುವಷ್ಟು ಮಾತ್ರ ಕೂಲಿಯು ಅಲ್ಲಿ ದೊರೆಯುತ್ತಿತ್ತು. ಸಂಸ್ಥೆಯ ಸಾಲವನ್ನು ತೀರಿಸಲಿಕ್ಕೆ ಅನುಕೂಲವಾಗಬೇಕೆಂದು ಅವನು ತನ್ನ ಅರಿವೆಗಳನ್ನು ತಾನೇ ಒಗೆಯುತ್ತಿದ್ದನು. ಹಾಗೂ ಆವಶ್ಯಕವಾದ ಬಟ್ಟೆಗಳ ಹೊರತು ಬೇರೆ ಬಟ್ಟೆಗಳನ್ನು ಮೈಮೇಲೆ ಹಾಕಿಕೊಳ್ಳುತ್ತಿರಲಿಲ್ಲ. ಇಷ್ಟೆಲ್ಲ ಮಾಡಿದರೂ ೧೬ ಡಾಲರುಗಳು ಕೂಡಬೀಳಲಿಲ್ಲ. ಫಳಾರದ ಅಂಗಡಿಯಲ್ಲಿ ಕೆಲಸಮಾಡುತ್ತಿರುವಾಗ ಬುಕರನಿಗೆ ೧೦ ಡಾಲರ ಕಿಮ್ಮತ್ತಿನ ಒಂದು ಹೊಸ ನೋಟು ಅಕಸ್ಮಾತ್ ಸಿಕ್ಕಿತು. ಆದರೆ ಅವನು ಅದನ್ನು ಆಗಿಂದಾಗ್ಗೆ ಅಂಗಡಿಯ ಒಡೆಯನಿಗೆ ಮುಟ್ಟಿಸಿದನು! ಒಡೆಯನು ಉಚಿತವಾಗಿ ಏನೂ ಕೊಡಲಿಲ್ಲ. ಆದರೂ ಬುಕರನು ನಿರಾಶನಾಗಲಿಲ್ಲ.

ಸೂಟಿಯು ಮುಗಿದ ಕೂಡಲೇ ಬುಕರನು ಸಂಸ್ಥೆಯನ್ನು ಪ್ರವೇಶಿಸಲಿಕ್ಕೆ ಪುನಃ ಹೋದನು. ಹಾಗೂ ಸಂಸ್ಥೆಯ ಲೆಕ್ಕಪತ್ರವನ್ನು ನೋಡುವ ಜೇ. ಎಫ್. ಬೀ. ಮಾರ್ಶಲ್ ಎಂಬವನಿಗೆ ಭೆಟ್ಟಿಯಾಗಿ ತನ್ನ ಎಲ್ಲ ಸ್ಥಿತಿಯನ್ನು ತಿಳಿಸಿದನು. ಆಗ ಅವನು ಬುಕರನಿಗೆ “ಸಂಸ್ಥೆಯ ಪುನಃ ಪ್ರವೇಶಕ್ಕೆ ಏನೂ ಆತಂಕವಿಲ್ಲ. ಹಣ ದೊರೆತಾಗ ನೀನು ಸಾಲವನ್ನು ತೀರಿಸು. ನಿನ್ನ ಮೇಲೆ ನನ್ನ ವಿಶ್ವಾಸವದೆ.” ಎಂದನು. ಎರಡನೇ ವರ್ಷವೂ ಬುಕರನು ದ್ವಾರರಕ್ಷಣದ ಕೆಲಸವನ್ನೇ ಕೈಕೊಂಡನು.

ಹಂಪಟನ್ನ ಸಂಸ್ಥೆಯ ಶಿಕ್ಷಣದಿಂದ ಬುಕರನಿಗೆ ಸ್ವಾರ್ಥತ್ಯಾಗದಲ್ಲಿ ನಿಜವಾದ ಸುಖವಿರುತ್ತದೆಂದು ಮನವರಿಕೆಯಾಯಿತು! ಅದಕ್ಕನುಸರಿಸಿ ಅವನು “ಯಾರು ಎರಡನೆಯವರ ಸಲುವಾಗಿ ಪರಿಶ್ರಮಮಾಡುವರೋ ಅವರು ಎಲ್ಲರಿಗಿಂತಲೂ ಹೆಚ್ಚು ಸುಖಿಗಳಾಗುವರು.” ಎಂದೆನ್ನುತ್ತಿದ್ದನು. ಶಾಲೆಯೊಳಗಿನ ಶಿಕ್ಷಕರ ವರ್ತನಕ್ರಮದಿಂದಲೇ ಬುಕರನಿಗೆ ಈ ಪಾಠವು ದೊರೆಯಿತು. ಜನರಲ್ ಆರ್ಮಸ್ಟ್ರಾಂಗನಂತೂ ಕೇವಲ ಸ್ವಾರ್ಥತ್ಯಾಗದ ಮೂರ್ತಿಯೇ ಆಗಿದ್ದನು. ಆ ಮಹಾತ್ಮನು ಮರಣಸಮಯದಲ್ಲಿ ತನ್ನ ಅನುಯಾಯಿಗಳನ್ನುದ್ದೇಶಿಸಿ ಬರೆದಿಟ್ಟದ್ದರಲ್ಲಿ ಮುಂದೆ ಹೇಳಿದ ವಾಕ್ಯಗಳಿವೆ. “ನನ್ನ ಮರಣದನಂತರ ನನ್ನ ಸ್ಮಾರಕವನ್ನೇನೂ ಮಾಡಬೇಡಿರಿ. ನನ್ನ ಹೆಣವನ್ನು ಹುಗಿದ ಸ್ಥಳದಲ್ಲಿ ಗೋರಿಯನ್ನಾದರೂ ಕಟ್ಟಬೇಡಿರಿ. ಆ ಸ್ಥಳದಲ್ಲಿ ಬರೇ ಒಂದು ಕಲ್ಲನ್ನು ನಡಿಸಿ ಅದರ ಮೇಲೆ ನನ್ನ ಹೆಸರು, ಜನ್ಮಮರಣಕಾಲಗಳನ್ನಿಷ್ಟೇ ಬರೆಯಿರಿ. ಬೇರೆ ಏನೂ ಬರೆಯಬೇಡಿರಿ.” ಕೀರ್ತಿಯ ಅಭಿಲಾಷೆಯನ್ನು ಹಿಡಿಯದ ಇಂಥ ಮಹಾತ್ಮರು ದೊರಕುವದು ವಿರಳ!

ಬುಕರನು ಸ್ವಾರ್ಥತ್ಯಾಗದನಂತರ “ಬಾಲವಯಸ್ಸಿನ ಉಪಯೋಗವನ್ನು ಹ್ಯಾಗೆ ಮಾಡಿಕೊಳ್ಳಬೇಕೆ”ಂಬ ಪಾಠವನ್ನು ಕಲಿತು



ಕೊಂಡನು. ತನ್ನ ಅಧ್ಯಾತ್ಮಿಕ ಉನ್ನತಿಯನ್ನು ಮಾಡಿಕೊಳ್ಳಲಿಕ್ಕೆ ಬಾಯಬಲವನ್ನು ಓದುವದು ಅವಶ್ಯವೆಂದು ಅವನಿಗೆ ತೋರಿತು. ದಿನಾಲು ಬೇಕಾದಂಥ ಕೆಲಸವಿದ್ದರೂ ಅವನು ಬಾಯಬಲದ ಒಂದು ಪ್ರಕರಣವನ್ನಾದರೂ ಓದಿಯೇ ತೀರುವನು. ಅವನ ಈ ಕ್ರಮವು ಆಮರಣ ಅವ್ಯಾಹತವಾಗಿ ಸಾಗಿತು. ಶಾಲೆಯಲ್ಲಿ ಧಾರ್ಮಿಕ ಶಿಕ್ಷಣವು ನಡೆಯುತ್ತಿದ್ದರೆ ವಿದ್ಯಾರ್ಥಿಗಳ ಮೇಲೆ ಇಂತಹ ಸುಪರಿಣಾಮವಾಗುತ್ತದೆ. “ಶ್ರೀಮದ್ಭಗವದ್ಗೀತೆಯು” ಅತ್ಯಂತ ಶ್ರೇಷ್ಠತರದ ಧಾರ್ಮಿಕ ಗ್ರಂಥವಾಗಿದೆ. ಅಂದ ಬಳಿಕ ಬುಕರನಂತೆ ಮನಃಪೂರ್ವಕವಾಗಿ ಈ ಗ್ರಂಥ ಪಠಣಮಾಡುವದು ಹಿಂದೂ ವಿದ್ಯಾರ್ಥಿಗಳ ಕರ್ತವ್ಯವಲ್ಲವೇ? ಬುಕರ ಟೀ ವಾಶಿಂಗ್ಟನ್ನನ ಚರಿತ್ರೆಯಿಂದ ನಮ್ಮ ವಿದ್ಯಾರ್ಥಿಗಳು ಕಲಿಯಬಹುದಾದ ಅನೇಕ ವಿಷಯಗಳಲ್ಲಿ ನಿಷ್ಠೆಯಿಂದ ಪ್ರತಿದಿವಸ ಭಗವದ್ಗೀತೆಯ ಪಾರಾಯಣಮಾಡುವ ವಿಷಯವೂ ಒಂದಾಗಿದೆ.

ಕೋಳಿ, ನೀರಗೋಳಿಗಳನ್ನು ಹ್ಯಾಗೆ ಸಂರಕ್ಷಿಸಬೇಕೆಂಬದನ್ನೂ ಈ ಸಾಲೆಯಲ್ಲಿ ಚನ್ನಾಗಿ ಕಲಿಸುತ್ತಿದ್ದರು. ಈ ಶಿಕ್ಷಣದಿಂದ ವಿದ್ಯಾರ್ಥಿಗಳಿಗೆ ಯಾವಾಗಲೂ ಉಪಯೋಗವಾಗುತ್ತಿತ್ತು. ಹೊಟ್ಟೆಯನ್ನು ತುಂಬಿಕೊಳ್ಳಲಿಕ್ಕೆ ಆವಶ್ಯಕವಾದ ಎಲ್ಲ ಉದ್ಯೋಗಗಳ ಶಿಕ್ಷಣವು ಇಲ್ಲಿ ದೊರೆಯುತ್ತಿತ್ತು. ಇಟ್ಟಂಗಿಗಳನ್ನು ಮಾಡೋಣ, ಬಡಿಗಿತನದ ಕೆಲಸ, ಕಂಬಾರರ ಕೆಲಸ, ಥರಗಾರಿಕೆ ಮೊದಲಾದವುಗಳನ್ನು ನಿಗ್ರೋವಿದ್ಯಾರ್ಥಿಗಳು ಈ ಶಾಲೆಯಲ್ಲಿ ಕಲಿಯುತ್ತಿದ್ದರು. ವ್ಯಾಖ್ಯಾನವನ್ನು ಹೇಗೆ ಕೊಡಬೇಕೆಂಬದನ್ನಾದರೂ ಈ ಸಾಲೆಯಲ್ಲಿ ಪದ್ಧತಿಗನುಸಾರವಾಗಿ ಕಲಿಸುತ್ತಿದ್ದರು. ಮಿಸ್ ಲಾರ್ಡ ಎಂಬ ಶಿಕ್ಷಿಕೆಯು ಬುಕರನಿಗೆ ವ್ಯಾಖ್ಯಾನ ಕೊಡುವದನ್ನು ಕಲಿಸಿದಳು. ಶ್ವಾಸೋಚ್ಛ್ವಾಸವನ್ನು ಹೇಗೆ ಮಾಡಬೇಕು? ವಾಕ್ಯದಲ್ಲಿ ಆಘಾತವನ್ನೆಲ್ಲಿ ಕೊಡಬೇಕು? ಸ್ಪಷ್ಟೋಚ್ಚಾರಗಳನ್ನು ಹೇಗೆ ಮಾಡಬೇಕು? ಈ ಮೊದ

Digitized by ROJA MUTHIAH RESEARCH LIBRARY
V,73ಜBUK N24 A-3190.

ಲಾದ ಸಂಗತಿಗಳನ್ನು ಆ ಶಿಕ್ಷಿಕೆಯು ಬುಕರನಿಗೆ ತಿಳಿಸಿಕೊಟ್ಟಳು.
ವ್ಯಾಖ್ಯಾನದ ವಿಷಯವಾಗಿ ಬುಕರನು ಒಂದು ಕಡೆಯಲ್ಲಿ ಬರೆದದ್ದೇ
ನಂದರೆ—" **ಜನರೆದುರಿಗೆ ನಿರುಪಯೋಗಿಯಾದ ವ್ಯಾಖ್ಯಾನ
ವನ್ನು ಕೊಡುವಷ್ಟು ಅಸಮಾಧಾನಕಾರಕ ವಿಷಯವು ನಿಜ
ವಾಗಿಯೂ ಬೇರೊಂದಿಲ್ಲ** " ನಮ್ಮ ಕಡೆಯ ವ್ಯಾಖ್ಯಾತರು ಇದ
ನ್ನು ಚನ್ನಾಗಿ ಲಕ್ಷ್ಯದಲ್ಲಿಡಬೇಕು. ಹಾಂಪಟನ್ನ ಸಾಲೆಯಲ್ಲಿ ವಕ್ತ್ರೃ
ತ್ವೋತ್ತೇಜಕ ಸಭೆಗಳಾದರೂ ಆಗುತ್ತಿದ್ದವು. ಅವುಗಳಿಂದಲೂ
ಬುಕರನಿಗೆ ಒಳ್ಳೇ ಉಪಯೋಗವಾಯಿತು.

ಎರಡನೇ ವರ್ಷದ ಸೂಟಿಯು ಬಂದಿತು. ಈಗ ಬುಕರನಿಗೆ
ಅವನ ತಾಯಿಯೂ, ಬಂಧುವಾದ ಜಾನನೂ, ಕೆಲವು ಶಿಕ್ಷಕರೂ
ಸಹಾಯಮಾಡಿದ್ದರಿಂದ ಅವನಿಗೆ ಮನೆಗೆ ಹೋಗಲಿಕ್ಕೆ ಅನುಕೂಲ
ವಾಯಿತು. ಅವನು ಊರಿಗೆ ಬಂದ ಬಳಿಕ ಸ್ವಲ್ಪ ದಿವಸಗಳಲ್ಲಿಯೇ
ಅವನ ತಾಯಿಯು ಮರಣಹೊಂದಿದಳು. ಈ ಕಾಲಕ್ಕೆ ಬುಕರನಿಗೆ
ಆದ ದುಃಖದ ಕಲ್ಪನೆಯನ್ನು ಮಾಡುವದು ಅಶಕ್ಯವು. ಇದರ ಹೊರ
ತು ಬಹಳ ಕಷ್ಟದ ಸಂಗತಿಯೆಂದರೆ—ಮರಣಕಾಲದಲ್ಲಿ ಅವನು
ತಾಯಿಯ ಹತ್ತರ ಇದ್ದಿಲ್ಲ. ಹಂಪಟನ್ನಿಗೆ ತಿರುಗಿ ಹೋಗುವದ
ಕ್ಕಾಗಿ ದುಡ್ಡು ಬೇಕಾದ್ದರಿಂದ ಯಾವದೊಂದು ಕೆಲಸವನ್ನು ಹಿಡಿಯ
ಬೇಕೆಂದು ಅವನು ಅತ್ತಿತ್ತ ತಿರುಗಾಡುತ್ತಿದ್ದನು. ತನ್ನ ಪ್ರೇಮದ
ಮಾತೆಯ ಅಂತ್ಯಕಾಲದಲ್ಲಿ ತನಗೆ ಅವಳ ಹತ್ತರ ಇರಲಿಕ್ಕಾಗಲಿ
ಲ್ಲೆಂಬದನ್ನು ನೋಡಿ ಬುಕರನಿಗೆ ಪರಮ ವಿಷಾದವಾಯಿತು. ಬುಕ
ರನ ಕುಟುಂಬಕ್ಕೆ ಈ ಕಾಲಕ್ಕೆ ಒಳ್ಳೇ ಸಂಕಟವು ಪ್ರಾಪ್ತವಾಯಿತು.
ಬುಕರನೂ ಅವನ ಸಹೋದರರೂ ಹೊಂದಿದ ಕಷ್ಟವನ್ನು ವರ್ಣಿಸ
ಲಳವಲ್ಲ. ದಿನದಲ್ಲಿ ಒಂದು ಸಾರೆಯಾದರೂ ಅವರಿಗೆ ಆಹಾರವು
ಸಿಗುವದು ದುಸ್ತರವಾಯಿತು! ಇಂಥ ವೇಳೆಯಲ್ಲಿಯೂ ಬುಕರನು
ಹಂಪಟನ್ನಿಗೆ ಹೋಗುವ ನಿಶ್ಚಯಮಾಡಿದನು. ಇದೇ ವೇಳೆಗೆ

Digitized by ROJA MUTHIAH RESEARCH LIBRARY



ಅವನಿಗೆ ಕಲ್ಲಿದ್ದಲಿಯ ಕಣಿಯಲ್ಲಿ ಒಂದು ಕೆಲಸವು ದೊರಕಿತು.
ಹಾಗೂ ಲೇಡಿ ರಫನಳಿಂದಲೂ ಸ್ವಲ್ಪ ಸಹಾಯವಾಯಿತು. ಆದ್ದರಿಂದ
ಪುನಃ ಅವನು ಹಂಪಟನ್ನಿಗೆ ಹೋಗುವದು ಶಕ್ಯವಾಯಿತು. ಹಾದಿಯ
ವೆಚ್ಚಕ್ಕೆ ಸಾಕಷ್ಟು ಹಣವು ದೊರೆತ ಕೂಡಲೇ ಅವನಿಗೆ ಆನಂದವಾ
ಯಿತು. ಅದರೊಳಗೂ ಸೂಟಿಯು ಮುಗಿಯು ಮುಗಿಯುವದಕ್ಕೆ
ಇನ್ನೂ ಮೂರುವಾರಗಳಿರುತ್ತಲೇ ಮಿಸ್ ಮೇರಿ ಇವರ ಕಡೆಯಿಂದ
ಬುಕರನಿಗೆ—" ಇಮಾರತಿಯನ್ನು ಸ್ವಚ್ಛ ಮಾಡಿಸತಕ್ಕದ್ದಿದ್ದು ಈ
ಕೆಲಸದಲ್ಲಿ ನಿನ್ನ ಸಹಾಯವು ಅವಶ್ಯ ಬೇಕಾದ್ದರಿಂದ ನೀನು ತೀವ್ರ
ಹೊರಟುಬಾ. " ಎಂಬರ್ಥದ ಪತ್ರವು ಅಕಸ್ಮಾತ್ ಬಂದಿತು. ಪತ್ರದ
ಪ್ರಕಾರ ಬುಕರನು ಆಗಿಂದಾಗ್ಗೆ ಹೊರಟು ಹಂಪಟನ್ನಿಗೆ ಹೋದನು.

ಸಾಲೆಯು ಪ್ರಾರಂಭವಾಗುವದಕ್ಕೆ ಎರಡು ವಾರ ಮುಂಚಿತ
ವಾಗಿ ಬುಕರನು ಹಂಪಟನ್ನಿಗೆ ಹೋಗಿ ಮುಟ್ಟಿ ಅಲ್ಲಿ ಮಿಸ್ ಮೆಕಿ
ಇವರಿಗೆ ಹಲವು ಪ್ರಕಾರಗಳಿಂದ ಸಹಾಯವನ್ನು ಮಾಡಿದನು. ಈ
ವೇಳೆಯಲ್ಲಿ ಅವನು " ಸಣ್ಣಪುಟ್ಟ ಕೆಲಸಗಳನ್ನು ಮಾಡುವದರಲ್ಲಿ
ಕೀಳುತನವಿರುವದೆಂದು ತಿಳಿಯದಿರುವದೇ ದೊಡ್ಡಸ್ತಿಕೆಯ ಲಕ್ಷಣ
ವಿರುವದು " ಎಂಬ ಹೊಸ ಪಾಠವನ್ನು ಕಲಿತುಕೊಂಡನು. ಮಿಸ್
ಮೆಕೀಯವರು ಕುಲೀನರೂ, ಶ್ರೀಮಂತ ಮನೆತನದವರೂ ಆಗಿದ್ದರೂ
ನಿಗ್ರೋಜನರ ಸಲುವಾಗಿ ತೆಗೆದ ಶಾಲೆಯಲ್ಲಿ ಎಲ್ಲತರದ ಕೆಲಸಗ
ಳನ್ನು ಮಾಡುತ್ತಿದ್ದರು. ಕಿಡಕಿಗಳನ್ನು ಸ್ವಚ್ಛಮಾಡುವದು, ಕೋಣೆ
ಗಳನ್ನು ಉಡುಗುವದು, ಹಾಸಿಗೆಗಳನ್ನು ಝಳಝಳವಿಡುವದು.
ಈ ಮೊದಲಾದ ಕೆಲಸಗಳನ್ನು ಮಾಡಲಿಕ್ಕೆ ಅವರು ಎಂದೂ ಹಿಂಜರಿ
ಯುತ್ತಿದ್ದಿಲ್ಲ. ಸಾಲೆಯೊಳಗಿನ ಶಿಕ್ಷಕರು ಸ್ವತಃ ಶ್ರಮಮಾಡುವವರಿ
ದ್ದರೆ ಆ ಸಾಲೆಯೊಳಗಿನ ವಿದ್ಯಾರ್ಥಿಗಳಿಗೆ ಶ್ರಮಮಾಡಲಿಕ್ಕೆ ನಾಚಿಕೆ
ಯುಂಟಾದೀತೇನು? **ದುಡಿಯೋಣವು ಲಜ್ಜಾಸ್ಪದವಾದ ಸಂಗ
ತಿಯಲ್ಲ. ತಿರುಗಿ ಸ್ವಂತ ಶ್ರಮದಿಂದ ಸ್ವಂತದ ಉನ್ನತಿಯನ್ನು**

ಮಾಡಿಕೊಳ್ಳುವದು ಅತ್ಯಂತ ಅಭಿಮಾನಾಸ್ಪದವಾದ ಸಂಗತಿಯಾಗಿದೆ. ಈ ತತ್ವವನ್ನು ಬುಕರನು ಸಾಲೆಯಲ್ಲಿರುವಾಗಲೇ ಅರಿತುಕೊಂಡನು. ಹಾಗೂ ಅವನು ಸಾಲೆಯಲ್ಲಿ ದೊರೆತ ಈ ತತ್ವದಂತೆ ಆಜನ್ಮ ನಡೆದುಕೊಂಡನು. ದುಡಿತಕ್ಕೆ ಪ್ರೀತಿಸುವ ವಿದ್ಯೆಯನ್ನು ನಮ್ಮ ದೇಶದ ವಿದ್ಯಾರ್ಥಿಗಳು ಕಲಿಯುವರೇನು ? ಶ್ರಮಮಾಡುವದರಿಂದ ಅದಕ್ಕೆ ಪ್ರತಿಯಾಗಿ ದುಡ್ಡು ದೊರಕುವದು. ಇಷ್ಟರಿಂದಲೇ ಶ್ರಮಮಾಡಬೇಕೆಂತಲ್ಲ; ಶ್ರಮಮಾಡುವದರಿಂದ ಸ್ವಾವಲಂಬನವುಂಟಾಗುವದು. ಆತ್ಮವಿಶ್ವಾಸವು ಬೆಳೆದು ಸ್ವಾತಂತ್ರ್ಯವು ದೊರಕುವದು ! ಪರೋಪಕಾರದಿಂದ ವಿನೋದವೂ, ಆನಂದವೂ ಆಗುವದು. ಈ ಮಾತು ಮೇಲಿನ ಪಾಠದಿಂದ ಬುಕನನಿಗೆ ತಿಳಿದುಬಂದಿತು. ಮಹಾತ್ಮನಾದ ಆರ್ಮಸ್ಟ್ರಾಂಗನ ಸಹವಾಸದಿಂದ ಹೀಗೆ ಉಚ್ಚ ಶಿಕ್ಷಣವನ್ನು ಪಡೆದು ಹಂಪಟನ್ನದ ಅಭ್ಯಾಸಕ್ರಮನ್ನು ಮುಗಿಸಿ ಸನ್ ೧೮೭೫ ರಲ್ಲಿ ಬುಕರನು ತಿರುಗಿ ಮಾಲ್ಡನ್ನಿಗೆ ಹೋಗುವದಕ್ಕೆ ಹೊರಟನು.

---

## ೬ನೇ ಪ್ರಕರಣ.

### ವಿದ್ಯಾರ್ಥಿಗಳ ಕರ್ತವ್ಯ !

ವಿದ್ಯೆಯನ್ನು ಗಳಿಸುವದು ವಿದ್ಯಾರ್ಥಿಗಳ ಕರ್ತವ್ಯವಾಗಿರುವಂತೆ ಸಂಪಾದಿಸಿದ ವಿದ್ಯೆಯು ಎರಡನೆಯವರ ಉಪಯೋಗಕ್ಕೆ ಬೀಳುವಂತೆ ಮಾಡುವದೂ ಅವರ ಕರ್ತವ್ಯವಾಗಿರುವದು. ವಿದ್ಯಾ ಅಂದರೆ ತಿಳುವಳಿಕೆ; ಅರ್ಥಿ ಅಂದರೆ ಬೇಡುವವನು. ಜ್ಞಾನವನ್ನು ತನ್ನ ಉನ್ನತಿಯ ಸಲುವಾಗಿಯೇ ದೊರಕಿಸಬೇಕಾಗುತ್ತದೆ. ಅರ್ಥಾತ್ ವಿದ್ಯಾರ್ಥಿಯೆಂದರೆ—ತನ್ನ ಉನ್ನತಿಯನ್ನು ಮಾಡಿಕೊಳ್ಳುವ ಮನು



ಷ್ಯನೆಂದಂತಾಯಿತು. ಆದರೆ ತನ್ನ ಉನ್ನತಿಯನ್ನು ಮಾಡಿಕೊಳ್ಳುತ್ತಿರುವಾಗ ಒಂದು ಸಂಗತಿಯ ಕಡೆಗೆ ಅವಶ್ಯವಾಗಿ ಲಕ್ಷ್ಯಕೊಡಬೇಕಾಗುವದು. ಆ ಸಂಗತಿಯೆಂದರೆ ಸ್ವಾರ್ಥತ್ಯಾಗವು. ತ್ಯಾಗ ಹಾಗೂ ಉನ್ನತಿ ಈ ಶಬ್ದಗಳು ವ್ಯವಹಾರಜ್ಞಾನದ ಆಡಂಬರವನ್ನು ಮೆರೆಯಿಸುವ ಎಷ್ಟೋ ಜನರ ಕಿವಿಗಳಿಗೆ ಹೇಗೆ ಹೇಗೋ ಕೇಳಿಸಬಹುದು; ಆದರೆ ಅದಕ್ಕೆ ಗತ್ಯಂತರವಿಲ್ಲ. ಬಹುಜನರನ್ನು ಹಿಂದೆ ಬಿಟ್ಟುಕೊಟ್ಟು ತನ್ನೊಬ್ಬನ ಉನ್ನತಿಯನ್ನು ಮಾಡಿಕೊಳ್ಳಲಿಕ್ಕೆ ಎಂದೂ ಬರುವದಿಲ್ಲ. ಸಾವಿರಾರು ಜನರನ್ನು ಠಕ್ಕಿಸಿ ಶ್ರೀಮಂತರಾದ ಜನರು ತಮ್ಮ ಉನ್ನತಿಯಾಯಿತೆಂದು ಭಾವಿಸಬಹುದು; ಆದರೆ ಇದು ಶುದ್ಧ ತಪ್ಪು. ಸಾವಿರಾರು ಜನರ ಪ್ರಾಣಗಳು ತಳಮಳಿಸುತ್ತಿರುವಾಗ ಒಂದು ಪ್ರಾಣಿಯ ಉನ್ನತಿಯು ಹೇಗಾಗುವದು? ಇದಕ್ಕೆ ಒಂದು ಸಣ್ಣ ದೃಷ್ಟಾಂತವನ್ನು ಕೊಟ್ಟರೆ ಈ ಸಂಗತಿಯು ಚನ್ನಾಗಿ ತಿಳಿದುಬರುವದು. ನಾಲ್ಕೂಕಡೆಯ ಕಾಲುವೆಗಳಿಂದ ನೀರಿನ ಸಂಚಯವಾಗುವ ದೊಡ್ಡ ಕೆರೆ, ಹಾಗೂ ನಿರಂತರ ಹರಿಯುವ ಹಳ್ಳ ಇವೆರಡನ್ನೂ ಪರಸ್ಪರ ಹೋಲಿಸಿ ನೋಡಿದರೆ ಉಪಯೋಗದ ದೃಷ್ಟಿಯಿಂದ ಯಾವದು ಹೆಚ್ಚಿನದೆಂದು ಕಂಡುಬರುವದು ? ಆರಂಭದಲ್ಲಿ ಕೆರೆಯು ನೀರು ಹೆಚ್ಚಾದದ್ದೆಂದು ತೋರಿ ಅದರ ವೈಭವವೂ ಶ್ರೇಷ್ಠತರದ್ದೆಂದು ಕಂಡುಬರಬಹುದು; ಆದರೆ ಬೇಸಿಗೆಯಲ್ಲಿ ಅದೇ ಕೆರೆಯು ಬಣಗಿದುದು, ಇಲ್ಲವೆ ದುರ್ವಾಸನೆಯಿಂದ ಕೂಡಿದುದಾಗಿ ಕಂಡುಬರುವದು. ಅದೇ, ಹರಿಯುವ ಹಳ್ಳವನ್ನು ನೋಡಿರಿ. ಅದು ಸಣ್ಣಾಗಿಯೇ ಹರಿಯಲೊಲ್ಲದೇಕೆ, ಬೇಸಿಗೆಯಲ್ಲಿ ಅದರ ನೀರು ಕೆಡದೆ ಹೆಚ್ಚು ಸೀಯಾಗುವದು. ಇದು ಏತರ ಪರಿಣಾಮವು. ಸ್ವಾರ್ಥತ್ಯಾಗದ್ದಲ್ಲವೇ ? ಕೆರೆಯು ಸ್ವಾರ್ಥದಿಂದ ನೀರನ್ನು ಸಂಗ್ರಹಿಸುವ ಕೆಲಸವನ್ನೇ ನಡೆಯಿಸಿತು. ಅದರ ದುಷ್ಫಲವನ್ನು ಅದು ಅನುಭವಿಸಬೇಕಾಯಿತು. ಹಳ್ಳವು ಪ್ರತಿಕ್ಷಣದಲ್ಲಿಯೂ ಸ್ವಾರ್ಥತ್ಯಾಗವನ್ನು ಮಾಡಿ ನೀರನ್ನು ತನ್ನಲ್ಲಿ ಸಂಗ್ರಹಿಸಿ



Digitized by ROJA MUTHIAH RESEARCH LIBRARY

ಕೊಳ್ಳದೆ ಮುಂದೆ ಹೋಗಗೊಟ್ಟಿತು. ಅದರಿಂದ ಅದಕ್ಕೆ ಉತ್ಕೃಷ್ಟ ಫಲವು ದೊರೆಯಿತು. ಈ ಸಣ್ಣ ಪ್ರವಾಹಕ್ಕೆ ಜನರು ನದಿ ಎಂಬ ಹೆಸರನ್ನು ಕೊಟ್ಟು ಅದನ್ನು ಪವಿತ್ರವಾಗಿ ತಿಳಿಯುವರು. ಹಾಗೂ ಹೊಲಗಳಿಗೂ ಅದರ ಉಪಯೋಗವನ್ನು ಮಾಡಿಕೊಳ್ಳುವರು. ಈ ಸಂಗತಿಯನ್ನು ಇಷ್ಟು ವಿಸ್ತಾರದಿಂದ ಬರೆಯುವ ಕಾರಣವು ತಮ್ಮ ಉನ್ನತಿಯು ಯಾತರಿಂದಾಗುತ್ತದೆಂಬದು ವಿದ್ಯಾರ್ಥಿಗಳಿಗೆ ಚನ್ನಾಗಿ ತಿಳಿಯಬೇಕೆಂಬದೇ ಆಗಿರುವದು. ಶ್ರೀಮತ್ ಸ್ವಾಮಿ ರಾಮತೀರ್ಥರು ಒಂದೆಡೆಯಲ್ಲಿ ಬರೆದಿರುವದೇನಂದರೆ-'**ಯಾರು ಬಹುಕಾಲ ಜೀವಿಸಬೇಕೆನ್ನುವರೋ ಅವರು ತೀವ್ರ ಮರಣಕ್ಕೆ ಸಿದ್ಧರಾಗಬೇಕು.**' ಸತ್ಯಕ್ಕಾಗಿ ಪ್ರಾಣವನ್ನರ್ಪಿಸಿದ ಮಹಾತ್ಮರು ಅಮರವಾಗಿರುವದನ್ನು, ಅರ್ಥಾತ್ ಕೀರ್ತಿರೂಪದಿಂದ ಜೀವಂತರಾಗಿರುವದನ್ನು ನಾವು ನೋಡುತ್ತಲೇ ಇದ್ದೇವೆ. ಸಾರಾಂಶ-ಸ್ವಾರ್ಥತ್ಯಾಗದ ಹೊರತು ಉನ್ನತಿಯಾಗುವ ಸಂಭವವಿಲ್ಲ. ಅದರಿಂದ ವಿದ್ಯಾರ್ಥಿಗಳು ವಿದ್ಯಾರ್ಜನೆಯ ಕೂಡ ಮಾಡತಕ್ಕ ಮಹತ್ವದ ಕೆಲಸವೆಂದರೆ ತಮ್ಮ ವಿದ್ಯೆಯ ಉಪಯೋಗವನ್ನು ಎರಡನೆಯವರಿಗೆ ಮಾಡಿಕೊಡುವದು, ಅಂದರೆ ಎರಡನೇಯವರಿಗೆ ತನ್ನ ವಿದ್ಯೆಯನ್ನು ಹೇಳುವದು.

ಬುಕರ ಟೀ. ವಾಶಿಂಗ್ಟನ್ನನು ಇದೇ ಪ್ರಕಾರದ ವಿದ್ಯಾರ್ಥಿಯಾದುದರಿಂದಲೇ ಅವನಿಗೆ "ಅನುಕರಣೀಯ ವಿದ್ಯಾರ್ಥಿ"ಯೆಂದು ಹೆಸರಿಟ್ಟು ಅವನನ್ನು ಬಾಲಮಿತ್ರರ ಮುಂದೆ ನಿಂದಿರಸಲಾಯಿತು. ಬುಕರನು ಎಷ್ಟು ಪ್ರಯಾಸದಿಂದ ವಿದ್ಯೆಕಲಿತನೆಂಬದನ್ನು ಇದುವರೆಗಿನ ಅವನ ಚರಿತ್ರೆಯ ಮೇಲಿಂದ ವಾಚಕರು ತಿಳಿದುಕೊಂಡಿರಬಹುದು. ಇಷ್ಟು ಕಷ್ಟಬಟ್ಟು ಸಂಪಾದಿಸಿದ ಜ್ಞಾನದ ಉಪಯೋಗವನ್ನು ಅವನು ತನ್ನ ಪೂರತಿಗಾಗಿಯೋ, ತನ್ನೊಬ್ಬನ ಉನ್ನತಿಗಾಗಿಯೋ ಮಾಡಿಕೊಂಡಿದ್ದರೆ ಅವನ ವಿದ್ಯೆಯು ಕವಡಿಯ ಕಿಮ್ಮತ್ತಿನದಾಗುತ್ತಿತ್ತು. ಅಮೇರಿಕೆಯಲ್ಲಿ ಜನ್ಮಿಸಿದ ಒಬ್ಬ ನಿಗ್ರೋಜಾತಿಯ ವಿದ್ಯಾ-



ರ್ಥಿಯ ಚರಿತ್ರವನ್ನು ಹಿಂದುಸ್ಥಾನದ ವಿದ್ಯಾರ್ಥಿಗಳ ಮುಂದಿಡಬೇಕಾದರೆ ಆ ಚರಿತ್ರೆಯಲ್ಲಿ ಅಂಥದೇನಾದರೂ ಮಹತ್ವವಿರಬೇಕಲ್ಲವೇ? ಸ್ವಾರ್ಥತ್ಯಾಗವೇ ಆ ಚರಿತ್ರೆಯಲ್ಲಿರುವ ಮಹತ್ವದ ಗುಣವು. ಬುಕರನಂಥ ಸ್ವಾರ್ಥತ್ಯಾಗಿಗಳು ಯಾವ ರಾಷ್ಟ್ರದಲ್ಲಿ ಉತ್ಪನ್ನವಾಗುವರೋ ಆ ರಾಷ್ಟ್ರವು ತೀವ್ರವಾಗಿ ಮುಂದೆ ಬರಲಿಕ್ಕೆ ಬೇಕು. ಒಬ್ಬ ಬುಕರನು-ಒಬ್ಬ ಮಹಾತ್ಮನು-ಉಂಟಾದನು. ಆದರೆ ಅಷ್ಟರಿಂದಲೇ ಇಡೀ ನಿಗ್ರೋಜಾತಿಯ ಉದ್ಧಾರವಾಯಿತು. ಮಹಾತ್ಮನಾದ ಆರ್ಮಸ್ಟ್ರಾಂಗನ ಸಹವಾಸದಿಂದ ಬೆಳೆದ ಅವನ ಪಟ್ಟಶಿಷ್ಯನು ಅವನ ಹೆಸರನ್ನು ಮುಂದೆ ತಂದನು! ಆರ್ಯಭೂಮಾತೆಯೇ, ಸಾವಿರಾರು ವರ್ಷಗಳಿಂದ ಕೀಳುಜಾತಿಯವರೆಂದೆನ್ನಿಸಿಕೊಳ್ಳುವ ಅಸ್ಪೃಶ್ಯರನ್ನು ಒಂದು ಕ್ಷಣದಲ್ಲಿ ಸ್ಪೃಶ್ಯರನ್ನಾಗಿ ಮಾಡುವ ಕುರಿತು, ಸ್ವಜಾತಿಯ ಸಲುವಾಗಿ ಸ್ವಾರ್ಥತ್ಯಾಗವನ್ನು ತೋರಿಸಿದ ಬುಕರನಂಥ ವಿಭೂತಿಯನ್ನುಂಟು ಮಾಡಬಾರದೇ!

---

## ೭ನೇ ಪ್ರಕರಣ.

### ಹಂಪಟನ್ನವನ್ನು ಬಿಟ್ಟ ಮೇಲೆ.

ಶಿಕ್ಷಣವು ಮುಗಿದ ಬಳಿಕ ಮಾಲ್ಡನ್ ಕಡೆಗೆ ಹೋಗುವ ಹಾದಿಯ ಮೇಲೆ ಹತ್ತುವದೊಂದು ಭೋಜನಗೃಹದಲ್ಲಿ ಬುಕರನು ಒಂದು ಕೆಲಸವನ್ನು ಹಿಡಿದನು. ಈ ಕೆಲಸವು ಅನುಭವವಿದ್ದ ಜನರ ಹೊರತು ಬೇರೆಯವರಿಗೆ ಸರಿಯಾಗಿ ಮಾಡಲಿಕ್ಕೆ ಬರುವಂತಿದ್ದಿಲ್ಲ. ಭೋಜನಗೃಹದಲ್ಲಿ ಊಟಕ್ಕೆ ಬರುವ ಜನರನ್ನು ಸಂಪೂರ್ಣ ವಿಚಾರಿಸಿ ಅವರಿಗೆ ಹತ್ತುವ ಎಲ್ಲ ಸಾಮಾನುಗಳನ್ನು ಒದಗಿಸಿಕೊಡುವದೇ ಈ ಕೆಲಸವಾಗಿತ್ತು. ಈ ಕೆಲಸವನ್ನು ಮಾಡುವವರಿಗೆ ಖಿದಮತಗಾರ ಅಥವಾ ಹುಜುರೆಯುವ ಅನ್ನುವರು. ಈ ಕೆಲಸವು ಬುಕರನಿಗೆ

Digitized by ROJA MUTHIAH RESEARCH LIBRARY

ಮೊದಮೊದಲು ಸಾಧಿಸಲಿಲ್ಲ. ಅದರಿಂದ ಅವನು ತಾಟುಗಳನ್ನು ತೆಗೆಯುವ, ಹಾಕುವ ಕೆಲಸಗಳನ್ನು ಮಾಡಬೇಕಾಯಿತು. ಆದರೆ ಬುಕರನು ದೃಢನಿಶ್ಚಯದವನಾಗಿದ್ದನು. ಅವನು ಪ್ರಯತ್ನಮಾಡಿ ಒಂದು ವಾರದಲ್ಲಿಯೇ ಖಿದಮತಗಾರನ ಕೆಲಸದ ತಿಳುವಳಿಕೆಯನ್ನು ಮಾಡಿಕೊಂಡು ತನ್ನ ಸ್ಥಳವನ್ನು ಪುನಃ ದೊರಕಿಸಿದನು. ಈ ಭೋಜನಗೃಹದಲ್ಲಿ ತನಗೆ ಸಾಕಷ್ಟು ದುಡ್ಡು ದೊರೆತ ಕೂಡಲೇ ಅವನು ತನ್ನ ಮಾಲ್ಡನ್‌ವೆಂಬ ಊರಿಗೆ ಬಂದು ಮುಟ್ಟಿದನು.

ಮಾಲ್ಡನದಲ್ಲಿ ಈ ಕಾಲಕ್ಕೆ ನಿಗ್ರೋಜನರ ಸಲುವಾಗಿ ಒಂದು ಶಾಲೆಯು ಸ್ಥಾಪನವಾಗಿತ್ತು. ಆ ಸಾಲೆಯಲ್ಲಿ ಬುಕರನಿಗೆ ಶಿಕ್ಷಕನ ಸ್ಥಳವು ದೊರೆಯಿತು. ಮುಂಜಾನೆ ೮ ಗಂಟೆಯಿಂದ ರಾತ್ರಿಯ ೧೦ ಗಂಟೆಯವರೆಗೆ ಅವನು ಕಲಿಸುತ್ತಿದ್ದನು. ಪುಸ್ತಕೀಯ ಜ್ಞಾನದಿಂದಷ್ಟೇ ತನ್ನ ಜಾತಿಯ ಉನ್ನತಿಯಾಗಲಾರದೆಂದು ಅವನಿಗೆ ಮನವರಿಕೆಯಾಗಿತ್ತು. ಅದರಿಂದ ಸ್ನಾನವನ್ನು ಹೇಗೆ ಮಾಡಬೇಕು? ಬ್ರಶ್‌ದಿಂದ ಹಲ್ಲುಗಳನ್ನು ಹೇಗೆ ತಿಕ್ಕಿಕೊಳ್ಳಬೇಕು? ಅರಿವೆಗಳನ್ನು ಹೇಗೆ ಝುಳಝುಳವಿಡಬೇಕು? ಈ ಮುಂತಾದ ಸಣ್ಣಪುಟ್ಟ ಸಂಗತಿಗಳನ್ನು ಸಹ ಅವನು ವಿದ್ಯಾರ್ಥಿಗಳಿಗೆ ಕಲಿಸಬೇಕಾಯಿತು! ಶಿಕ್ಷಣವನ್ನು ಹೊಂದಲಿಚ್ಛಿಸುವ ವಿದ್ಯಾರ್ಥಿಗಳ ಸಂಖ್ಯೆಯು ಬಹಳ ಬೆಳೆದದ್ದರಿಂದ ಅವನು ರಾತ್ರಿಯ ಶಾಲೆಯನ್ನು ಪ್ರಾರಂಭಿಸಿದನು. ಈ ಸಾಲೆಗೆ ೫೦-೬೦ ವರುಷದ ಸ್ತ್ರೀಪುರುಷರು ಕಲಿಯಲಿಕ್ಕೆ ಬರುತ್ತಿದ್ದರೆಂಬುದು ಲಕ್ಷದಲ್ಲಿಡತಕ್ಕ ಮಾತಾಗಿದೆ. ಹಗಲಿರುಳು ತನ್ನ ಶಾಲೆಯನ್ನು ನಡೆಯಿಸಿ ಪ್ರತಿ ರವಿವಾರಕ್ಕೊಮ್ಮೆ ಅವನು ತನ್ನ ಊರಿಂದ ೩ ಮೈಲುಗಳ ಮೇಲಿರುವ ಮತ್ತೊಂದು ಊರಿಗೆ ಶಿಕ್ಷಣಕೊಡಲಿಕ್ಕೆ ಹೋಗುವನು. ತನಗೆ ಏನು ಬೇಕಾದದ್ದಾಗಲಿ ತನ್ನ ಜಾತಿಯೆಲ್ಲ ಕಲಿತು ಸುಧಾರಿಸಬೇಕೆಂಬುದೇ ಅವನ ಧ್ಯೇಯವಾಗಿತ್ತು! ಅದರಿಂದಲೇ ಅವನು ಸ್ವತಃ ಕಲಿತಷ್ಟು ಇತರರಿಗೆ ಹೇಳಲಿಕ್ಕೆ ಯಾವಾಗಲೂ ಸಿದ್ಧನಾಗಿರುತ್ತಿದ್ದನು.



ಹಂಪಟನ್ನದಲ್ಲಿಯ ಶಿಕ್ಷಣದ ಲಾಭವು ಬುಕರನಿಗೆ ಚನ್ನಾಗಿ ಆಯಿತು. ಬುಕರನು ಶಿಕ್ಷಣಹೊಂದುವಾಗ್ಗೆ ಅವನಿಗೆ ಸಹಾಯಮಾಡಿದವರಲ್ಲಿ ಅವನ ಹಿರಿಯಣ್ಣನಾದ ಜಾನನೆಂಬುವನು ಮುಖ್ಯನಾಗಿದ್ದನು. ಆದ್ದರಿಂದ ಹಂಪಟನ್ನದಿಂದ ತಾನು ತಿರುಗಿ ಬಂದನಂತರ ಬುಕರನು ತನ್ನ ಅಣ್ಣನನ್ನು ಆ ಶಾಲೆಗೆ ಕಳಿಸುವ ನಿಶ್ಚಯವನ್ನು ಮಾಡಿದನು. ಈ ಕೆಲಸದಲ್ಲಿ ಅವನಿಗೆ ಯಶಸ್ಸು ದೊರೆಯಿತು. ಸ್ವಲ್ಪ ದಿವಸಗಳಲ್ಲಿಯೇ ಜಾನನು ಅಲ್ಲಿಗೆ ಹೋಗಿ, ಶಿಕ್ಷಣಹೊಂದಿ, ಮರಳಿ ಬಂದು ಬುಕರನಿಗೆ ಅವನ ಕೆಲಸದಲ್ಲಿ ಸಹಾಯಮಾಡಹತ್ತಿದನು. ಬುಕರನಿಗೆ ಗೇಮ್ಸನೆಂಬ ಎರಡನೇ ದತ್ತಕ ಬಂಧುವು ಒಬ್ಬನು ಇದ್ದನು. ಜಾನನ ತರುವಾಯ ಗೇಮ್ಸನು ಸಹ ಹಂಪಟನ್ನಿಗೆ ಹೋಗಿ ಶಿಕ್ಷಿತನಾಗಿ ಬಂದು ಬುಕರನಿಗೆ ಸಹಾಯವನ್ನು ಮಾಡಹತ್ತಿದನು. ಬುಕರನು ಮಾಲ್ಡನದಲ್ಲಿ ಒಂದು ವಾಚನಾಲಯವನ್ನೂ, ವಾದವಿವಾದದ ಒಂದು ಸಭೆಯನ್ನೂ ಆರಂಭಿಸಿ ತಾನು ಅವುಗಳ ಚಾಲಕನಾದನು.

ಇ. ಸ. ೧೮೭೬ರಿಂದ ೧೮೭೮ರವರೆಗೆ ಮಾಲ್ಡನದಲ್ಲಿ ಈ ಮೇರೆಗೆ ಕೆಲಸ ಮಾಡಿದನಂತರ ೧೮೭೮ನೇ ಇಸವಿಯ ಶರದೃತುವಿನಲ್ಲಿ ಬುಕರನು ಕೋಲಂಬಿಯಾ ಪ್ರಾಂತದೊಳಗಣ ವಾಶಿಂಗ್ಟನವೆಂಬ ಶಹರದಲ್ಲಿರುವ ಶಿಕ್ಷಣಸಂಸ್ಥೆಯಲ್ಲಿ ೮ ತಿಂಗಳು ನಿಂತು ಅಭ್ಯಾಸಮಾಡಿದನು. ಈ ಸಂಸ್ಥೆಯಲ್ಲಿ ಕೇವಲ ವಾಙ್ಮಯ ವಿಷಯಕವಾದ ಶಿಕ್ಷಣವು ದೊರೆಯುತ್ತಿತ್ತು. ಇದರಿಂದ ಹಂಪಟನ್ನ ಹಾಗೂ ವಾಶಿಂಗ್ಟನ್ನದಲ್ಲಿಯ ಶಿಕ್ಷಣವನ್ನು ತುಲನೆಮಾಡುವ ಸಂಧಿಯು ಬುಕರನಿಗೆ ದೊರೆಯಿತು. ಹಾಗೂ ಅವನು ಮುಂದೆ ತೆರೆದ ಶಾಲೆಗಳಲ್ಲಿಯ ಶಿಕ್ಷಣದ ಧ್ಯೇಯವನ್ನು ಸ್ಥಿರಪಡಿಸಲಿಕ್ಕೆ ಈ ಸಂಗತಿಯು ಒಳ್ಳೇ ಉಪಯೋಗಕ್ಕೆ ಬಿದ್ದಿತು. ಈ ವಾಶಿಂಗ್ಟನ್ ಸಂಸ್ಥೆಯಲ್ಲಿ ಶಿಕ್ಷಣಹೊಂದಿದ ವಿದ್ಯಾರ್ಥಿಗಳು ಡೌಲಿನ ಅರಿವೆಗಳನ್ನು ಹಾಕಿಕೊಂಡು, ಐಷ ಆರಾಮದಲ್ಲಿ ಹೊತ್ತುಗಳೆಯುವವರೂ, ಯಾವದೊಂದು ಉದ್ಯೋಗವನ್ನು

Digitized by ROJA MUTHIAH RESEARCH LIBRARY

ಮಾಡದೆ ಕೂತಲ್ಲಿಯೇ ಹಣಗಳಿಸಬೇಕೆಂಬುವ ಹವ್ಯಾಸವುಳ್ಳವರೂ ಆಗಿದ್ದರು. ಸಣ್ಣಪುಟ್ಟ ಕೆಲಸಗಳನ್ನು ಮಾಡುವದು ಲಾಂಛನಾಸ್ಪದವೆಂದು ಅವರ ಭಾವನೆಯಿತ್ತು. ಅರ್ಥಾತ್ ಈ ತರದ ಶಿಕ್ಷಣಪದ್ಧತಿಯು ಬುಕರನ ಮನಸ್ಸಿಗೆ ಬರಲಿಲ್ಲೆಂಬದನ್ನು ಬೇರೆ ಹೇಳಲಿಕ್ಕೆಬೇಡ.

ಬುಕರನು ವಾಸಿಂಗ್ಟನ್ನದಲ್ಲಿರುವಾಗ ಮಾಲ್ಡನ್‌ಭಾಗದಲ್ಲಿರುವ ಯುರೋಪಿಯನ್ ಪಂಚಕಮಿಟಿಯಿಂದ ಆಮಂತ್ರಣ ಬಂದಿತು. ಆ ವೇಳೆಯಲ್ಲಿ ವೆಸ್ಟವ್ಹರ್ಜಿನೀಯಾ ಪ್ರಾಂತದ ರಾಜಧಾನಿಯನ್ನು ಬದಲಿಸಿ ಬೇರೊಂದು ಪಟ್ಟಣವನ್ನು ಮಾಡುವದಿತ್ತು. ಮಾಲ್ಡನ್‌ದಿಂದ ೫ ಮೈಲುಗಳ ಮೇಲಿರುವ ಚಾರ್ಲ್ಸಟನ್‌ವನ್ನು ಹೊಸ ರಾಜಧಾನಿಗಾಗಿ ಯೋಜಿಸಬೇಕಾಗಿತ್ತು. ಯುರೋಪಿಯನ್ ಜನರು ಆ ಭಾಗದಲ್ಲೆಲ್ಲ ತಿರುಗಾಡಿ ಚಾರ್ಲ್ಸಟನ್ನಿಗೆ ಹೆಚ್ಚು ಮತಗಳು ಬೀಳುವ ಸಲುವಾಗಿ ವ್ಯಾಖ್ಯಾನಕೊಡಲಿಕ್ಕೆ ಬುಕರನಿಗೆ ವಿನಂತಿಯನ್ನು ಮಾಡಿಕೊಂಡಿದ್ದರು. ಈ ವಿನಂತಿಯನ್ನು ಮನ್ನಿಸಿ ಬುಕರನು ೨-೩ ತಿಂಗಳು ವ್ಯಾಖ್ಯಾನವನ್ನು ಕೊಡುವದರಲ್ಲಿ ಕಳೆದನು. ಅವನಿಗೆ ಈ ಕೆಲಸದಲ್ಲಿ ಯಶಸ್ಸೂ ದೊರೆಯಿತು. ಇದೇ ಸಂಧಿಯಲ್ಲಿ ಆರ್ಮಸ್ಟ್ರಾಂಗನಿಂದ ಹಂಪಟನ್ನದ ಗ್ರ್ಯಾಜ್ಯುಯೇಟ ವಿದ್ಯಾರ್ಥಿಗಳ ಪದವೀದಾನ ಸಮಾರಂಭದಲ್ಲಿ ಉಪದೇಶಪರ ವ್ಯಾಖ್ಯಾನಗಳನ್ನು ಹೇಳಲಿಕ್ಕೆ ಪತ್ರಮೂಲಕವಾದ ಆಮಂತ್ರಣವು ಬಂದಿತ್ತು. ಬುಕರನು ಅತ್ಯಾನಂದಬಟ್ಟು ಪತ್ರದ ಪ್ರಕಾರ ಹಂಪಟನ್ನಿಗೆ ಹೋಗಿ ಈ ಕೆಲಸವನ್ನು ಕೊನೆಗಾಣಿಸಿದನು. ಯಾವ ಶಾಲೆಯಲ್ಲಿ ಬುಕರನು ೨-೩ ವರ್ಷಗಳ ಪೂರ್ವದಲ್ಲಿ ವಿದ್ಯಾರ್ಥಿಯಾಗಿ ಶಿಕ್ಷಣಹೊಂದಿದನೋ, ಅದೇ ಸಾಲೆಯಲ್ಲಿ ಇಷ್ಟು ಅಲ್ಪಾವಧಿಯಲ್ಲಿಯೇ ಪದವೀದಾನ ಸಮಾರಂಭದ ಕಾಲಕ್ಕೆ ಉಪದೇಶಪರ ವ್ಯಾಖ್ಯಾನಗಳನ್ನು ಕೊಡಲಿಕ್ಕೆ ಹೋಗುವದು ಎಷ್ಟು ಅಭಿಮಾನಾಸ್ಪದ ಸಂಗತಿಯು! ಇಂತಹ ಮಾನವನ್ನು ಹೊಂದಲಿಕ್ಕೆ ಆ ತರದ ಯೋಗ್ಯತೆಯೂ ಬೇಕಾಗುತ್ತದೆ. ಬುಕರನ



ಯೋಗ್ಯತೆಯನ್ನು ಆರ್ಮಸ್ಟ್ರಾಂಗನು ಪೂರ್ಣವಾಗಿ ಅರಿತಿದ್ದರಿಂದಲೇ ಅವನನ್ನು ಈ ಕೆಲಸಕ್ಕೆ ಯೋಜಿಸಿದನು.

ಹಂಪಟನ್ನದಿಂದ ತಿರುಗಿ ಬಂದಬಳಿಕ ಇ. ಸ. ೧೮೭೯ ರಲ್ಲಿ ಬುಕರನಿಗೆ ಮತ್ತೆ ಹಂಪಟನ್ನಕ್ಕೆ ಬರಲಿಕ್ಕೆ ಆರ್ಮಸ್ಟ್ರಾಂಗನಿಂದ ಆಮಂತ್ರಣವು ಬಂದಿತು. ಬುಕರನೂ ಆ ಪ್ರಕಾರ ಮತ್ತೆ ಹಂಪಟನ್ನಕ್ಕೆ ಹೋದನು. ಅಲ್ಲಿ ಅವನಿಗೆ ಕೆಂದು ಇಂಡಿಯನ್ನರೆಂಬ ಕಾಡುಜನರಿಗೆ ಶಿಕ್ಷಣಕೊಡುವ ಕೆಲಸವನ್ನೊಪ್ಪಿಸಿದರು. ಈ ಕೆಲಸವು ಬಹಳ ಕಠಿಣವಾದದ್ದಿತ್ತು. ಈ ಇಂಡಿಯನ್ನರು ತಾವು ನಿಗ್ರೋ ಜನರಗಿಂತಲೂ ಶ್ರೇಷ್ಠರಾದವರೆಂದು ತಿಳಿಯುತ್ತಿದ್ದರು. ಅದರಿಂದ ಬುಕರನಿಗೆ ಅವರಲ್ಲಿಯೇ ಇದ್ದುಕೊಂಡು ಅವರನ್ನು ತನ್ನವರನ್ನಾಗಿ ಮಾಡಿಕೊಳ್ಳಲಿಕ್ಕೆ ಬಹಳ ಶ್ರಮಬಡಬೇಕಾಯಿತು. ಆದರೂ ಅವನಿಗೆ ಈ ಕೆಲಸದಲ್ಲಿ ಯಶಸ್ಸು ಸಿಕ್ಕಿತು. “ ಎರಡನೆಯವರ ಏಳ್ಗೆಯಾಗಲಿಕ್ಕೆ ತಾನು ಎಷ್ಟು ಸಹಾಯಮಾಡುವನೋ ಅಷ್ಟೇ ತನ್ನ ಏಳ್ಗೆಯಾಗುವ ”ದೆಂಬ ತತ್ವವು ಬುಕರನಿಗೆ ಮನದಟ್ಟಾದ್ದರಿಂದ ಕೆಂದು ಇಂಡಿಯನ್ನರ ಸಲುವಾಗಿ ಬಳ್ಳೇ ಶ್ರಮಮಾಡಿದನು. ಅವರನ್ನು ಸಂತೋಷದಲ್ಲಿಯೇ ಇಟ್ಟು ಅವರ ಕಡೆಯಿಂದ ಕೆಲಸ ತಕ್ಕೊಂಡನು.

ಬುಕರನು ಕೆಂದು ಇಂಡಿಯನ್ನರ ಶಾಲೆಯನ್ನು ಒಂದು ವರ್ಷ ಚನ್ನಾಗಿ ನಡೆಯಿಸಿದ ಬಳಿಕ ಹಂಪಟನ್ನದಲ್ಲಿಯ ರಾತ್ರಿಯ ಸಾಲೆಯಲ್ಲಿ ಶಿಕ್ಷಣಕೊಡುವದನ್ನು ಆರ್ಮಸ್ಟ್ರಾಂಗನು ಅವನಿಗೆ ಒಪ್ಪಿಸಿದನು. ಹಗಲಿನಲ್ಲಿ ಕೂಲಿ-ಕುಂಬಳಿಮಾಡುವ ಜನರು ರಾತ್ರಿಯಲ್ಲಿ ಈ ಶಾಲೆಗೆ ಬಂದು ಶಿಕ್ಷಣವನ್ನು ಹೊಂದುತ್ತಿದ್ದರು. ಬುಕರನು ಸಾಲೆಯನ್ನು ಪ್ರಾರಂಭಿಸಿದಾಗ ಅದರಲ್ಲಿ ೧೨ ವಿದ್ಯಾರ್ಥಿಗಳು ಮಾತ್ರ ಇದ್ದರು. ಆದರೂ ಬುಕರನು ಈ ಶಾಲೆಯನ್ನು ಅತ್ಯಂತ ಯಶಸ್ವಿ

Digitized by ROJA MUTHIAH RESEARCH LIBRARY

ಯಾಗಿ ಮಾಡಿ ತೋರಿಸಿದನು. ಒಮ್ಮೆ ಈ ಶಾಲೆಯಲ್ಲಿ ಕುಳಿತ ವ್ಯವಸ್ಥೆಯು ಕಡೆತನಕ ಸ್ಥಿರವಾಗಿ ಉಳಿಯಿತು. ಸದ್ಯಕ್ಕೆ ಈ ಸಾಲೆಯು ಅಮೇರಿಕದಲ್ಲಿ ಯಥಾಸ್ಥಿತವಾಗಿ ಸಾಗಿದ್ದು ಸುಮಾರು ೪೦೦ ವಿದ್ಯಾರ್ಥಿಗಳು ಅಲ್ಲಿ ಶಿಕ್ಷಣವನ್ನು ಹೊಂದುತ್ತಲಿರುವರು.

ಈ ಮೇರೆಗೆ ಈ ಶಾಲೆಯಲ್ಲಿ ಒಂದು ವರ್ಷ ಕೆಲಸ ಮಾಡಿದ ಬಳಿಕ ಬುಕರನು ಹಂಪಟನ್ನವನ್ನು ಬಿಟ್ಟನು. 'ಅಲಾಬಾಮಾ' ಸಂಸ್ಥಾನದೊಳಗಿನ 'ಟಸ್ಕೇಜಿ' ಎಂಬಲ್ಲಿ "ಕರೇಜನರ ಸಲುವಾಗಿ ಒಂದು ಶಾಲೆಯನ್ನು ಸ್ಥಾಪಿಸತಕ್ಕದ್ದದೆ. ಅದಕ್ಕಾಗಿ ಒಬ್ಬ ಯೋಗ್ಯ ಶಿಕ್ಷಕನನ್ನು ಕಳಿಸಿಕೊಡಿರಿ." ಎಂದು ಆರ್ಮಸ್ಟ್ರಾಂಗನಿಗೆ ಒಂದು ಪತ್ರ ಬಂದದ್ದರಿಂದ ಅವನು ಬುಕರನನ್ನೇ ಈ ಕೆಲಸಕ್ಕೆ ಆರಿಸಿ ಕಳುಹಿಸಿಕೊಟ್ಟನು. ಇಲ್ಲಿಂದ ಮುಂದೆ ಅವನಿಗೆ ತನ್ನ ಯೋಗ್ಯತೆಯನ್ನು ಜಗತ್ತಿನೆದುರಿಗೆ ತೋರಿಸುವ ನಿಜವಾದ ಸಂಧಿಯು ಪ್ರಾಪ್ತವಾಯಿತು. ಬುಕರನಾದರೂ ಆ ವೇಳೆಯ ಸದುಪಯೋಗವನ್ನೇ ಮಾಡಿಕೊಂಡನು.

---

## ೮ನೇ ಪ್ರಕರಣ.

### ಟಸ್ಕೇಜಿಯ ಶಾಲೆಯು.

ಜನರಲ್ ಆರ್ಮಸ್ಟ್ರಾಂಗನ ಆಜ್ಞೆಯ ಮೇರೆಗೆ ಬುಕರನು ಟಸ್ಕೇಜಿಗೆ ಬಂದು ಶಾಲೆಯನ್ನು ಪ್ರಾರಂಭಿಸಿದನು. ಟಸ್ಕೇಜಿಯು ಕರೇಜನರ ಮಧ್ಯವಸತಿಸ್ಥಾನವಾಗಿತ್ತು. ಈ ಊರಿಗೆ ಬರುತ್ತಲೆ ಬುಕರನಿಗೆ ಅನೇಕ ತರದ ತೊಂದರೆಗಳು ತೋರಹತ್ತಿದವು. ಸಾಲೆಗೆ ಬೇಕಾಗುವ ಯಾವ ಸಾಧನಗಳೂ ಸಿದ್ಧವಾಗಿರಲಿಲ್ಲ. ಸಾಲೆಯ ಇಮಾರತು ಸಹ ಇದ್ದಿಲ್ಲ. ಆದರೆ ನಿರಾಶೆಯ ಗಾಳಿಯು ಸಹ ಸೋಂಕದ ಬುಕರನಿಗೆ ಈ ಮಾತಿನ ಆಶ್ಚರ್ಯವಾಗಲಿಲ್ಲ! ಬುಕರನ



ಸುದೈವದಿಂದ ಶಿಕ್ಷಣಕ್ಕೆ ತಳಮಳಿಸುವ ಜನರು ಮಾತ್ರ ಅಲ್ಲಿ ಹೇರಳವಾಗಿದ್ದರು. ಆ ಜನರ ಸ್ಥಿತಿಯು ವಿಚಾರಮಾಡುವಂಥದಾಗಿತ್ತು. ನಮ್ಮ ಕಡೆಗೆ ಮುಂಬಯಿಯಂಥ ದೊಡ್ಡ ಪಟ್ಟಣದಲ್ಲಿ ಕೂಲಿಕಾರರ ಸ್ಥಿತಿಯು ಯಾವಪ್ರಕಾರದ್ದಿರುವದೋ ಅದೇಪ್ರಕಾರದ ಸ್ಥಿತಿಯು ಆ ಜನರದ್ದಿತ್ತು. ಇವರು ಸಾಲಗಾರರಾಗಿದ್ದರೂ ಇಲ್ಲದ ಶ್ರೀಮಂತಿಕೆಯ ಡೌಲನ್ನು ತೋರಿಸುವ ಹವ್ಯಾಸವು ಇವರಲ್ಲಿ ಬಹಳವಾಗಿ ಕಂಡು ಬರುತ್ತಿತ್ತು! ಮನೆಯಲ್ಲಿ ಉಪವಾಸಬೀಳುವ ಸ್ಥಿತಿಯಿದ್ದರೂ ಘಡಿಯಾರ, ಪಿಯಾನೋ, ನಕ್ಷೆಯ ಯಂತ್ರಗಳು ಈ ಮೊದಲಾದವುಗಳನ್ನು ಕೊಂಡುಕೊಳ್ಳುವ ಬಗ್ಗೆ ವಿಲಕ್ಷಣವಾದ ಆತುರತೆಯು! ಶನಿವಾರದ ಅರ್ಧ ದಿವಸವನ್ನು ಐಷ ಆರಾಮದಲ್ಲಿ ಕಳೆಯಬೇಕೆಂಬ ಪ್ರಬಲವಾದ ಮನಃಪ್ರವೃತ್ತಿಯು! ಇಂತಹ ಜನರಿಗೆ ಶಿಕ್ಷಣವನ್ನು ಕೊಡಲಿಕ್ಕೆ ಬುಕರನ ಯೋಜನೆಯಾಗಿತ್ತು. ಬುಕರನಾದರೂ ಉತ್ತಮ ಶಿಕ್ಷಕನೇ ಆಗಿದ್ದನು. ಅವನು ಟಸ್ಕೇಜಿಗೆ ಬಂದಬಳಿಕ ಒಂದು ತಿಂಗಳತನಕ ಹಳ್ಳಿ-ಪಳ್ಳಿಗಳಲ್ಲಿ ತಿರುಗಾಡಿ ತನ್ನ ಜನರ ಸ್ಥಿತಿಯನ್ನು ಕಣ್ಣುಟ್ಟ ನೋಡಿದನು. ಅವರ ಸ್ವಭಾವವನ್ನು ಹಾಗೂ ವಿವೇಕ ಬುದ್ಧಿಯನ್ನು ಸೂಕ್ಷ್ಮರೀತಿಯಿಂದ ನಿರೀಕ್ಷಣೆ ಮಾಡಿದನು. ಬಳಿಕ ಇವುಗಳಿಗನುಸರಿಸಿ ತನ್ನ ಶಿಕ್ಷಣದ ದಿಶೆಯನ್ನು ಗೊತ್ತುಮಾಡಿದನು.

ಇ. ಸ. ೧೮೮೧ ರ ಜುಲಾಯಿತಿಂಗಳ ೪ನೇ ತಾರೀಖಿಗೆ ಸಾಲೆಯು ಪ್ರಾರಂಭವಾಯಿತು. ಆಗ ವಿದ್ಯಾರ್ಥಿ-ವಿದ್ಯಾರ್ಥಿನಿಗಳು ಕೂಡಿ ೩೦ ಜನರಿದ್ದರು. ಈ ವಿದ್ಯಾರ್ಥಿಗಳಲ್ಲಿ ಕೆಲವರು ೩೦-೪೦ ವರ್ಷದವರೂ ಇದ್ದರು. ಈ ಸಾಲೆಗೆ ಟಸ್ಕೇಜಿಯಲ್ಲಿರುವ ಕೆಲವು ಯುರೋಪಿಯನ್ ಸದ್ಗೃಹಸ್ಥರೂ ಸಹಾಯಮಾಡಿದರು. ಸಾಲೆಯ ಆರಂಭವು ಮೊದಲು ಒಂದು ಕೋಳಿಯ ಮನೆಯಲ್ಲಾಯಿತು! ಈ ಮನೆಯು ಸಣ್ಣದಾಗಿದ್ದಲ್ಲದೆ ಮುರಕವೂ ಇತ್ತು! ಮಳೆಯಾಗಹತ್ತಿತೆಂದರೆ ವಿದ್ಯಾರ್ಥಿಗಳು ಶಿಕ್ಷಕನ ಮೇಲೆ ಕೊಡೆಯನ್ನು ಹಿಡಿಯುತ್ತಿದ್ದರು!

Digitized by ROJA MUTHIAH RESEARCH LIBRARY

ಊರಲ್ಲಿ ಒಂದು ಚರ್ಚ (ಪ್ರಾರ್ಥನಾಮಂದಿರ)ವು ಇತ್ತು. ಇದಾದರೂ ಬಿದ್ದು ಹೋಗಿತ್ತು.

ಕೇವಲ ಬೌದ್ಧಿಕ ಶಿಕ್ಷಣವನ್ನು ಕೊಡುವದರಿಂದ ನಿಜವಾದ ಶಿಕ್ಷಣವನ್ನು ಕೊಟ್ಟಂತಾಗಲಿಲ್ಲ. ಇತರ ವ್ಯಾವಹಾರಿಕ ಶಿಕ್ಷಣವನ್ನಾದರೂ ವಿದ್ಯಾರ್ಥಿಗಳಿಗೆ ಕೊಡಲಿಕ್ಕೇ ಬೇಕೆಂದು ಬುಕರನಿಗೆ ಚನ್ನಾಗಿ ಮನವರಿಕೆಯಾಗಿತ್ತು. ಅದರಿಂದ ಇದೇ ಧೋರಣವನ್ನು ಮುಂದಿಟ್ಟುಕೊಂಡು ಅವನು ತನ್ನ ಶಿಕ್ಷಣವನ್ನು ಪ್ರಾರಂಭಿಸಿದನು. ಶಾಲೆಯ ಸಲುವಾಗಿ ಇಮಾರತುಗಳನ್ನು ಕಟ್ಟೋಣ, ಇತರ ಉಪಕರಣಗಳನ್ನು ಕೂಡಿಸೋಣ ಈ ಮೊದಲಾದ ಕೆಲಸಗಳನ್ನು ಅವನು ವಿದ್ಯಾರ್ಥಿಗಳಿಂದಲೇ ಮಾಡಿಸಿಕೊಂಡನು. ಉಪ್ಪಾರಿಕೆ, ಬಡಿಗತನ ಮೊದಲಾದ ಉದ್ಯೋಗಗಳನ್ನು ವಿದ್ಯಾರ್ಥಿಗಳಿಗೆ ಆಯಾ ಕೆಲಸಗಳನ್ನು ಪ್ರತ್ಯಕ್ಷ ಮಾಡಲಿಕ್ಕೆ ಅನುವುಕೊಟ್ಟು ಕಲಿಸಿದನು. ಇಟ್ಟಂಗಿಗಳನ್ನು ರಚಿಸುವ ಕಾರಖಾನೆಯನ್ನು ಶಾಲೆಗೆ ಜೋಡಿಸಿಯೇ ತೆಗೆದನು. ಸಾರಾಂಶ:—ವಿದ್ಯಾರ್ಥಿಗಳ ಗರಜಿಗೆ ಬೇಕಾದ ಎಲ್ಲ ತರದ ಶಿಕ್ಷಣವು ಈ ಸಾಲೆಯಲ್ಲಿ ದೊರೆಯಹತ್ತಿತು. ಅದರಿಂದ ಐಷ ಆರಾಮದ ಕಡೆಗೆ ವಿಶೇಷಪ್ರವೃತ್ತಿಯಿದ್ದ ಜನರಿಗೆ ಆರಂಭದಲ್ಲಿ ಈ ಶಾಲೆಯ ಶಿಕ್ಷಣವು ಸೇರಲಿಲ್ಲ. ಆದರೆ ಒಟ್ಟಿನಮೇಲೆ ಎಲ್ಲ ಜನರಿಗೂ ಇಲ್ಲಿ ದೊರೆಯುವ ಶಿಕ್ಷಣವು ತೀವ್ರವೇ ಒಪ್ಪಿಗೆಯಾಯಿತು. ಅದರಿಂದಲೇ ಈ ಸಾಲೆಯು ಅಲ್ಪಾವಕಾಶದಲ್ಲಿಯೇ ಬಹುಜನರ ಚಿತ್ತವನ್ನು ಆಕರ್ಷಿಸಿಕೊಂಡಿತು. ಮೊದಲನೇ ತಿಂಗಳ ಕೊನೆಗೆ ಈ ಸಾಲೆಯಲ್ಲಿ ೫೦ ವಿದ್ಯಾರ್ಥಿಗಳಾದರು. ಮುಂದೆ ತೀವ್ರವೇ ಈ ಸಾಲೆಗೆ ಮಿಸ್ ಆಲೀವ್ಹೀಅ ಎ. ಡೇವ್ಹಿಡಸನ ಎಂಬ ಅಧ್ಯಾಪಿಕೆಯು ಬಹಳ ಸಹಾಯವನ್ನು ಮಾಡಿದಳು. ಇವಳೇ ಮುಂದೆ ಬುಕರನ ಪತ್ನಿಯಾದಳು.

ಮುಂದೆ ಬುಕರನು ೫೦೦ *ಡಾಲರುಗಳಿಗೆ ಒಂದು ಪ್ರದೇಶವನ್ನು ಕೊಂಡುಕೊಂಡನು. ಆ ಬಗ್ಗೆ ೨೫೦ ಡಾಲರುಗಳನ್ನು ಆಗಿಂದಾಗ್ಗೇ ಕೊಟ್ಟು ಉಳಿದವುಗಳನ್ನು ಒಂದು ವರ್ಷದ ಮೇಲೆ ಕೊಡಲೊಪ್ಪಿದನು. ಈ ಪ್ರದೇಶದೊಳಗಿನ ತಗ್ಗುದಿಟ್ಟಗಳನ್ನೆಲ್ಲ ವಿದ್ಯಾರ್ಥಿಗಳೇ ನೆಟ್ಟಗೆ ಮಾಡಿದರು. ಈ ಸ್ಥಳವನ್ನು ನೆಟ್ಟಗೆ ಮಾಡುವ ಕೆಲಸವನ್ನು ಸ್ವತಃ ಬುಕರನೇ ಮೊದಲು ಆರಂಭಿಸಿದನು. ಈ ಪ್ರದೇಶದೊಳಗಿನ ಒಂದೆರಡು ಇಮಾರತುಗಳನ್ನು ವಿದ್ಯಾರ್ಥಿಗಳೇ ಉಡುಗಿ ಸ್ವಚ್ಛಮಾಡಿದರು. ಬೌದ್ಧಿಕ ಶಿಕ್ಷಣದೊಡನೆ ಇಂತಹ ವ್ಯಾವಹಾರಿಕ ಶಿಕ್ಷಣವು ದೊರಕಲು ವಿದ್ಯಾರ್ಥಿಗಳು ಸ್ವಾವಲಂಬನದಿಂದ ಜೀವಿಸಲಿಕ್ಕೆ ತಕ್ಕವರಾಗುವದು ನಿಶ್ಚಯವು. ಬುಕರನು ತನ್ನ ಭಾವೀ ಪತ್ನಿಯ ಸಹಾಯದಿಂದ ಜಾತ್ರೆಯನ್ನು ಕೂಡಿಸುವ ಒಂದು ಹೊಸ ಹಂಚಿಕೆಯನ್ನು ತೆಗೆದನು. ಟಸ್ಕೇಜಿಯಲ್ಲಿಯೂ ಅದರ ಸುತ್ತುಮುತ್ತಲಿನ ಹಳ್ಳಿಗಳಲ್ಲಿಯೂ ತಿರುಗಾಡಿ ಜನರ ಕಡೆಯಿಂದ ತನ್ನ ಶಾಲೆಯ ಉಪಯೋಗಕ್ಕೆಂದು ವ್ಯವಹಾರೋಪಯುಕ್ತವಾದ ಪದಾರ್ಥಗಳನ್ನು ಇಸಿದುಕೊಂಡು ಬಂದು, ಜಾತ್ರೆಯೊಳಗಿನ ಪೇಟೆಯಲ್ಲಿ ಅವನ್ನು ಮಾರಿ ಕೆಲವು ಹಣ ಸಂಪಾದಿಸಿದನು. ಈ ರೀತಿಯಿಂದ ಕೂಡಿದ ಹಣಕ್ಕೆ, ಹಂಪಟನ್ನ ಶಿಕ್ಷಣಸಂಸ್ಥೆಯ ಲೆಕ್ಕಪತ್ರದ ವ್ಯವಸ್ಥೆಯನ್ನು ನೋಡುತ್ತಿರುವ ಜನರಲ್ ಜೇ. ಎಫ್. ಬೀ. ಮಾರ್ಶಲ್ ಎಂಬವರಿಂದ ಕಡವಾಗಿ ತಂದ ಕೆಲವು ಹಣವನ್ನು ಕೂಡಿಸಿ, ಕೊಂಡುಕೊಂಡ ಪ್ರದೇಶದ ಉಳಿದ ಅರ್ಧ ಹಣವನ್ನು ಮುಟ್ಟಿಸಿದನು.

ಸಾಲೆಯು ಚನ್ನಾಗಿ ನಡೆದಿದೆ ಎಂದು ತಿಳಿದ ಕೂಡಲೆ ಬಡಬಗ್ಗರು ಸಹ ಅದಕ್ಕೆ ತಮ್ಮ ಕೈಯಿಂದಾದಷ್ಟು ಸಹಾಯವನ್ನು ಮಾಡಹತ್ತಿದರು. ಕೆಲ ಬಡ ನಿಗ್ರೋಜನರು ಹರಕು ಚಾದರ, ಖಬ್ಬ ಇತ್ಯಾದಿ ಜೀನಸುಗಳನ್ನು ಕಾಣಿಕೆಯಾಗಿ ಕೊಟ್ಟು ಸಾಲೆಯ ವಿಷಯವಾಗಿ ತಮಗಿದ್ದ ಆದರವನ್ನು ವ್ಯಕ್ತಗೊಳಿಸಿದರು. ೭೦ ವರ್ಷದ ಮುದಕಿಯೊಬ್ಬಳು ಬುಕರನ ಹತ್ತರ ಬಂದು "ಬಾಳಾ ನೀನು

* ಇದು ಅಮೇರಿಕದ ನಾಣ್ಯವು. ಇದರ ಬೆಲೆ ಸರಾಸರಿ ೩ ರಿಂದ ೫ ರು. ಗಳವರೆಗೆ ಇರುವದು.

Digitized by ROJA MUTHIAH RESEARCH LIBRARY

ನಮ್ಮ ಜಾತಿಯ ಉನ್ನತಿಗಾಗಿ ಹೆಣಗಾಡುತ್ತಿರುವೆಯಷ್ಟೇ; ಇದನ್ನು ನೋಡಿ ನನಗೆ ಬಹಳ ಆನಂದವೆನಿಸುತ್ತದೆ. ನಿನಗೆ ಸಹಾಯವನ್ನು ಮಾಡಲಿಕ್ಕೆ ನನ್ನ ಹತ್ತಿರ ಏನೂ ಇಲ್ಲ. ಆದರೂ ಬಹಳ ದಿವಸ ಹಿಡಿದು ಖರ್ಚುಮಾಡಿ ಈ ಆರು ಕೋಳೀ ತತ್ತಿಗಳನ್ನು ಮಾತ್ರ ಸಂಗ್ರಹಿಸಿದ್ದೇನೆ. ಇವುಗಳನ್ನು ಈಗ ನಿನಗೆ ಕೊಡುವೆನು. ತೆಗೆದುಕೋ. ಬೇಡೆನ್ನಬೇಡ." ಎಂದಳು! ಹಳ್ಳಿಪಳ್ಳಿಗಳಲ್ಲಿಯ ತೀರ ಸಾಮಾನ್ಯಜನರ ಲಕ್ಷವನ್ನು ಎಳೆದುಕೊಳ್ಳುವ ಸಾಲೆಯು ನಿಜವಾಗಿಯೂ ಅಂತಹ ಯೋಗ್ಯತೆಯುದು ಇರಲಿಕ್ಕೆ ಬೇಕು. ಇದರಲ್ಲಿ ಸಂಶಯವಿಲ್ಲ.

ವಿದ್ಯಾರ್ಥಿಗಳು ಪರೋಪಕಾರ ವ್ರತವನ್ನು ಸ್ವೀಕರಿಸಬೇಕೆಂದು ಬುಕರನು ಬಹಳ ಪರಿಶ್ರಮಮಾಡಿದನು. ವಿದ್ಯಾರ್ಥಿಗಳೂ ತೀವ್ರವೇ ಗುರುವಿನ ಅನುಕರಣವನ್ನು ಮಾಡಿದರು. ಒಂದು ಸೂಟಿಯಲ್ಲಿ ವಿದ್ಯಾರ್ಥಿಗಳೆಲ್ಲ ಕೂಡಿ ಒಬ್ಬ ಬಡ ಮುದುಕನ ಗುಡಿಸಲವನ್ನು ಹಾಕಿಕೊಟ್ಟರು. ಅಡಚಣಿಯಲ್ಲಿದ್ದವರಿಗೆ ಸಹಾಯಮಾಡುವ ಸಂಧಿಯನ್ನು ಅವರು ಎಂದೂ ವ್ಯರ್ಥ ಕಳೆದುಕೊಳ್ಳಲಿಲ್ಲ!

ಈ ಸಾಲೆಯೊಳಗಿನ ವಿದ್ಯಾರ್ಥಿಗಳು ಬರಬರುತ್ತ ಸರ್ವ ಉದ್ಯೋಗಗಳನ್ನು ಮಾಡಲಿಕ್ಕೆ ಸಿದ್ಧರಾದರು. ಇಮಾರತುಗಳನ್ನು ಕಟ್ಟೋಣ, ಇಟ್ಟಂಗಿಗಳನ್ನು ರಚಿಸೋಣ, ಬಂಡಿ, ಬಗಿ ಮೊದಲಾದವುಗಳನ್ನು ಮಾಡೋಣ, ಮಂಚ, ಪಲ್ಲಂಗಗಳನ್ನು ಸಿದ್ಧಪಡಿಸೋಣ, ಛಾಪಿಗಳನ್ನು ಹೆಣೆಯೋಣ ಇತ್ಯಾದಿ ಎಲ್ಲ ಕೆಲಸಗಳನ್ನು ವಿದ್ಯಾರ್ಥಿಗಳು ತಮ್ಮಿಂದ ತಾವೇ ಮಾಡುವರು. ಜಗತ್ತಿಗೆ ಯಾವ ಸಂಗತಿಗಳ ಅವಶ್ಯಕತೆಯಿರುವದೆಂಬದನ್ನು ನೋಡಿ ಅದರ ಗರಜನ್ನು ಪೂರೈಸುವ ಸಲುವಾಗಿ ಪ್ರಯತ್ನಮಾಡಿದರೆ ವ್ಯಾಪಾರೀ ದೃಷ್ಟಿಯಿಂದ ಅವಶ್ಯವಾಗಿ ಯಶಸ್ಸು ಬರುವದೆಂದು ಬುಕರನ ಅಭಿಪ್ರಾಯವಿತ್ತು. ಅದು ತೀರ ನಿಜವಾಗಿದೆ. ಒಕ್ಕಲತನದಲ್ಲಿಯೂ ನಿಗ್ರೋವಿದ್ಯಾರ್ಥಿಗಳು ತೀವ್ರವೇ

Digitized by ROJA MUTHIAH RESEARCH LIBRARY



ಜಾಣರಾದರು. ಈ ವಿದ್ಯಾರ್ಥಿಗಳ ಅನುಕರಣದಿಂದ ಸುತ್ತುಮುತ್ತಲಿನ ಹಳ್ಳಿಗಳ ಒಕ್ಕಲಿಗರೂ ತಮ್ಮ ಉದ್ಯೋಗದಲ್ಲಿ ಸುಧಾರಣೆಯನ್ನು ಮಾಡಹತ್ತಿದರು.

ಸಾಲೆಯು ಪ್ರಾರಂಭವಾದಮೇಲೆ ಜನರಲ್ ಆರ್ಮಸ್ಟ್ರಾಂಗ, ಮಿಸ್ ಮರ್ಕಾ, ಜನರಲ್ ಮಾರ್ಶಲ್ ಮುಂತಾದ ದೊಡ್ಡ ದೊಡ್ಡ ಗೃಹಸ್ಥರು ಅದಕ್ಕೆ ಭೆಟ್ಟಿಯನ್ನು ಕೊಟ್ಟರು. "ನಿಸ್ವಾರ್ಥಬುದ್ಧಿಯಿಂದ ಕೆಲಸಮಾಡುವ ಮನುಷ್ಯನ ಭಾರವು ಪರಮೇಶ್ವರನ ಮೇಲೆ ಬೀಳುವದು. ಹಾಗೂ ಪರಮೇಶ್ವರನು ಅದನ್ನು ವಹಿಸಿದ ಹೊರ್ತು ಎಂದೂ ಸುಮ್ಮನಿರುವದಿಲ್ಲ." ಎಂಬ ಶ್ರೀಸ್ವಾಮಿ ರಾಮತೀರ್ಥರವರ ವಚನವು ಈ ಶಾಲೆಯ ವಿಷಯಕ್ಕೆ ನಿಜವೆನಿಸಿತು. ಬುಕರ ಟೀ ವಾಶಿಂಗ್ಟನ್ನನ ಈ ಕೆಲಸಕ್ಕೆ ಮುಂದೆ ದೊಡ್ಡ ದೊಡ್ಡ ಜನರು ಒಳ್ಳೇ ಸಹಾಯಮಾಡಿದರು. ಸದ್ಯಕ್ಕೆ ಈ ಸಂಸ್ಥೆಯು ಅತ್ಯಂತ ಅನುಕರಣೀಯ ಸಂಸ್ಥೆಯಾಗಿದೆ. ಈಗ ಈ ಸಂಸ್ಥೆಯನ್ನು ಅವಲೋಕಿಸುವವರಿಗೆ ಮೊದಲು ಬುಕರನು ಈ ಸಂಸ್ಥೆಯನ್ನು ಬಹಳ ಕಷ್ಟಬಟ್ಟು ಅತ್ಯಂತ ಕಠಿಣವಾದ ಪರಿಸ್ಥಿತಿಯಲ್ಲಿ ಆರಂಭಿಸಿದನೆಂದು ಹೇಳಿದರೆ ನಿಜವೆಂದೆನಿಸಲಿಕ್ಕಿಲ್ಲ. ವಾಶಿಂಗ್ಟನ್ನನು ಅನ್ನುತ್ತಿದ್ದದ್ದೇನಂದರೆ— "ಮನುಷ್ಯನ ಯೋಗ್ಯತೆಯನ್ನು ಅವನು ಮಾಡಿದ ಕಾರ್ಯದ ಮೇಲಿಂದ ನಿರ್ಣಯಿಸುವಾಗ ಅವನು ಆ ಕಾರ್ಯಕ್ಕೆ ಬಂದ ಎಡರುಗಳಿಗೆ ಎಷ್ಟರ ಮಟ್ಟಿಗೆ ಹೆಣಗಾಡಿದನೆಂಬದನ್ನು ಲಕ್ಷಕ್ಕೆ ತರಬೇಕು." ಬುಕರನ ಈ ಅಭಿಪ್ರಾಯವು ಮನನೀಯವಾಗಿದೆ.

ಈ ಸಾಲೆಗೆ ಆರಂಭದಲ್ಲಿ ಟಸ್ಕೇಜಿಯೊಳಗಿನ ಯುರೋಪಿಯನ್ ಗೃಹಸ್ಥನೊಬ್ಬನು ಕೊಟ್ಟ ಒಂದೇ ಕುರುಡ ಕುದುರೆಯಿತ್ತು. ಆದರೆ ೧೯೧೩ ರಲ್ಲಿ ಈ ಸಂಸ್ಥೆಯಲ್ಲಿ ೨೦೦ ಕುದುರೆಗಳೂ, ೭೦೦

ಹಂದಿಗಳೂ ಇದ್ದವು. ಇವುಗಳ ಹೊರತು ಕತ್ತೆ, ಎತ್ತು, ಆಕಳು, ಕರು, ಆಡು, ಕುರಿ ಮೊದಲಾದ ಪ್ರಾಣಿಗಳ ಸಂಗ್ರಹವೂ ಅಲ್ಲಿ ಇತ್ತು. ಸದ್ಯಕ್ಕೆ ಈ ಸಾಲೆಯಲ್ಲಿ ಬೇರೆ ಬೇರೆ ೪೦ ಉದ್ಯೋಗಗಳನ್ನು ಕಲಿಸುವ ವ್ಯವಸ್ಥೆಯಿರುವದು. ಸರ್ವ ಶಿಕ್ಷಕರೂ ನಿಗ್ರೋಜನರೇ ಇದ್ದು ಶಿಕ್ಷಣವು ಪುಕ್ಕಟೆಯಾಗಿ ದೊರೆಯುತ್ತದೆ. ೧೯೦೮-೧೯೦೯ ಇಸ್ವಿಯಲ್ಲಿ ಈ ಸಾಲೆಯೊಳಗೆ ೧೪೯೪ ವಿದ್ಯಾರ್ಥಿಗಳು ಕಲಿಯುತ್ತಿದ್ದು ೧೬೭ ಶಿಕ್ಷಕರಿದ್ದರು. ಸಾಲೆಗೆ ಜೋಡಿಸಿ ದೊಡ್ಡ ದೊಡ್ಡ ಹೊಲಗಳಿದ್ದು, ಅವುಗಳಲ್ಲಿ ಒಕ್ಕಲತನದ ಹಾಗೂ ತೋಟದ ಪ್ರಯೋಗಗಳನ್ನು ವಿದ್ಯಾರ್ಥಿಗಳಿಗೆ ಪ್ರತ್ಯಕ್ಷಮಾಡಿ ತೋರಿಸುತ್ತಾರೆ. ೧೯೦೯ನೇ ಇಸ್ವಿಯಲ್ಲಿ ಶಾಲೆಯ ವಶಕ್ಕೆ ೨೩೪೫ ಎಕರೆ ಭೂಮಿಯಿತ್ತು. ಅದರಲ್ಲಿ ೧೦೦೦ ಎಕರೆ ಭೂಮಿಯು ಒಕ್ಕಲತನದ್ದಿತ್ತು. ೧೧೪೫ ಎಕರೆ ಭೂಮಿಯು ಹುಲ್ಲು ಹಾಗು ಕಟ್ಟಿಗೆ ಬೆಳೆಯಲಿಕ್ಕೆ ತಕ್ಕದ್ದಾಗಿತ್ತು. ೨೦೦ ಎಕರೆ ಭೂಮಿಯು ಸಾಲೆಯ ಕಡೆಗೆ ಇತ್ತು. ಇ. ಸ. ೧೯೦೯ ರಲ್ಲಿ ಸಾಲೆಗೆ ಬೇರೆ ಬೇರೆ ಜನರಿಂದ ಉಚಿತವಾಗಿ ದೊರೆತ ಹಣವು ೪೮೬೩೬೦೦ ರೂಪಾಯಿ ಆಗಿತ್ತು. ಸಾಲೆಯ ವಶದಲ್ಲಿದ್ದ ಸಾಮಾನುಗಳ ಬೆಲೆಯು ೩೯೧೧೮೧೦ ರೂಪಾಯಿಯಿತ್ತು. ಸಾಲೆಗೆ ಸಂಬಂಧಿಸಿದ ಬೇರೆ ಬೇರೆ ೧೦ ಕೋಣೆಗಳಿದ್ದು, ಅವುಗಳ ನಕಾಶಗಳನ್ನೂ ಕಟ್ಟುವ ಕೆಲಸವನ್ನೂ ಶಿಕ್ಷಕ-ವಿದ್ಯಾರ್ಥಿಗಳೇ ಮಾಡಿದ್ದರು. ಇಮಾರತುಗಳಿಗೆ ಉಪಯೋಗಿಸುವ ಇಟ್ಟಂಗಿಗಳನ್ನೂ ಕೂಡ ವಿದ್ಯಾರ್ಥಿಗಳೇ ಮಾಡಿಕೊಂಡಿದ್ದರು. ಸಾಲೆಗೆ *'ಸ್ಲೇಟರನಿಧಿ' ಯೊಳಗಿಂದ ಪ್ರತಿವರುಷ ೧೫ ಸಾವಿರ ರೂಪಾಯಿಗಳು ದೊರೆಯುತ್ತಿದ್ದು ಅಷ್ಟೇ ಡಾಲರುಗಳು ಸರಕಾರದಿಂದ ಸಿಗುತ್ತವೆ. ೧೯೧೨ರಲ್ಲಿ ೧೬೧೨ ಕ್ಕಿಂತ ಹೆಚ್ಚಿಗೆ ವಿದ್ಯಾರ್ಥಿಗಳೂ, ೨೦೦ ಶಿಕ್ಷಕರೂ, ಆಫೀಸರರೂ ಇದ್ದರು. ಸಂಸ್ಥೆಯ ಇಮಾರತುಗಳ ಸಂಖ್ಯೆಯು೧೪೦ ಇತ್ತು.

---

* ಶಾಲೆಗಳಿಗೆ ದೊರೆಯತಕ್ಕ ಫಂಡಿನ ಹಣ.



ಮೇಲಿನ ಸಂಗತಿಗಳನ್ನು ಓದಿನೋಡಲು ಟಸ್ಕೇಜಿ ಶಿಕ್ಷಣ ಸಂಸ್ಥೆಯು ಈಗ ಯಾವ ಸ್ಥಿತಿಯಲ್ಲಿರಬಹುದೆಂಬುದರ ಅಲ್ಪಸ್ವಲ್ಪ ಕಲ್ಪನೆಯು ಪ್ರತಿಯೊಬ್ಬರಿಗೂ ಉಂಟಾದೀತೆಂಬ ಬಗ್ಗೆ ನಂಬುಗೆಯದೆ. ಇದು ಯಾವ ಮಹಾತ್ಮನ ಕರ್ತವ್ಯನಿಷ್ಠತೆಯ ಫಲವಾಗಿರುವದೋ ಅಂಥವನ ಚರಿತ್ರೆಯು ಒಬ್ಬ ಅನುಕರಣೀಯ ವಿದ್ಯಾರ್ಥಿಯದೆಂದು ತಿಳಿದು ನಮ್ಮ ದೇಶದ ವಿದ್ಯಾರ್ಥಿಗಳು ಅದನ್ನು ಕಲಿಯಲಿಕ್ಕೆ ಬೇಡವೇ?

ಕಿರ್ಲೋಸ್ಕರ ಖಬರವೆಂಬ ಮಾಸಿಕ ಪುಸ್ತಕದ ೩ನೇ ವರ್ಷದ ೫ನೇ ಅಂಕಿನಲ್ಲಿ ಈ ಸಾಲೆಯಲ್ಲಿ ಕೆಲಸಮಾಡಿ ಮುಂದೆ ಬಂದ ಮಿ. ಕಾರ್ವ್ಹರ ಎಂಬವರ ವಿಷಯಕ್ಕೆ ಬರೆದಿರುವದೇನಂದರೆ— "ಸದ್ಯಕ್ಕೆ ಟಸ್ಕೇಜಿ ಶಾಲೆಯಲ್ಲಿಯ ಪ್ರೊಫೇಸರರಾದ ಮಿ. ಕಾರ್ವ್ಹರ ಎಂಬವರು ಅತ್ಯಂತ ಪ್ರಸಿದ್ಧಿಗೆ ಬಂದಿರುವರು. ಇವರು ನಿಗ್ರೋ ಜಾತಿಯವರಾಗಿದ್ದರೂ, ತಮ್ಮ ಬುದ್ಧಿಸಾಮರ್ಥ್ಯದಿಂದಲೂ, ಕಲ್ಪಕತೆಯಿಂದಲೂ, ಯುರೋಪಿಯನ್ನರನ್ನು ಸಹ ಕೆಳಗೆ ನೋಡಹಚ್ಚಿರುವರು. ಸಾಮಾನ್ಯತರದ ಧಾನ್ಯಗಳಿಂದ ಹಲವು ಪ್ರಕಾರದ ಉಪಯುಕ್ತ ಪದಾರ್ಥಗಳನ್ನುಂಟುಮಾಡುವದರಲ್ಲಿ ಇವರು ಪ್ರತಿ ವಿಶ್ವಕರ್ಮರೇ ಆಗಿದ್ದಾರೆ. ಇವರು ಕ್ಷುಲ್ಲಕವಾದ ಮಣ್ಣಿನಿಂದ ಎಷ್ಟೋ ಪ್ರಕಾರದ ಬಣ್ಣಗಳನ್ನು ಸಿದ್ಧಪಡಿಸಿದ್ದಾರೆ. ಸಾಧಾರಣತರದ ಬಟಾಟೆ, ಗೆಣಸುಗಳಿಂದ ಬೇರೆ ಬೇರೆ ತರದ ೧೧೨ ಪದಾರ್ಥಗಳನ್ನು ನಿರ್ಮಾಣ ಮಾಡಿರುವರು. ನಮಗೆ ನಿತ್ಯದಲ್ಲಿ ಉಪಯೋಗಬೀಳುವ ಬಯಮೂಗಿನ ಕಾಳುಗಳಿಂದ ೧೧೦ ಜಾತಿಯ ಪದಾರ್ಥಗಳನ್ನು ಹುಟ್ಟಿಸಿರುವರು. ಪ್ರೊ. ಕಾರ್ವ್ಹರ ಸಾಹೇಬರು ಅನ್ನುವದೇನಂದರೆ-ಜಗತ್ತಿನಲ್ಲಿ ಬರೇ ಬಯಮೂಗಿನ ಕಾಳುಗಳೂ, ಗೆಣಸುಗಳೂ ಶಿಲ್ಕುಳಿದರೆ ಸಾಕು. ಅಷ್ಟರಿಂದಲೇ ಮನುಷ್ಯಜಾತಿಗೆ ನಾನಾಪ್ರಕಾರದ ಪಕ್ವಾನ್ನಗಳನ್ನು ಮಾಡಿ ಉಣ್ಣಲಿಕ್ಕೆ ಬರುವದು.

---

Digitized by ROJA MUTHIAH RESEARCH LIBRARY

## ೯ನೇ ಪ್ರಕರಣ.

### ಉಪಸಂಹಾರ.

ಮನುಷ್ಯನು ಪ್ರಯತ್ನಮಾಡಿದರೆ ಪರಮೇಶ್ವರನು ಸಹ ಆಗಬಲ್ಲನು. ( **नर करणी करेगातो नरका नारायण होजायगा** ) ಈ ಸಂಗತಿಯು ಬುಕರ ಟೀ ವಾಶಿಂಗ್ಟನ್ನನ ಚರಿತ್ರೆಯಿಂದ ಚನ್ನಾಗಿ ವ್ಯಕ್ತವಾಗುವಂತಿದೆ. ಚಿಕ್ಕಂದಿನಲ್ಲಿ ಬುಕರನ ಪರಿಸ್ಥಿತಿಯು ಗೊತ್ತಿದ್ದ ಮನುಷ್ಯನಿಗೆ ಅವನು ಮುಂದೆ ಇಷ್ಟು ಪ್ರಯತ್ನಶಾಲಿಯೂ, ಕೀರ್ತಿವಂತನೂ ಆದಾನೆಂಬ ಕಲ್ಪನೆಯು ಕೂಡ ಹುಟ್ಟುವ ಸಂಭವವಿಲ್ಲ. ಬುಕರನಂತಹ ನೀಚಸ್ಥಿತಿಯ ಮನುಷ್ಯನು ಇಷ್ಟು ಅತ್ಯುನ್ನತ ಪದವಿಗೆ ಏರಬಹುದೆಂದು ಮಾನವೀ ಮನಸ್ಸಿಗೆ ಅನಿಸುವದು ಸಹ ಶಕ್ಯವಿಲ್ಲ; ಆದರೆ ಜಗತ್ತಿನ ಚಿಂತೆಯನ್ನು ವಹಿಸುವ ಪರಮೇಶ್ವರನಿಗೆ ಪ್ರಯತ್ನಶಾಲಿಗಳ ವಿಷಯಕ್ಕೆ ಹೆಚ್ಚು ಚಿಂತೆಯನ್ನು ವಹಿಸಬೇಕಾಗುತ್ತದೆ. ರತ್ನಗಳನ್ನು ಪರೀಕ್ಷಿಸುವವನು ರತ್ನವು ಕೆಸರಿನಲ್ಲಿ ಬಿದ್ದಿದ್ದರೂ ಅದನ್ನು ಹೊರಗೆ ತೆಗೆದು ಝುಳಝುಳಮಾಡಿ ಜಗತ್ತಿನ ಮುಂದಿಡುವಂತೆ ಪರಮೇಶ್ವರನೂ, ನರರತ್ನವು ಬೇಕಾದಂಥ ಕೀಳುಸ್ಥಿತಿಯಲ್ಲಿರಲಿ, ಅದನ್ನು ಜಗತ್ತಿನ ಮುಂದೆ ತಂದು ಅದರ ಯೋಗ್ಯತೆಯನ್ನು ಜಗತ್ತಿನ ನಿದರ್ಶನಕ್ಕೆ ತಂದುಕೊಡುವನು. ಎಷ್ಟೋ ಜನರು ಪರಿಸ್ಥಿತಿಯ ಕಾರಣವನ್ನು ತೋರಿಸಿ ಕಿಂಕರ್ತವ್ಯಮೂಢರಾಗಿ ಸ್ವಸ್ಥ ಕೂಡ್ರುತ್ತಾರೆ. ಆದರೆ ದೊಡ್ಡವರು ಪರಿಸ್ಥಿತಿಯನ್ನೇ ಬದಲಿಸಿಬಿಡುತ್ತಾರೆ! ಬುಕರನ ಚರಿತ್ರೆಯನ್ನು ಓದುವವರಿಗೆ " ಜಗತ್ತಿನಲ್ಲಿ ಅಶಕ್ಯವಾದದ್ದು ಯಾವದೂ ಇಲ್ಲ " ಎಂಬ ನೇಪೋಲಿಯನನ ತತ್ವವು ಹೊಳೆಯದಿರದು. ಇರಲಿ.

ಟಸ್ಕೇಜಿಯ ಸಾಲೆಯು ಲೋಕೋಪಯೋಗಿಯಾದ ಸಂಸ್ಥೆಯೆಂದು ಕಂಡುಬಂದಬಳಿಕ ಎಷ್ಟೋ ಶ್ರೀಮಂತ ಗೃಹಸ್ಥರು



ವಾಶಿಂಗ್ಟನ್ನನಿಗೆ ಹಲವು ರೀತಿಯಿಂದ ಸಹಾಯಮಾಡಿದರು ಅದರಿಂದ ಸದ್ಯಕ್ಕೆ ಜಗತ್ತಿಗೆ ಆಶ್ಚರ್ಯವನ್ನುಂಟುಮಾಡುವಂಥ ಶಾಲೆಯು ಆದಾಗಿದೆ. ಬರೇ ಬಾಯಿಂದ ಬೇಕಾದಷ್ಟು ಬದರಾಡಿ ಕೈಯಿಂದ ಸ್ವಲ್ಪಸಹ ಕೆಲಸವನ್ನು ಮಾಡದಂಥ ಮನುಷ್ಯನಿಗೆ ಯಾರೂ ಸಹಾಯ ಮಾಡುವದಿಲ್ಲ. ಆದರೆ ಒಬ್ಬಾನೊಬ್ಬ ಮನುಷ್ಯನು ಅಂತಃಕರಣಪೂರ್ವಕವಾಗಿ ಯಾವದೊಂದು ಕಾರ್ಯವನ್ನು ಮಾಡಿ, ಆ ವಿಷಯದಲ್ಲಿ ಒಂದು ಚಕಾರ ಶಬ್ದವನ್ನಾದರೂ ಉಚ್ಚರಿಸದಿದ್ದರೂ, ಜಗತ್ತು ಅವನಿಗೆ ಸಹಾಯವನ್ನು ಮಾಡಿ ಅವನನ್ನು ಮುಂದಕ್ಕೆ ತಂದ ಹೊರತು ಎಂದೂ ಸುಮ್ಮನಿರುವದಿಲ್ಲ. ವಾಶಿಂಗ್ಟನ್ನನ ಪರಿಶ್ರಮವನ್ನು ನೋಡಿ ಅವನ ಸಹೋದರರೂ, ಮಿತ್ರರೂ, ದೇಶದೊಳಗಿನ ದೊಡ್ಡ ದೊಡ್ಡ ಶ್ರೀಮಂತರೂ ಅವನಿಗೆ ಒಳ್ಳೇ ಸಹಾಯವನ್ನು ಮಾಡಿದರು.

ಟಸ್ಕೇಜಿಯ ಶಿಕ್ಷಣಸಂಸ್ಥೆಯು ಊರ್ಜಿತಾವಸ್ಥೆಗೆ ಬಂದಬಂದಂತೆ ಬುಕರ ಟೀ ವಾಶಿಂಗ್ಟನ್ನನ ಕಡೆಗ ಜನರ ಲಕ್ಷ್ಯವು ಎಳೆಯಹತ್ತಿತು. ಕಪ್ಪು ಕೆಂಪುವರ್ಣದ ಅನೇಕ ಗೃಹಸ್ಥರು ಮೇಜವಾನಿಯ ನಿಮಿತ್ತದಿಂದ ಅವನನ್ನು ತಮ್ಮ ಮನೆಗೆ ಕರೆದೊಯ್ಯಹತ್ತಿದರು! ಹಂಪಟನ್ನಿಗೆ ಕಲಿಯುದಕ್ಕೆ ಹೋಗುವಾಗ ಯಾವ ಭೋಜನಗೃಹದಲ್ಲಿ ನಿಂತುಕೊಳ್ಳಲಿಕ್ಕೆ ಸಹ ಬುಕರನಿಗೆ ಪ್ರತಿಬಂಧವಾಗಿತ್ತೋ ಅಲ್ಲಿಯೇ ಈಗ ಅವನಿಗೆ ಎಷ್ಟೋ ಸಾರೆ ಮೇಜವಾನಿಯನ್ನು ಸ್ವೀಕರಿಸುವ ಪ್ರಸಂಗ ಬಂದಿತು! ಯಾವ ಉಪಹಾರಗೃಹದಲ್ಲಿ ಬುಕರನು ಆಳಾಗಿ ದುಡಿದನೋ ಅದೇ ಉಪಹಾರಗೃಹದ ಯಜಮಾನನು ಬುಕರನನ್ನು ಈಗ ಆ ಗೃಹದಿಂದ ಕರೆದು ತಂದು ಸ್ವಾಗತ ಮಾಡಿದನು! ಯಾವ ರಿಚಮಂಡ ಶಹರದಲ್ಲಿ ಬುಕರನು ಎರಡು ದಿವಸ ಉಪವಾಸವಿದ್ದನೋ ಅದೇ ಶಹರದಲ್ಲಿ ದೊಡ್ಡ ದೊಡ್ಡ ಜನರು ಬುಕರನನ್ನು ಬೀಗರಂತೆ ಸತ್ಕರಿಸಿದರು! ಹಾಗೂ ಯಾವ ರಾಜಮಾರ್ಗದ ಬದಿಗಿರುವ ದಿನ್ನೆಯಲ್ಲಿ ಬುಕರನು ಎರಡು ದಿವಸ ರಾತ್ರಿಯನ್ನು ಕಳೆದನೋ



Digitized by ROJA MUTHIAH RESEARCH LIBRARY

ಅದೇ ರಾಜಮಾರ್ಗದಲ್ಲಿ ಮೋಟಾರಗಳ ಮೇಲೆ ತಿರುಗಾಡುವ ಪ್ರಸಂಗವು ಅವನಿಗೆ ಅನೇಕ ಸಾರೆ ಬಂದಿತು! ವಾರದೊಳಗೆ ಒಂದು ಸಾರೆ ಮಾತ್ರ ಕಾಕವಿಯು ಸಿಕ್ಕರೆ ಧನ್ಯನೆಂದು ತಿಳಿಯುವ ಬುಕರನಿಗೆ ದಿನಾಲು ಭೋಜನದ, ಅದರೊಳಗೂ ಪಕ್ವಾನ್ನ ಭೋಜನದ ಆಮಂತ್ರಣವು ಬರಹತ್ತಿತು! ವಯಸ್ಸಿನ ೬ನೇ ವರುಷದಲ್ಲಿ ಒಂದು ಸಾಧಾರಣ ತರದ ಟೊಪ್ಪಿಗೆಯು ಸಿಕ್ಕದ್ದರಿಂದ ಹರ್ಷಭರಿತನಾದ ಬುಕರನಿಗೆ ಮುಂದೆ ತಾನು ಇಂತಹ ವೈಭವಸಂಪನ್ನ ಸ್ಥಿತಿಗೆ ಮುಟ್ಟೇನೆಂದು ಅನಿಸಿರಲಿಕ್ಕಿಲ್ಲ! ಮಾಲ್ಡನ್‌ದಿಂದ ಹಂಪಟನ್ನಿಗೆ ಪ್ರವಾಸಮಾಡುವದು ಯಾವನಿಗೆ ಅಶಕ್ಯವಾಯಿತೋ, ಹಾದಿಯಲ್ಲಿ ಯಾರೂ ವಿಚಾರಿಸದಿದ್ದದರಿಂದ ಯಾವನು ಹಲವು ಉಪವಾಸಗಳನ್ನು ಮಾಡಿದನೋ ಅದೇ ಬುಕರನು, ದೊಡ್ಡವನಾದ ಬಳಿಕ ಹಾಲಂಡ, ಬೆಲ್ಜಿಯಂ, ಫ್ರಾನ್ಸ, ಇಂಗ್ಲಂಡ ಮುಂತಾದ ಅನೇಕ ದೇಶಗಳಲ್ಲಿ ಸುಖ-ಪ್ರವಾಸ ಮಾಡಿಬಂದನು! ಹಾಗೂ ಆಯಾ ದೇಶಗಳಲ್ಲಿಯ ದೊಡ್ಡದೊಡ್ಡ ಜನರಿಂದ ಮೇಜವಾನಿಯನ್ನು ಹೊಂದಿದನು! ಇಂಗ್ಲಂಡದಲ್ಲಿರುವಾಗ ಮಹಾರಾಣಿ ವಿಕ್ಟೋರಿಯಾ ಇವರು, ಇವನಿಗೂ ಇವನ ಹೆಂಡತಿಗೂ ಭೆಟ್ಟಿಯನ್ನು ಕೊಟ್ಟರು!! ಅಮೇರಿಕದೊಳಗಿನ ಅತ್ಯಂತ ಪ್ರಸಿದ್ಧ ಯುನಿವ್ಹರ್ಸಿಟಿಯೆಂದರೆ, ಹಾರವರ್ಡ ಯುನಿವ್ಹರ್ಸಿಟಿಯು.* ಈ ಯುನಿವ್ಹರ್ಸಿಟಿಯೂ ಪ್ರೊ. ಬುಕರ ಟಿ ವಾಸಿಂಗ್ಟನ್ನನನ್ನು ಬಹಳ ಪ್ರೇಮದಿಂದ ಬರಮಾಡಿಕೊಂಡು ಅವನಿಗೆ ತಮ್ಮ ಸಂಸ್ಥೆಯ 'ಮಾಸ್ಟರ್ ಆಫ್ ಆರ್ಟ್ಸ್', ಪದವಿಯನ್ನು ಸಮರ್ಪಣ ಮಾಡಿತು. ಈ ಸಮಾರಂಭಕ್ಕೆ ಆ ಪ್ರಾಂತದ ಗವ್ಹರ್ನರರೂ ಸಹ ಬಂದಿದ್ದರು. ದೊಡ್ಡದೊಡ್ಡ ವಿಂದ್ವಾಂಸರೂ, ಶ್ರೀಮಂತರೂ ಸಮಾರಂಭದಲ್ಲಿ ಮಿಲಿತರಾಗಿದ್ದರು. ಹಂಪಟನ್ ಸಂಸ್ಥೆಯಲ್ಲಿ ಪ್ರವೇಶಿಸುವದಕ್ಕೆ ಮಿಸ್. ಮೇರಿ ಮಕಿ ಎಂಬವರ ಮೋರೆಯ ಕಡೆಗೆ ನೋಡುವ ಹಾಗೂ

* ವಿಶ್ವವಿದ್ಯಾಲಯವು.



ಕೋಣೆಯನ್ನು ಉಡುಗಿ ಝಳಝಳಮಾಡಿ ಪ್ರವೇಶಪರೀಕ್ಷೆಯನ್ನು ಕೊಡುವ ಬುಕರನಿಗೆ ಹಾರವರ್ಡ ಯುನಿವ್ಹರ್ಸಿಟಿಯ, ಎಮ್. ಏ. ಪದವಿಯು ಹೇಗೆ ಸಿಕ್ಕಿತೆಂಬದು ಕೇವಲ ಸರ್ವಜ್ಞನಾದ ಪರಮೇಶ್ವರನಿಗೇ ಮಾತ್ರ ಗೊತ್ತಿರಬಹುದು!

ವ್ಯಾಖ್ಯಾತನೆಂಬ ದೃಷ್ಟಿಯಿಂದಾದರೂ ವಾಶಿಂಗ್ಟನ್ನನ ಯೋಗ್ಯತೆಯು ಚನ್ನಾಗಿ ಬೆಳೆದಿತ್ತು. "ಅಟಲಾಂಟಾ ಪ್ರದರ್ಶನ" ದಲ್ಲಿ ಆದ ಭಾಷಣದಿಂದಂತೂ ಅವನ ಕೀರ್ತಿಮಂದಿರಕ್ಕೆ ಕಳಸವನ್ನೇ ಇಟ್ಟಂತಾಯಿತ.! ಈ ಭಾಷಣದ ಸ್ತುತಿಯು ಆ ಕಾಲದ ಎಲ್ಲ ವರ್ತಮಾನ ಪತ್ರಗಳಲ್ಲಿಯೂ ಓದಲಿಕ್ಕೆ ಸಿಗುತ್ತಿತ್ತು. ಆಗಿನ ಪ್ರೆಸಿಡೆಂಟನು ಈ ಭಾಷಣವನ್ನು ಓದಿದೊಡನೆಯೇ ವಾಶಿಂಗ್ಟನ್ನನ ಕಡೆಗೆ ಅಭಿನಂದನಪರವಾದ ಪತ್ರವನ್ನು ಕಳಿಸಿದನು! ಇರಲಿ. ಇಂತಹ ಉಚ್ಚಪದವಿಗೆ ಮುಟ್ಟಿದ ಈ ಮಹಾತ್ಮನು ೧೯೧೫ನೇ ಇಸ್ವಿಯ ನವ್ಹಂಬರ ತಿಂಗಳ ೧೪ನೇ ತಾರೀಖಿಗೆ ಪರಲೋಕವನ್ನೈದಿದನು!

ಸಾರಾಂಶ:—ಬುಕರನಂತಹ ಕಪ್ಪುದೊಗಲಿನ, ನೀಚಕುಲದ ದಾರಿದ್ರ್ಯಾವಸ್ಥೆಯಲ್ಲಿ ಜನಿಸಿದ ಮನುಷ್ಯನು ಶಕ್ಯವಿದ್ದಷ್ಟು ಮಟ್ಟಿಗೆ ಮಾನವನ್ನು ಹೊಂದಿದನು. ಅವನ ಪ್ರಯತ್ನಕ್ಕೆ ತಕ್ಕಂತೆ ಯಶಸ್ಸು ದೊರೆಯಿತು. ಆದರೆ ಅವನ ಈ ಎಲ್ಲ ಯಶಸ್ಸಿನ ಮೂಲಬೀಜವು ಅವನ ಅಪೂರ್ವ ಸ್ವಾರ್ಥತ್ಯಾಗದಲ್ಲಿ ಇರುವದು. ಮೋಹದ ಕಾರಣಗಳನ್ನು ಬದಿಗಿರಿಸಿ, ಇತರ ಯಾವ ವಿಷಯಗಳಲ್ಲಿಯೂ ಸೇರದೆ, ಹೊಟ್ಟೆಗೆ ಕಡಿಮೆಮಾಡಿಕೊಂಡಾದರೂ ತನ್ನ ಜಾತಿಯ ಉನ್ನತಿಗಾಗಿಯೇ ಅವನು ತನ್ನ ಆಯುಷ್ಯವನ್ನೆಲ್ಲ ವೆಚ್ಚಮಾಡಿದನು. ಇದೇ ಅವನ ಸ್ವಾರ್ಥತ್ಯಾಗವು. ಅವನು ರಾಜಕಾರಣದಲ್ಲಿ ಬಿದ್ದಿದ್ದರೆ ಸಹಜವಾಗಿಯೇ ಒಂದು ಪ್ರಾಂತದ ಗವ್ಹರ್ನರನಾಗುತ್ತಿದ್ದನು. ಹಾಗೂ ಒಬ್ಬ ದೊಡ್ಡ ಮುತ್ಸದ್ದಿಯೆಂದು ಪ್ರಸಿದ್ಧನಾಗುತ್ತಿದ್ದನು. ಆದರೆ ಅವನ ಜಾತಿಯ ಉನ್ನತಿಯಾಗುತ್ತಿತ್ತೇನು? ಬುಕರನು ರಾಜಕಾರಣದಲ್ಲಿ ಸೇರ

Digitized by ROJA MUTHIAH RESEARCH LIBRARY

ಬೇಕೆಂದು ಹಲವು ಜನರು ಆಗ್ರಹವನ್ನು ಮಾಡಿದರು; ಆದರೆ ತನ್ನ ಜಾತಿಯ ಉದ್ಧಾರಕ್ಕಾಗಿ ಕಂಕಣವನ್ನು ಕಟ್ಟಿದ ಬುಕರನು ಈ ಆಗ್ರಹವನ್ನು ಲಕ್ಷಕ್ಕೆ ತರಲಿಲ್ಲ. ನಮ್ಮ ಕಡೆಯ ರಾಜಕಾರಣದಲ್ಲಿ ಸೇರಿದ ದೇಶಭಕ್ತರು ಈ ಸಂಗತಿಯನ್ನು ಅವಶ್ಯವಾಗಿ ಲಕ್ಷದಲ್ಲಿಡತಕ್ಕದ್ದು.

ಅತ್ಯಂತ ಸ್ವಾರ್ಥತ್ಯಾಗಿಯಾದ ಒಬ್ಬ ಮನುಷ್ಯನೂ ಕೂಡ ಬೇಕಾದಂಥ ಬಿಕ್ಕಟ್ಟಾದ ಕೆಲಸವನ್ನು ಮಾಡಲಾಪನು, ಎಂಬದು ವಾಸಿಂಗ್ಟನ್ನನ ಚರಿತ್ರೆಯ ಮೇಲಿಂದ ಕಂಡುಬರುವದು. ಗುಲಾಮಗಿರಿಯಂಥ ಸೇವಾವೃತ್ತಿಯಿಂದ ಕಂಗೆಟ್ಟುಹೋದ, ಹಾಗೂ ಅತ್ಯಂತ ನೀಚ ಜಾತಿಯವರೆಂದು ತಿಳಿಯಲ್ಪಡುತ್ತಿದ್ದ, ನಿಗ್ರೋಜನರನ್ನು ಉದ್ಧರಿಸುವ ಕೆಲಸವು ಸುಲಭವಾದದ್ದಿದ್ದಿಲ್ಲ. ಆದರೆ ಒಬ್ಬನೇ ಒಬ್ಬ ಬುಕರನು ಈ ಕೆಲಸವನ್ನು ಕೊನೆಗಾಣಿಸಿದನು. ನಿಗ್ರೋಜನರಂತೆಯೇ ನಮ್ಮ ಕಡೆಯ ಅಸ್ಪೃಶ್ಯವರ್ಗದ ಜನರು ತೀರ ಕೀಳಸ್ಥಿತಿಯಲ್ಲಿದ್ದಾರೆ. ಅವರ ಉದ್ಧಾರವಾದರೂ ಅವರೊಳಗೆ ಒಬ್ಬ ಯೋಗ್ಯಮನುಷ್ಯನು ನಿರ್ಮಾಣವಾದ ಹೊರತು ಆಗುವದು ಶಕ್ಯವಿಲ್ಲ. ತನ್ನನ್ನು ತಾನೇ ಉದ್ಧರಿಸಿಕೊಳ್ಳಲಿಕ್ಕೆ ಬೇಕು. ಎರಡನೆಯವರಿಂದ ಈ ಕೆಲಸವು ಸಮಾಧಾನಕಾರಕವಾಗಿ ಆಗುವದಿಲ್ಲ. ಭಗವಾನ್ ಶ್ರೀಕೃಷ್ಣನು ಸ್ವತಃ ಸಹಾಯಕನಾಗಿರುತ್ತಿದ್ದರೂ, ಅವನು ಅರ್ಜುನನಿಗೆ "ಉದ್ಧರೇದಾತ್ಮನಾऽತ್ಮಾನಂ ನಾತ್ಮಾನಮವಸಾದಯೇತ್" ಎಂಬ ಉಪದೇಶವನ್ನು ಮಾಡಿದ್ದಾನೆ. ಅದರ ರಹಸ್ಯವಾದರೂ ಇದೇ ಇರುವದು.

ಕೊನೆಗೆ "I am the Engine and my Lord is the driver" (ನಾನು ಎಂಜನ್ ಇದ್ದೇನೆ. ಪರಮೇಶ್ವರನು ನನ್ನ ಡ್ರಾಯವ್ಹರನಿದ್ದಾನೆ.) ಎಂಬ ಶ್ರೀಸ್ವಾಮಿ ವಿವೇಕಾನಂದರ ಉಕ್ತಿಗಳ ಮೇಲೆ ನನ್ನ ನಂಬುಗೆಯಿದ್ದದರಿಂದ, ಯಾವ ಚರಣಪ್ರತಾಪದಿಂದ ಈ ಚರಿತ್ರಪುಷ್ಪವು ವಿಕಸಿತವಾಯಿತೋ ಆ ಚರಣಗಳಲ್ಲಿಯೇ ಇದನ್ನು ಅರ್ಪಿಸಿ ವಾಚಕರ ರಜೆಯನ್ನು ತಕ್ಕೊಳ್ಳುತ್ತೇನೆ.

---

Digitized by ROJA MUTHIAH RESEARCH LIBRARY

ದಿನಾಂಕ ಸೂಚಿ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

ಸರಸ್ವತಿ ಭಂಡಾರ

ವಿ. ಸೂ: ೧೫ ದಿನಗಳಿಗಿಂತ ಹೆಚ್ಚು ಕಾಲ ಯಾರೂ ಪುಸ್ತಕವನ್ನಿಟ್ಟುಕೊಳ್ಳಲಾಗದು.

| ಹಿಂದಿರುಗಿಸುವ ದಿನ | ಹಿಂದಿರುಗಿಸುವ ದಿನ |
|---|---|
| | |

ಲೇಖಕ:

ಪುಸ್ತಕಸೂಚಿ

ವ. ಸಂ: V, 73ಟ BUK N24

ಕ್ರ. ಸಂ: 3190

ವ. ಸಂ: V, 73ಟ BUK N24

ಕ್ರ. ಸಂ: 3190.

ಕ. ಸಾ. ಪ.
ಗ್ರಂಥ ಭಂಡಾರ

Digitized by ROJA MUTHIAH RESEARCH LIBRARY

ಬೆಳಗಾಂವಿಯೊಳಗೆ ದೇವೇಂದ್ರಪ್ಪಾ ಘಡೆಪ್ಪಾ ಚೌಗುಲೆ ಇವರು ತಮ್ಮ
" ಶ್ರೀಮಹಾವೀರ " ಮುದ್ರಣಾಲಯದಲ್ಲಿ ಮುದ್ರಿಸಿದರು.

ಮತ್ತು

[illegible]ಳಕೃಷ್ಣ ದೇವಣಭಟ್ಟ ಜೋಶಿ ಇವರು
ಹಿರೇಬಾಗೇವಾಡಿಯಲ್ಲಿ ಪ್ರಕಟಿಸಿದರು.

Digitized by ROJA MUTHIAH RESEARCH LIBRARY